(ಶ್ರೀ ಎಂ. ಎಸ್. ಕೃಷ್ಣನ್)

ಹಾಗೆ ಮುಖ್ಯ ಮಂತ್ರಿಗಳು ಹೋಗಿ ಚರ್ಚೆ ಮಾಡಿಕೊಂಡು ಬಂದರೆ ಸಂಶಯಕ್ಕೆ ಎಡೆಕೊಟ್ಟಂತಾಗುತ್ತದೆ. ರಾಜ್ಯದ ಜನತೆಯ ಹಿತಕ್ಕೆ ಧಕ್ಕೆ ಬರಬಹುವುದು ಎಂಬ ಅನುಮಾನವಿದೆ. ಆದುದರಿಂದ ಇಲ್ಲಿ ಇದರ ಬಗ್ಗೆ ಚರ್ಚೆಗೆ ಅವಕಾಶಮಾಡಿಕೊಡಬೇಕು ಮತ್ತು ಚನ್ನಬಸಪ್ಪನವರಾಗಲೀ ಮುಖ್ಯ ಮಂತ್ರಿಗಳಾಗಲೀ ಹೇಳಿಕೆ ಕೊಡಬೇಕು.

ಅಧ್ಯಕ್ಷರು.—ನೋಟೀಸನ್ನು ಚೀಫ್ ಮಿನಿಸ್ಟರ್‌ರವರ ಆಫೀಸಿಗೆ ಕಳುಹಿಸಿಕೊಟ್ಟಿದ್ದೇವೆ. ಮುಖ್ಯಮಂತ್ರಿಗಳಾಗಲೀ ಅಥವಾ ಚನ್ನಬಸಪ್ಪನವರು ಆಗಲೀ ಸಾಯಂಕಾಲದೊಳಗೆ ಉತ್ತರ ಕೊಡಬಹುದು.

Terminating the Local Candidates

ಶ್ರೀ ಕೋಣಂದೂರು ಲಿಂಗಪ್ಪ.—ತಾರೀಖು 29-3-1973 ರಂದು ಎಲ್ಲಾ ಇಲಾಖೆಯಲ್ಲಿರುವ ಲೋಕಲ್ ಕ್ಯಾಂಡಿಡೇಟ್‌ಗಳನ್ನು ಏಪ್ರಿಲ್ 30 ಆದ ಮೇಲೆ ಬರ್ತರಫ್ ಮಾಡುತ್ತಾರೆ, ಅವರ ಬಗ್ಗೆ ಒಂದು ನೋಟೀಸ್ ಕಳುಹಿಸಿದ್ದೇ. ಸರ್ಕಾರದವರು ತಕ್ಷಣ ಉತ್ತರ ಕೊಡಬೇಕು.

ಅಧ್ಯಕ್ಷರು.—ಅದನ್ನು ನೋಡೋಣ.

Supply of Electricity to Tamilnadu

ಎಂ. ಎಸ್. ಕೃಷ್ಣನ್.—ಮಾನ್ಯ ಅಜೀಜ್‌ಸೇಠ್‌ರವರು ತಮಿಳುನಾಡು ರಾಜ್ಯದೊಡನೆ ವಿದ್ಯುಚ್ಛಕ್ತಿ ಸರಬರಾಯಿ ಬಗ್ಗೆ ಮಾಡಿಕೊಂಡ ಅಗ್ರಿಮೆಂಟ್ ಬಗ್ಗೆ 312 ರೂಲಿನ ಕೆಳಗೆ ಒಂದು ನೋಟೀಸ್ ಕೊಟ್ಟಿದ್ದೇನೆ. ಅದಕ್ಕೆ ಉತ್ತರ ಕೊಡಿಸಿಕೊಡಬೇಕು.

ಶ್ರೀ ಎಚ್. ಎಂ. ಚನ್ನಬಸಪ್ಪ.—ಅದರ ಬಗ್ಗೆ ಸಾಯಂಕಾಲ ಬೇಕಾದರೆ ಹೇಳಿಕೆ ಕೊಡುತ್ತೇನೆ.

Disfiguring the Statue of Dr. Ambedkar

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ.—ರಾಜ್ಯ ನಿರ್ಮಾಣ ಮಾಡಿದ ಮಹಾ ವ್ಯಕ್ತಿ, ಡಾ. ಅಂಬೇಡ್ಕರ್‌ರವರ ಪ್ರತಿಮೆಯನ್ನು ಕೆಡಿಸಿದ್ದಾರೆ, ಇದರ ಬಗ್ಗೆ ಸ್ಟೇಟ್‌ಮೆಂಟನ್ನು ಯಾವಾಗ ಕೊಡುತ್ತಾರೆ ?

ಅಧ್ಯಕ್ಷರು.—ಮುಖ್ಯಮಂತ್ರಿಗಳು ಬರಲಿ, ಬಂದ ಮೇಲೆ ನೋಡೋಣ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ.—ಆದಷ್ಟು ಜಾಗ್ರತೆ ಸಮಾಚಾರ ತರಿಸಿ ಈ ಮನೆಗೆ ಹೇಳಿಕೆ ಕೊಡುವಂತೆ ಮಾಡಬೇಕು.

BUDGET ESTIMATES FOR 1973-74

Demands for Grants

Demand Nos. 20, 38, and 51 (Debate continued)

† ಶ್ರೀ ಎಂ. ಮಲ್ಲಪ್ಪ (ಬೀರೂರು).—ಸನ್ಮಾನ್ಯ ಅಧ್ಯಕ್ಷಣಿಯವರೇ, ಸಚಿವರು ಈ ಮನೆಯಲ್ಲಿ ಮಂಡಿಸಿರುವ ವ್ಯವಸಾಯ ಅರಣ್ಯ ಇಲಾಖೆಗಳ ಹಾಗೂ ಅಗ್ರಿಕಲ್ಚರ್‌ಗೆ ಸಂಬಂಧಪಟ್ಟ ಬೇಡಿಕೆಗಳಿಗೆ ನನ್ನ ಬೆಂಬಲವನ್ನು ಸೂಚಿಸುತ್ತ ಒಂದೆರಡು ಸಲಹೆಗಳನ್ನು ಈ ಸಂದರ್ಭದಲ್ಲಿ ನೀಡಬಯಸುತ್ತೇನೆ.

ನಮ್ಮ ದೇಶ ವ್ಯವಸಾಯಕ್ಕೆ ಪ್ರಾಧಾನ್ಯವಾದದ್ದು. ಶೇಕಡ 80 ಭಾಗ ಜನ ವ್ಯವಸಾಯವನ್ನೇ ಅವಲಂಬಿಸಿದ್ದಾರೆ. ವ್ಯವಸಾಯದಲ್ಲಿ ದುಡಿದು ತಮ್ಮ ನಿತ್ಯ ಜೀವನವನ್ನು ನಡೆಸುವ ಪ್ರವೃತ್ತಿ ನಮ್ಮ ದೇಶಕ್ಕೆ ತಕ್ಕದ್ದಾಗಿದೆ. ಅಂಥದರಲ್ಲಿ ವ್ಯವಸಾಯ ಬೆಳವಣಿಗೆ ಆಗದಿದ್ದರೆ ವ್ಯವಸಾಯಗಾರನ ಸ್ಥಿತಿಗತಿಗಳು ಉತ್ತಮ ಆಗದಿದ್ದರೆ ನಿಜವಾಗಿ ನಮ್ಮ ದೇಶವನ್ನು ಪ್ರಗತಿ ಪಥದಲ್ಲಿ ನಾವು ಕೊಂಡೊಯ್ಯುವುದಕ್ಕೆ ಸಾಧ್ಯವಿಲ್ಲ ಎನ್ನುವುದು ಎಲ್ಲರೂ ಒಪ್ಪತಕ್ಕ ಮಾತು.

ಇದಕ್ಕೆ ಸಂಬಂಧಪಟ್ಟ ವರಧಿಗಳಲ್ಲಿ ಕೊಟ್ಟಿರುವಂತೆ ನಮ್ಮ ದೇಶದಲ್ಲಿ ವಿವಿಧ ಪ್ರವೃತ್ತಿಯಲ್ಲಿ ತೊಡಗಿರುವ ಜನ ವ್ಯವಸಾಯಕ್ಕೆ ಯೋಗ್ಯವಾದ 104 ಲಕ್ಷ ಹೆಕ್ಟೇರ' ಪ್ರದೇಶದ ಭೂಮಿಯನ್ನು ಉತ್ತು ಬೆಳೆಯನ್ನು ಬೆಳೆಯುತ್ತಾ ಇದ್ದಾರೆ. ಇದರಲ್ಲಿ ಸರಕ್ಕಾರ ಸುಮಾರು ಶೇಕಡ 14 ಭಾಗೆ ಮಾತ್ರ ನೀರನ್ನು ಒದಗಿಸಿ ಆಮೂಲಕ ಉತ್ಪನ್ನತೆಗೆಯುತಕ್ಕ ಒಂದು ಸಂದರ್ಭ ಒದಗಿದೆ. ನಮ್ಮ ದೇಶ ಸ್ವಾತಂತ್ರ್ಯವಾಗಿ 25 ವರ್ಷಗಳಾದರೂ ಕೂಡ ನಾವು ಆಹಾರದ ವಿಷಯದಲ್ಲಿ ಸ್ವಾವಲಂಬನೆ ಗಳಿಸಿಲ್ಲ. ಅಂಕಿಅಂಶಗಳು ನೋಡಿದರೆ ನಾವು ವ್ಯವಸಾಯದ ಅಭಿವೃದ್ಧಿಗಾಗಿ ಅಷ್ಟಾಗಿ ಲಕ್ಷ್ಯ ಕೊಟ್ಟಿಲ್ಲ ಎಂದು ಹೇಳಿದರೆ ಅದು ಅತಿಶಯೋಕ್ತಿಯಲ್ಲ. ಆಹಾರ ಬೆಳೆ ಬೆಳೆಯುವ ರೈತರಿಗೆ ಹೆಚ್ಚು ಉತ್ತೇಜನ ಕೊಡುವ ದೃಷ್ಟಿಯಿಂದ ಸರ್ಕಾರದವರು ಹೆಚ್ಚು ಹೆಚ್ಚು ಆಹಾರ ಬೆಳೆಯುವ ಯೋಜನೆಯಲ್ಲಿ ಜನರಿಗೆ ಹೆಚ್ಚು ಸಹಾಯ ಸೌಕರ್ಯವನ್ನು ಒದಗಿಸುವುದು ಅವಶ್ಯಕ ಮತ್ತು ಅಗತ್ಯ ಎನ್ನುವ ವಿಷಯವನ್ನು ನಾನು ಒತ್ತಿ ಹೇಳಬಯಸುತ್ತೇನೆ. ಈ ದಿಶೆಯಲ್ಲಿ ಉತ್ತಮವಾದ ಬೀಜವನ್ನು, ಒಳ್ಳೆಯ ಗೊಬ್ಬರವನ್ನು ಸಕಾಲಕ್ಕೆ ಸರಿಯಾದ ಹಣದ ಸಹಾಯವನ್ನು ಕೊಡಬೇಕಾದುದು ಅವಶ್ಯಕ. ತಮ್ಮ ವರದಿಯಲ್ಲಿ ತಿಳಿಸಿರುವಂತೆ ಇಂಟೆನ್ಸೀವ್ ಅಗ್ರಿಕಲ್ಚರ್ ಪ್ರೋಗ್ರಾಂ 12 ಜಿಲ್ಲೆಗಳಿಗೆ ಅಳವಡಿಸಿದ್ದಾರೆ. ಆದರೆ ಆ ಸೌಕರ್ಯವನ್ನು ಒದಗಿಸಿಲ್ಲ. ಆದರೆ ಆ ಸೌಕರ್ಯಗಳನ್ನು ಆದಷ್ಟು ಬೇಗ ಎಲ್ಲಾ ಜಿಲ್ಲೆಗಳಿಗೂ ಒದಗಿಸಿ ವ್ಯವಸಾಯದಲ್ಲಿ ತೊಡಗಿರುವ ರೈತರಿಗೆ ಏನು ಸಂಕಷ್ಟ ಇದೆ ಅವುಗಳನ್ನು ಪರಿಹಾರ ಮಾಡಲು ಮೊದಲು ಕಾರ್ಯಕ್ರಮ ಕೈಕೊಳ್ಳಬೇಕು ಎಂದು ಈ ಸಮಯದಲ್ಲಿ ಪ್ರಾರ್ಥಿಸುತ್ತೇನೆ. ನಮ್ಮ ರಾಜ್ಯದಲ್ಲಿ ನಾವು ಹೊರಗಡೆಯಿಂದ ಸುಮಾರು 4 ಲಕ್ಷ ಟನ್ ಬೇಳೆ ಕಾಳುಗಳನ್ನು ಆಮದು ಮಾಡುತ್ತೇವೆ. ಆದ್ದರಿಂದ ಹೆಚ್ಚು ಬೆಳೆಯುವುದಕ್ಕೆ ಹೆಚ್ಚಿನ ಪ್ರೋತ್ಸಾಹ ಕೊಡಬೇಕು ಮತ್ತು ಹೆಚ್ಚಿಗೆ ಬೆಳೆಯಬೇಕು. ಆ ಮೂಲಕ ನಮ್ಮಲ್ಲಿ ಇರತಕ್ಕ ಕೊರತೆಯನ್ನು ಹೋಗಲಾಡಿಸಬೇಕೆಂದು ನಾನು ಪ್ರಾರ್ಥನೆ ಮಾಡುತ್ತೇನೆ. ತಮ್ಮ ಯೋಜನೆ ಪ್ರಕಾರ ಪ್ರತಿಯೊಂದು ಜಿಲ್ಲೆಗೂ ಒಂದು ವ್ಯವಸಾಯ ಶಾಲೆಯನ್ನು ಸ್ಥಾಪನೆಮಾಡಿ ತನ್ಮೂಲಕ ಆ ಶಾಲೆಗಳಲ್ಲಿ ತರಪೇತನ್ನು ರೈತರಿಗೆ ಕೊಟ್ಟು ಉತ್ತಮವಾದ ವ್ಯವಸಾಯವನ್ನು ಮಾಡಲಿಕ್ಕೆ ಅವರಿಗೆ ತರಪೇತು ಕೊಡತಕ್ಕಂಥದ್ದು ಬಹಳ ಅವಶ್ಯಕ. ಈ ದಿಶೆಯಲ್ಲಿ ಕೂಡ ಕಾರ್ಯಕ್ರಮ ತೆಗೆದುಕೊಳ್ಳಬೇಕು. ಎಷ್ಟೋ ಜಿಲ್ಲೆಗಳಲ್ಲಿ ವ್ಯವಸಾಯ ಶಾಲೆಗಳು ಇಲ್ಲ, ಶಾಲೆಗಳು ಇಲ್ಲವೆ ಇರತಕ್ಕ ಜಿಲ್ಲೆಗಳಿಗೆ ಕೂಡಲೇ ಶಾಲೆಗಳನ್ನು ಕೊಡಲಿಕ್ಕೆ ತಾವು ಪ್ರಯತ್ನ ಮಾಡಬೇಕು. ಅಲ್ಲದೆ ಚಿಕ್ಕಮಗಳೂರು ಜಿಲ್ಲೆ ವಿಚಾರ ಹೇಳುವುದಾದರೆ ಚಿಕ್ಕಮಗಳೂರು ಜಿಲ್ಲೆ ಬಹಳ ಮುಖ್ಯವಾದ ಪ್ರದೇಶ. ಒಳ್ಳೆಯ ಜಮೀನು, ಒಳ್ಳೆಯ ವಾಯುಗುಣ ಇರತಕ್ಕ ಆ ಪ್ರದೇಶದಲ್ಲಿ ಶಾಲೆಯನ್ನು ಸ್ಥಾಪನೆ ಮಾಡಬೇಕು. ಕಡೂರು ಅಥವಾ ತರೀಕೆರೆ ತಾಲ್ಲೂಕು ಮಧ್ಯೆ ಅದನ್ನು ಪ್ರಾರಂಭಮಾಡಬೇಕು ಎಂದು ಒತ್ತಾಯಪಡಿಸುತ್ತೇನೆ. ಮತ್ತು ಫಾರಂ ಇನ್‌ಫರ್‌ಮೇಷನ್ ಯೂನಿಟ್ ಏನು ಇದೆ ಅದು ಇನ್ನು ಹೆಚ್ಚಿಗೆ ದಕ್ಷತೆಯಿಂದ ಕೆಲಸಮಾಡಬೇಕು. ಅದು ರೈತರಿಗೆ ಆಗಾಗ್ಗೆ ಸಲಹೆಗಳನ್ನು ಇತ್ತು ಯಾವ ಕಾಲದಲ್ಲಿ ಯಾವ ಭೂಮಿಯಲ್ಲಿ ಯಾವ ಬೆಳೆಯನ್ನು ಬೆಳೆಯಬಹುದು ಎನ್ನುವುದರ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಕೊಡಬೇಕು ಎಂದು ಈ ಸಮಯದಲ್ಲಿ ಪ್ರಾರ್ಥನೆ ಮಾಡುತ್ತೇನೆ.

ಸಾಯಿಲ್ ಟೆಸ್ಟಿಂಗ್ ಲ್ಯಾಬೋರೆಟರಿ. ಪ್ರತಿಯೊಂದು ಜಿಲ್ಲೆಯಲ್ಲೂ ಕೂಡ ಸಾಯಿಲ್ ಟೆಸ್ಟಿಂಗ್ ಲ್ಯಾಬೊರೇಟರಿ ಇರತಕ್ಕದ್ದು. ಮಣ್ಣಿನ ಪರೀಕ್ಷೆ ಮಾಡಿ ಆಗಿಂದಾಗ್ಗೆ ಮಾಡಿ ಯಾವ ಕಾಲದಲ್ಲಿ ಯಾವ ಬೆಳೆಯನ್ನೂ ಇಡಬಹುದು, ಎಲ್ಲಿ ತೊಂದರೆ ಇದೆ ಎಂಬುದನ್ನು ಪರಿಶೀಲನೆ ಮಾಡಿ ಅದನ್ನು ಸರಿಪಡಿಸಿ ಹೆಚ್ಚಿಗೆ ಬೆಳೆ ಬೆಳೆಯಬಹುದು ಎನ್ನುವ ಬಗ್ಗೆ ರೈತರಿಗೆ ತಿಳಿವಳಿಕೆ ಕೊಟ್ಟು ಪರಿಣಾಮಕಾರಿಯಾದ ರೀತಿಯಲ್ಲಿ ಅವರು ಕೆಲಸಮಾಡಬೇಕು ಎಂದು ಈ ಸಮಯದಲ್ಲಿ ಪ್ರಾರ್ಥನೆ ಮಾಡುತ್ತೇನೆ. ತಮ್ಮ ಇಲಾಖೆ ವ್ಯವಸಾಯ ಇಲಾಖೆ ಇದು ಬೃಹದಾಕಾರವಾಗಿ ಬೆಳೆದಿದೆ. ಜಿಲ್ಲೆಗೆ ಒಬ್ಬ ಡೆಪ್ಯುಟಿ ಡೈರೆಕ್ಟರ್, ತಾಲ್ಲೋಕಿಗೆ ಒಬ್ಬ ಅಗ್ರಿಕಲ್ಚರ್ ಆಫೀಸರ್, ಅದರ ಜೊತೆಗೆ ವಿ. ಎಲ್. ಡಬ್ಲ್ಯು. ಇದ್ದು ಕೆಲಸಮಾಡುತ್ತಿದ್ದಾರೆ. ಆದರೂ ಕೂಡ ರೈತರಿಗೂ ಈ ಇಲಾಖೆ ನೌಕರರಿಗೂ ಇನ್ನು ಹೆಚ್ಚು ಸಂಪರ್ಕ ಏರ್ಪಾಡು ಆಗಬೇಕು. ಇಲಾಖೆ ನೌಕರರು ರೈತರ ಜಮೀನುಗಳಿಗೆ ಹೋಗಿ ಜಮೀನನ್ನು ಖುದ್ದಾಗಿ ಪರಿಶೀಲನೆಮಾಡಿ ಜಮೀನಿನಲ್ಲಿ ಯಾವ ಯೋಗ್ಯವಾದ ಬೆಳೆಯನ್ನು ಇಟ್ಟರೆ ಲಾಭದಾಯಕವಾಗುತ್ತದೆ. ಎನ್ನುವುದನ್ನು ಕಂಡುಹಿಡಿದು ಪರಿ

(ಶ್ರೀ ಎಂ. ಮಲ್ಲಪ್ಪ)

ಣಾಮಕಾರಿಯಾದ ರೀತಿಯಲ್ಲಿ ಸಹಾಯ ಸೌಕರ್ಯವನ್ನು ನೀಡಬೇಕು ಎಂದು ಪ್ರಾರ್ಥನೆ ಮಾಡುತ್ತೇನೆ. ಮಂತ್ರಿಗಳು ಸಾಮಾನ್ಯವಾಗಿ ಎಷ್ಟೋ ಜಿಲ್ಲೆಗಳಿಗೆ ಹೋಗಿರಬಹುದು ಅಥವಾ ಹೋಗದೇ ಇರಬಹುದು. ಮಂತ್ರಿಗಳು ಹೋದಾಗ ಸಂಬಂಧಪಟ್ಟ ಅಧಿಕಾರಿಗಳು ಮತ್ತು ಸಾರ್ವಜನಿಕ ಮುಖಂಡರುಗಳನ್ನು ಕರೆಸಿ ಅಲ್ಲಿ ನೇರವಾಗಿ ಇರತಕ್ಕ ಕುಂದುಕೊರತೆಗಳನ್ನು ಗಮನಕ್ಕೆ ತಗೆದುಕೊಂಡು ಏನು ಅನುಕೂಲವನ್ನು ಮಾಡಬಹುದು, ಅದರಿಂದ ರೈತರಿಗೆ ಎಷ್ಟು ಉಪಯೋಗವಾಗುತ್ತದೆ ಎಂಬುವನ್ನು ಕಂಡುಹಿಡಿದು ಸ್ಥಳದಲ್ಲೇ ನೇರವಾಗಿ ಪರಿಹಾರವನ್ನು ಒದಗಿಸಿದರೆ ಇನ್ನು ಹೆಚ್ಚಿನ ಅನುಕೂಲವಾಗುತ್ತದೆ ಎಂದು ಅನಿಸುತ್ತದೆ. ಮಂತ್ರಿಮಂಡಲ ಅಸ್ತಿತ್ವಕ್ಕೆ ಬಂದು ಒಂದು ವರ್ಷವಾಗಿದೆ. ಮಂತ್ರಿಗಳು ಚಿಕ್ಕಮಗಳೂರು ಜಿಲ್ಲೆಗೆ ಹೋಗಿಲ್ಲ, ಹೋಗಿ ಅಲ್ಲ ವ್ಯವಸಾಯದ ಬಗ್ಗೆ ಏನು ಕುಂದುಕೊರತೆ ಇದೆ ಎನ್ನುವುದನ್ನು ತಿಳಿದು ಪರಿಣಾಮಕಾರಿಯಾದ ರೀತಿಯಲ್ಲಿ ಬಗೆಹರಿಸಬೇಕಾಗಿತ್ತು. ಈಗಲಾದರೂ ಕೂಡ ಆದಷ್ಟು ಬೇಗ ಅಲ್ಲಿಗೆ ಹೋಗಿ ಅಲ್ಲಿನ ಕುಂದುಕೊರತೆಗಳನ್ನು ಪರಿಹಾರ ಮಾಡಬೇಕು ಎಂದು ಪ್ರಾರ್ಥನೆ ಮಾಡುತ್ತೇನೆ. ರೈತರಿಗೆ ಸರಿಯಾದಂಥ ಉತ್ತಮ ಬೀಜ ದೊರಕಬೇಕಾದುದು ಅವಶ್ಯಕ ಅದು ಸಕಾಲದಲ್ಲಿ ದೊರಕಬೇಕು. ಮಳೆ ಬಂತು, ರೈತ ಭೂಮಿಯನ್ನು ಉತ್ತುವ ಕಾಲ ಇದು. ಈಗ ಅವನಿಗೆ ಯಾವ ಬೀಜ ಬೇಕು ಯಾವ ಬೆಳೆ ಆಗಬಹುದು ಎಂದು ಅವನಿಗೆ ಸಲಹೆ ಕೊಟ್ಟು ಒಳ್ಳೆಯ ಬೀಜವನ್ನು ಒದಗಿಸಿದರೆ ಅನುಕೂಲವಾಗುತ್ತದೆ, ನನಗೆ ಸ್ವಂತ ಅನುಭವ ಇದೆ. ಉತ್ತಮ ಜೋಳ ಬೇಕು ಎಂದರೆ ಆಗ ಹೋಗಿ ರಾಯಚೂರ್ ಅಥವಾ ಇನ್ನೊಂದುಕಡೆ ತಿರುಗಿ ತರತಕ್ಕ ಪರಿಪಾಟ ಇದೆ. ಯಾವ ಕಡೆಗೆ ಯಾವ ಬೀಜ ಒದಗಿಸಬೇಕು ಎಲ್ಲಿ ಸುಧಾರಿಸಿದ ಬೀಜ ದೊರೆಯುತ್ತದೆ ಅದನ್ನು ಶೇಖರಿಸಿ ಇಟ್ಟು, ರೈತರಿಗೆ ಒದಗಿಸಿದರೆ ಅದರಿಂದ ಹೆಚ್ಚಿನ ಪರಿಣಾಮಕಾರಿಯಾದ ಅನುಕೂಲವಾಗುತ್ತದೆ ಎಂದು ನಾನು ಒತ್ತಿ ಹೇಳಬಯಸುತ್ತೇನೆ. ಇದು ಅಲ್ಲದೆ ರೈತನಿಗೆ ಮುಖ್ಯವಾಗಿ ಬೇಕಾದ ಗೊಬ್ಬರ ಸಿಕ್ಕುತ್ತಾ ಇಲ್ಲ. ಆಗ್ರೋ ಇಂಡಸ್ಟ್ರೀಸ್ ಮೂಲಕ ಸಪ್ಲೈ ಮಾಡಲಿಕ್ಕೆ, ಸೊಸೈಟಿ ಮೂಲಕ ಸಪ್ಲೈ ಮಾಡಲಿಕ್ಕೆ ಅದನ್ನು ಶೇಖರಿಸಿ ಅದು ಸಕಾಲದಲ್ಲಿ ರೈತರಿಗೆ ದೊರೆಯುವಂತೆ ಮಾಡಬೇಕು, ಆ ದಿಶೆಯಲ್ಲಿ ಈ ಇಲಾಖೆಯವರು ತಮ್ಮ ಜವಾಬ್ದಾರಿ ಅರಿತು ಕೆಲಸ ಮಾಡಬೇಕು ಎಂದು ಈ ಸಮಯದಲ್ಲಿ ಸೂಚಿಸಬಯಸುತ್ತೇನೆ. ಸಾಮಾನ್ಯವಾಗಿ ನಾನು ರೈತನ ಒಂದು ಕಷ್ಟಕಾರ್ಪಣ್ಯ ಏನು ಇದೆ, ಆತ ಒಂದು ಎಕರೆಯಲ್ಲಿ ಎಷ್ಟು ಬೆಳೆಯಬಹುದು, ಬೆಳೆಯುವುದಕ್ಕೆ ಎಷ್ಟು ಖರ್ಚು ಆಗುತ್ತದೆ, ಅದಕ್ಕೆ ಎಷ್ಟು ಬೆಲೆ ಕೊಟ್ಟರೆ ಅವನಿಗೆ ನಷ್ಟವಾಗುವುದಿಲ್ಲ ಎನ್ನುವುದನ್ನು ಕಂಡುಹಿಡಿದು ಅಷ್ಟು ಬೆಲೆ ಕೊಡಬೇಕು. ಓಪನ್ ಮಾರ್ಕೆಟ್ಟಿನಲ್ಲಿ ಆ ಬೆಲೆ ದೊರಕದಿದ್ದರೆ ಆ ಬೆಲೆಗೆ ಕೊಂಡು ಕೊಳ್ಳುವುದಕ್ಕೆ ಸರ್ಕಾರ ಮುಂದೆ ಬರಬೇಕು. ಆಗ ರೈತನಿಗೆ ಅನುಕೂಲ ಆಗುತ್ತದೆ. ಆ ದಿಶೆಯಲ್ಲಿ ಕೆಲಸ ಮಾಡಬೇಕು ಎಂದು ನಾನು ಪ್ರಾರ್ಥನೆ ಮಾಡುತ್ತೇನೆ. ಈ ವಿಷಯದಲ್ಲಿ ಮಂತ್ರಿಗಳಿಗೆ ಚೆನ್ನಾಗಿ ಗೊತ್ತಿದೆ. ಅವರು ಅಡಿಕೆ ಬೆಳೆಗಾರರ ಮಧ್ಯೆ ಇದ್ದು ಅವರ ಕಷ್ಟವನ್ನು ಅರಿತುಕೊಂಡಿದ್ದಾರೆಂದು ನಾನು ನಂಬಿದ್ದೇನೆ, ಇವೊತ್ತು ಅಡಿಕೆ ಬೆಳೆಯತಕ್ಕವರ ಸ್ಥಿತಿ ಚಿಂತಾಜನಕವಾಗಿದೆ. ಆ ಬೆಳೆ ಮತ್ತು ಬೆಲೆ ಎರಡು ಕುಸಿದು ಬಿದ್ದಿದೆ. ಅಡಿಕೆ ದಾಸ್ತಾನು ಶಿವಮೊಗ್ಗಾ ಜಿಲ್ಲೆಯಲ್ಲಿ ಹೆಚ್ಚಿಗೆ ಇದೆ. ಇದನ್ನು ಕೇಳುವವರು ಇಲ್ಲದೆ ರೈತರು ಕಷ್ಟಕ್ಕೆ ಒಳಗಾಗಿದ್ದಾರೆ. ಆದ್ದರಿಂದ ರೈತರಿಂದ ಕೊಂಡುಕೊಳ್ಳುತ್ತೇವೆ ಎಂದು ಜಾಹಿರಾತು ಮಾಡಿ ಸೊಸೈಟಿಗಳ ಮೂಲಕ ಕೊಂಡುಕೊಳ್ಳಬೇಕು. ಇನ್‌ಸೆಂಟೀವ್ ಪ್ರೈಸ್ ಹೆಚ್ಚಿಗೆ ಕೊಟ್ಟು ತಗೆದುಕೊಂಡರೆ ನಿಜವಾಗಿ ಮಾರ್ಕೆಟ್ ಬೆಲೆ ಹೆಚ್ಚುತ್ತದೆ, ರೈತರಿಗೆ ಅನುಕೂಲವಾಗಬಹುದು, ಅಡಿಕೆ ಬೆಳೆಗೆ ಬೆಂಕಿ ರೋಗ ತಗಲಿ ರೈತರ ಕಷ್ಟ ಹೇಳತೀರದು. ಒಂದು ಎಕರೆ ತೋಟ ಇದ್ದರೂ ಆತನಿಗೆ ಒಂದೂವರೆ ಸಾವಿರ 2 ಸಾವಿರ ಕಡಿಮೆ ಎಂದರೂ 10-20 ಸಾವಿರ ರೂಪಾಯಿ ಖರ್ಚಾಗುತ್ತದೆ. ನಿಜವಾಗಿ ಅವನ ಕಷ್ಟ ಎಷ್ಟು ಎಂಬುದನ್ನು ತಾವು ಅರಿಯಬೇಕು, ಅದಕ್ಕಾಗಿ ಅಡಿಕೆ ಬೆಳೆಗಾರರಿಗೆ ಕಡಿಮೆ ಬೆಲೆಯಲ್ಲಿ ಗೊಬ್ಬರವನ್ನು ಕೊಡಬೇಕು, ತಕಾವಿ ಸಾಲವನ್ನು ಒದಗಿಸಬೇಕು, ಅಡಿಕೆ ಬೆಳೆಗಾರರು ಯಾವ ಕಷ್ಟಕ್ಕೆ ಒಳಗಾಗಿದ್ದಾರೆ ಅದನ್ನು ಸರ್ಕಾರದವರು ಮನಗಂಡು ಅವರ ಸಹಾಯಕ್ಕೆ ಬರಬೇಕು. ಹಾಗೆ ಮಾಡಿದರೆ ನಿಜವಾಗಿ ಕೂಡ ಅವರಿಗೆ ಏನು ತೊಂದರೆ ಇದೆ ಅದನ್ನು ಬಗೆಹರಿಸಲಿಕ್ಕೆ ಸಾಧ್ಯವಾಗುತ್ತದೆ ಎಂದು ನಾನು ಒತ್ತಿ ಹೇಳಬಯಸುತ್ತೇನೆ.

ಅರಣ್ಯ ಪ್ರದೇಶದ ವಿಷಯದಲ್ಲಿ ಹೇಳುವುದಾದರೆ ನಮ್ಮ ಮಂತ್ರಿಗಳು ಆಗಾಗ್ಯೆ ಹೇಳುತ್ತಾ ಇರುತ್ತಾರೆ. ನಮ್ಮ ರಾಜ್ಯದಲ್ಲಿ ಇರತಕ್ಕ ಅರಣ್ಯ ಪ್ರದೇಶ ಬೇರೆ ರಾಜ್ಯಗಳಿಗೆ ಬೇರೆ ದೇಶಗಳಿಗೆ ಹೋಲಿಸಿದರೆ ಅತಿ ಕಡಿಮೆ ಎಂಬುದನ್ನು ಎಲ್ಲರೂ ಒಪ್ಪತಕ್ಕ ಮಾತು. ಮೈಸೂರು ರಾಜ್ಯದಲ್ಲಿ

ಕೂಡ ಕಳೆದ 5 ವರ್ಷಗಳಲ್ಲಿ ಕಾಡುಗಳನ್ನು ಬೆಳಸಬೇಕು ಎಂದು ಹೇಳಿ ಒಂದು ಯೋಜನೆಯನ್ನು ಕಾರ್ಯರೂಪಕ್ಕೆ ತರಬೇಕು ಎನ್ನುವ ದೃಷ್ಟಿಯಿಂದ ಎಷ್ಟೋ ಹಣವನ್ನು ಖರ್ಚುಮಾಡಿದ್ದಾರೆ. ಆದರೆ ಅದರಿಂದ ಸರಿಯಾದ ಪ್ರತಿಫಲ ದೊರಕಿಲ್ಲ ಎಂದರೆ ಅತಿಶಯೋಕ್ತಿಯಲ್ಲ.

1-00 P.M.

ಈವೊತ್ತು ಕಾಡುಗಳನ್ನು ಎಲ್ಲಿ ಬೆಳೆಸಬೇಕೋ, ಮರಗಳನ್ನು ಎಲ್ಲಿ ನೆಡಬೇಕೋ ಅಂಥಾ ಪ್ರದೇಶಗಳನ್ನು ನೋಡಿ ಆ ಪ್ರದೇಶಕ್ಕೆ ಹೆಚ್ಚುನಿಗಾ ಕೊಟ್ಟರೆ ಒಳ್ಳೆಯದು. ಹಲವಾರು ಜನ 10 ಎಕರೆ 20ಎಕರೆ ತೆಗೆದುಕೊಂಡು ಉತ್ತಮರೀತಿಯಲ್ಲಿ ಸಾಗುವಳಿ ಮಾಡುತ್ತಿದ್ದರೆ ಅಂಥಾ ಕಡೆ ಅರಣ್ಯ ಇಲಾಖೆಯವರ ಧಾಳಿ ಆರಂಭವಾಗುತ್ತದೆ. ಇದು ಆಗಬಾರದು. ಬಡವರ ಕಷ್ಟವನ್ನು ಅರಿತು, ಅವರಿಗೆ ಸೂಕ್ತವಾದ ಪರಿಹಾರವನ್ನು ಒದಗಿಸಬೇಕು. ಕಾಡು ಬೆಳೆಸುವುದಕ್ಕೆ ಎಲ್ಲಿ ಯೋಗ್ಯ ವಾಗಿದೆಯೋ, ವ್ಯವಸಾಯ ಮಾಡುವುದಕ್ಕೆ ಎಲ್ಲಿ ಯೋಗ್ಯವಾಗಿದೆಯೋ ಆ ಬಗ್ಗೆ ಮಾನ್ಯ ಮಂತ್ರಿ ಗಳ ಗಮನಕ್ಕೆ ತಂದಿದ್ದೇನೆ. ಈ ವಿಷಯದಲ್ಲಿ ಒಂದು ಸಂದರ್ಭದಲ್ಲಿ ಏನಾಯಿತು ಎನ್ನುವುದನ್ನು ಹೇಳುತ್ತೇನೆ. ಕಲ್ಲಹೊಳೆ ಗ್ರಾಮದಲ್ಲಿ ವ್ಯವಸಾಯ ಮಾಡಿಕೊಂಡು 500 ಫ್ಯಾಮಿಲೀಸ್ ಸುಮಾರು 20 ವರ್ಷದಿಂದಲೂ ಇದ್ದಾರೆ. ಅವರು ವ್ಯವಸಾಯ ಮಾಡುವಂಥ ಜಮೀನಿಗೆ ಟಿ. ಟಿ. ಯನ್ನೂ ಕೂಡ ವಸೂಲ್ಮಾಡಿದ್ದಾರೆ ಮತ್ತು ರೆವಿನ್ಯೂ ಇಲಾಖೆಯವರು ಅವರಿಗೆ ಅನೇಕ ಸೌಲಭ್ಯಗಳನ್ನು ಒದಗಿಸಿದ್ದಾರೆ. ಅಂಥಾ ಕಡೆ ಅರಣ್ಯ ಇಲಾಖೆಯವರು ಚಿಕ್ಕಮಗಳೂರಿನಿಂದ ರಿಸರ್ವ್ ತರಿಸಿ ಕೊಂಡು ಅಲ್ಲಿಗೆ ಹೋಗಿ ಬೆಂಕಿ ಇಟ್ಟು, ಮನೆ ಕೆಡವಿ ಆ ಜನರನ್ನು ಹೊರಕ್ಕೆ ಹಾಕಿದ್ದಾರೆ. ಅನಂತರ ಆ ವಿಚಾರವನ್ನು ಮಾನ್ಯ ಸಚಿವರ ಗಮನಕ್ಕೆ ತಂದಮೇಲೆ ಅವರು ಕೂಡಲೇ ಸೂಕ್ತಕ್ರಮ ತೆಗೆದು ಕೊಂಡರು. ಆ ಅಕ್ರಮವಾದಂಥ ತಡೆಯನ್ನು ಅವರು ತಡೆ ಹಿಡಿದಿದ್ದಾರೆ. ನಾವು ಕಾಡು ಬೆಳೆಸ ಬೇಡಿ ಎಂದು ಹೇಳುವುದಿಲ್ಲ. ನೀವು ಕೊಟ್ಟಂಥ ಹಣವನ್ನು ಸರಿಯಾಗಿ ಉಪಯೋಗ ಮಾಡದಿದ್ದರೆ ಪ್ರಯೋಜನವಾಗಲಿಕ್ಕಿಲ್ಲ. ಎಲ್ಲಿ ಬಡವರು ಇದ್ದಾರೆ, ಎಲ್ಲಿ ವ್ಯವಸಾಯಗಾರರು ಇದ್ದಾರೆ ಎಲ್ಲಿ ನಿಮ್ಮ ಭೂಮಿಯನ್ನು ಆಕ್ರಮಿಸಿಕೊಂಡಿದ್ದಾರೆ ಅದನ್ನು ಸಹಾನುಭೂತಿಯಿಂದ ಪರಿಶೀಲಿಸಿ. ಕಲ್ಲ ಹಳ್ಳಿಯಲ್ಲಿ ಒಂದು ಗುಡ್ಡ ಇದೆ. ಅಲ್ಲಿ ಬೇಕಾದಷ್ಟು ಕಾಡನ್ನು ಬೆಳೆಸಬಹುದು. ಅದನ್ನು ಕೈ ಹಾಕದೆ ಬೇರೆ ಕಡೆ ಹೋಗಿ ಜನಗಳನ್ನು ರೋಷಿಸಿ ವರ್ತನೆ ಮಾಡಿದರೆ ಅದು ಸರ್ಕಾರಕ್ಕೆ ಗೌರವ ತರತಕ್ಕಂಥಾದ್ದಲ್ಲ. ಈ ದಿಸೆಯಲ್ಲಿ ಆಲೋಚನೆ ಮಾಡಬೇಕು ಎಂದು ತಮ್ಮಲ್ಲಿ ಪ್ರಾರ್ಥನೆ ಮಾಡಿ ಕೊಳ್ಳುತ್ತೇನೆ.

ಇನ್ನೊಂದು ಮಾತು ಏನೆಂದರೆ ಈ ನೀಲಗಿರಿ ಮರವನ್ನು ಬೆಳೆಸುವುದಕ್ಕೆ ಹೆಚ್ಚು ಹಣ ಖರ್ಚು ಮಾಡುವ ಬದಲು ಕಾಡು ಮರಗಳನ್ನು ಬೆಳೆಸಿದರೆ ಆದರಿಂದ ಹೆಚ್ಚು ಉತ್ಪನ್ನ ಬರುತ್ತದೆ, ನೀಲ ಗಿರಿ ಮರವನ್ನು ಎಲ್ಲಿ ಬೆಳೆಸಬೇಕೋ ಅಲ್ಲಿ ಬೆಳೆಸಬೇಕು. ಅವರೆ ಹೆಚ್ಚು ಗಮನ ಅರಣ್ಯ ಬೆಳೆಸುವು ದಕ್ಕೆ ಇರಬೇಕೇ ಹೊರತು ಬಾಕಿಯದಕ್ಕೆ ಗಮನ ಕೊಡಬಾರದು. ಮತ್ತು ಅರಣ್ಯ ಪ್ರದೇಶಕ್ಕೆ ಬೇಟೆ ಆಡುವ ಜನಗಳು ಬರುವುದನ್ನು ನಿಲ್ಲಿಸಬೇಕು ಎಂದು ನಾನು ಪ್ರಾರ್ಥನೆ ಮಾಡುತ್ತೇನೆ.

ಇನ್ನು ಮಲೆನಾಡಿನ ವಿಷಯದ ಬಗ್ಗೆ ನಾನು ಹೆಚ್ಚು ಹೇಳಬೇಕಾಗಿಲ್ಲ. ಮಾನ್ಯ ಮಂತ್ರಿ ಗಳಿಗೆ ಗೊತ್ತಿದೆ. ಅಲ್ಲಿ ಕಾಡನ್ನು ಬೆಳೆಸಬೇಕೆಂದು ಚೆನ್ನಾಗಿ ಅರಿತುಕೊಂಡಿದ್ದಾರೆ. ಅದಕ್ಕಾಗಿ ಇನ್ನೂ ಹೆಚ್ಚಿನ ಶ್ರಮವಹಿಸಿ ಬೇರೆ ಡಿಮ್ಯಾಂಡ್‌ಗಿಂತಲೂ ಇದಕ್ಕೆ ಹೆಚ್ಚಿನ ಹಣ ಕೊಟ್ಟು ಕಾಡನ್ನು ಹೆಚ್ಚಾಗಿ ಬೆಳೆಸಿದರೆ ಒಳ್ಳೆಯದಾಗುತ್ತದೆ ಎಂದು ಹೇಳುತ್ತೇನೆ. ಆದುದರಿಂದ ಹೆಚ್ಚಾಗಿ ಅರಣ್ಯ ಬೆಳೆಸುವುದಕ್ಕೆ ಪ್ರಯತ್ನ ಮಾಡಬೇಕು ಎಂದು ಪ್ರಾರ್ಥನೆ ಮಾಡಿಕೊಂಡು ಅಧ್ಯಕ್ಷರು ನನಗೆ ನಾಲ್ಕು ಮಾತುಗಳನ್ನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಕೆ. ಎಚ್. ಹನುಮೇಗೌಡ (ಹಾಸನ) —ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ವ್ಯವಸಾಯ ಮತ್ತು ಅರಣ್ಯ ಸಚಿವರು ಮಂಡಿಸಿರತಕ್ಕಂಥ ಬೇಡಿಕೆಗಳನ್ನು ವಿರೋಧಿಸುತ್ತಾ ಕೆಲವು ವಿಚಾರ ಗಳನ್ನು ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ. ದೇಶದಲ್ಲಿ ಸುಮಾರು 70 ರಿಂದ 80 ಭಾಗ ಜನ ಈ ವ್ಯವಸಾಯವನ್ನು ಅವಲಂಬಿಸಿ ಜೀವನ ಮಾಡುತ್ತಿದ್ದಾರೆ. ಕಳೆದ 25 ವರ್ಷದಿಂದಲೂ ಕೂಡ ವ್ಯವಸಾಯದ ಅಭಿವೃದ್ಧಿ ಬಗ್ಗೆ ವಕ್ಕಲುತನ ಮಾಡುವಂಥ ಜನಗಳ ಅಭಿವೃದ್ಧಿ ಬಗ್ಗೆ ಸಾಕಷ್ಟು ಗಮನ ಕೊಟ್ಟಿಲ್ಲ. ಈ ಬಗ್ಗೆ ಪದೇ ಪದೇ ದೂರುಬರುತ್ತಾ ಇದೆ. ಮತ್ತು ಹೊಸ ಸರ್ಕಾರ ಬಂದ ಮೇಲೂ ಕೂಡ ಈ ಒಂದು ನ್ಯೂನತೆಯನ್ನು ನಿವಾರಣೆ ಮಾಡುವುದಕ್ಕೆ ಸಾಕಾದಷ್ಟು ಕಾರ್ಯ ಕ್ರಮ ತೆಗೆದುಕೊಂಡಿಲ್ಲ ಎಂದು ಹೇಳಿದರೆ ತಪ್ಪಾಗಲಾರದು. ನಾನು ಕಳೆದ ಸಾರಿ ಈ ವ್ಯವ

(ಶ್ರೀ ಕೆ. ಎಚ್. ಹನುಮೇಗೌಡ)

ಸಾಯ ವೃತ್ತಿ ಬಗ್ಗೆ ಮಾತನಾಡಿದ್ದೆ. ಈ ವ್ಯವಸಾಯವನ್ನು ಅಭಿವೃದ್ಧಿ ಪಡಿಸುವುದು ಸರ್ಕಾರದ ಆದ್ಯ ಕರ್ತವ್ಯವಾಗಿದೆ. ಈವೊತ್ತಿನ ದಿವಸ ಈ ಬಾಬಿಗಾಗಿ ಸುಮಾರು 16 ಕೋಟಿ ರೂಪಾಯಿ ಏನು ಖರ್ಚು ಮಾಡುತ್ತಾ ಇದ್ದಾರೆ ಇದರಲ್ಲಿ ಹೆಚ್ಚು ಹಣ ಈ ಅಧಿಕಾರಿಗಳ ಟಿ.ಎ, ಮತ್ತು ಡಿ.ಎ.ಗಾಗಿ ವಿನಿಯೋಗವಾಗುತ್ತಿದೆ. ಇದರಲ್ಲಿ ಡೆವಲಪ್‌ಮೆಂಟ್‌ಗಾಗಿ ಸಾಕಷ್ಟು ಹಣ ಖರ್ಚಾಗುತ್ತಾ ಇಲ್ಲ. ಇದು ಹಿಂದಿನಿಂದಲೂ ನಡೆದುಕೊಂಡು ಬರುತ್ತಾ ಇರತಕ್ಕಂಥಾ ರೀತಿಯಲ್ಲೇ ಈವೊತ್ತೂ ಕೂಡ ನಡೆದುಕೊಂಡು ಬಂದಿದೆ. ಬಹುಶಃ ಇದರಲ್ಲಿ ಕ್ರಾಂತಿಕಾರಕ ಬದಲಾವಣೆಯಾಗಬೇಕಾದುದು ಮುಖ್ಯ ಎಂದು ಹೇಳುತ್ತೇನೆ. ಈ ವ್ಯವಸಾಯದಲ್ಲಿ ಜಮೀನಿಗೆ ಗೊಬ್ಬರ ಹಾಕುವುದು ಮತ್ತು ಔಷಧಿ ಹೊಡೆಯುವುದು ಈ ಬಗ್ಗೆ ಸಾಕಷ್ಟು ಪ್ರಚಾರವಾಗಿದ್ದರೂ ಕೂಡ ಸಾಲದು. ಮತ್ತು ಪೈರುಗಳಿಗೆ ಬರತಕ್ಕಂಥ ಖಾಯಿಲೆಗಳನ್ನು ಹೋಗಲಾಡಿಸುವ ಬಗ್ಗೆ ಇನ್ನೂ ಹೆಚ್ಚು ಸಂಶೋಧನೆ ಆಗಬೇಕಾಗಿದೆ. ಈಗ ಬೆಂಗಳೂರು ಮತ್ತು ಧಾರವಾಡದಲ್ಲಿ ಮಾತ್ರ ಇರತಕ್ಕಂಥ ಸಂಶೋಧನಾ ಕೇಂದ್ರಗಳು ಇವೆ. ಇದು ಸಾಲದು. ಇದು ಇನ್ನೂ 3-4 ಜಿಲ್ಲೆಗಳಲ್ಲಿ ಅಂದರೆ ಮೈಸೂರು, ಹಾಸನ, ತುಮಕೂರು ಮತ್ತು ಕೋಲಾರ ಈ ಜಿಲ್ಲೆಗಳಲ್ಲಿ ಸಂಶೋಧನಾ ಕೇಂದ್ರಗಳು ಮಾಡಬೇಕು. ಪ್ರತಿಯೊಂದು ಜಿಲ್ಲೆಯಲ್ಲೂ ಕೂಡ ಬೆಳೆಗಳಿಗೆ ಬರತಕ್ಕಂಥ ಖಾಯಿಲೆಗಳನ್ನು ನೋಡಿ ಅದನ್ನು ಅಧ್ಯಯನ ಮಾಡಿ ಅವಕ್ಕೆ ಸೂಕ್ತವಾದ ಪರಿಹಾರ ಕಂಡುಹಿಡಿಯುವಂತೆ ಮಾಡಬೇಕಾದ್ದು ಸರ್ಕಾರದ ಆದ್ಯ ಕರ್ತವ್ಯ. ಈ ದೇಶದಲ್ಲಿರುವ ಎಲ್ಲಾ ಜಿಲ್ಲೆಗಳಲ್ಲೂ, ಎಲ್ಲಾ ಭಾಗಗಳಲ್ಲೂ ಕೂಡ ಒಂದು ಸಂಶೋಧನಾ ಕೇಂದ್ರವನ್ನು ತೆರೆಯುವಂತೆ ಏರ್ಪಾಡು ಮಾಡಬೇಕು ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇನ್ನು ಬೀಜದ ಬಗ್ಗೆ ಮಾನ್ಯ ಸದಸ್ಯರನೇಕರು ತಿಳಿಸಿದ್ದಾರೆ. ಇದರ ಬಗ್ಗೆ ನಾನು ಒಂದು ಸಲಹೆಯನ್ನು ಮಾತ್ರ ಹೇಳುತ್ತೇನೆ. ಈ ಬೀಜದ ಹಂಚಿಕೆಯನ್ನು ಸದ್ಯಕ್ಕೆ ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ನಿಗೆ ವಹಿಸಿದ್ದಾರೆ. ಅವರು ಬೇರೆ ಫಾರಂಸ್‌ನಲ್ಲಿ ಬೆಳೆದು ರೈತರಿಗೆ ಹಂಚುತ್ತಾ ಇರುವುದು ಗೊತ್ತಿದೆ. ಇದನ್ನು ನ್ಯಾಷನಲ್ ಸೀಡ್ಸ್ ಕಾರ್ಪೊರೇಷನ್ನಿನವರು ಸೂಪರ್‌ವೈಸ್ ಮಾಡುತ್ತಾರೆ. ಇದನ್ನು ಯಾರೋ ಬೆಳೆದು ಸ್ಟೋರ್ ಮಾಡಿ ಯಾರೋ ಸೂಪರ್‌ವೈಸ್ ಮಾಡಿ ಇದನ್ನು ಹಂಚುವುದರಿಂದ ಎಷ್ಟೋ ಸಂದರ್ಭಗಳಲ್ಲಿ ಹಾಕಿದ ಬೆಳೆ ಸರಿಯಾಗಿ ಬರಲಿಕ್ಕಿಲ್ಲ. ಇದರ ಬಗ್ಗೆ ಬೇಕಾದಷ್ಟು ದೂರುಗಳು ಬರುತ್ತವೆ. ಇದರಿಂದಾಗಿ ಯಾವ ಏಜೆನ್ಸಿ ಮೇಲೂ ಸಹ ಜವಾಬ್ದಾರಿ ಹೊರಿಸುವುದು ಕಷ್ಟವಾಗುತ್ತದೆ. ಇದು ಸೂಪರ್‌ವೈಸ್ ಮಾಡಿರುವುದರಲ್ಲಿ ಹೆಚ್ಚು ಕಡಿಮೆ ಇದೆಯೋ, ಅಥವಾ ಸ್ಟೋರ್ ಮಾಡಿರುವುದರಲ್ಲಿ ಹೆಚ್ಚು ಕಡಿಮೆ ಇದೆಯೋ, ಈ ಕೆಟ್ಟ ಸೀಡ್ಸ್ ಎಲ್ಲಿಂದ ಬಂತು ಎಂದು ಕಂಡುಹಿಡಯುವುದು ಕಷ್ಟವಾಗುತ್ತದೆ. ಆದುದರಿಂದ ಆಯಾಯ ಜಿಲ್ಲೆಯಲ್ಲಿ ಬೇಕಾದಂಥ ಬೀಜವನ್ನು ಒದಗಿಸಿ ಕೊಟ್ಟು ಆಯಾಯ ಜಿಲ್ಲೆಯಲ್ಲೇ ಬೆಳೆದು ಪ್ರೊಸೆಸಿಂಗ್ ಸೆಂಟರ್ಸ್ ಮಾಡಿ ಹಂಚಬೇಕು. ಸರ್ಕಾರದವರೇ ಇದನ್ನು ಸೂಪರ್‌ವೈಸ್ ಮಾಡಿ ಅವರ ಮುಖಾಂತರ ಹಂಚಿದರೆ ಅನುಕೂಲವಾಗುತ್ತದೆ. ಆದುದರಿಂದ ಈ ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್‌ನಿಂದ ಈಗ ಇರತಕ್ಕಂಥ ಜವಾಬ್ದಾರಿಯನ್ನು ತೆಗೆಯಬೇಕು ಎಂದು ನನ್ನ ಅಭಿಪ್ರಾಯ. ಈ ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ನಿನವರಿಗೆ ಗೊಬ್ಬರ ಹಂಚಿಕೆ ಮತ್ತು ಬೀಜದ ಉತ್ಪಾದನೆ ಮತ್ತು ಹಂಚುವುದನ್ನು ಕೊಟ್ಟಿರುವುದು ಅಷ್ಟು ಸೂಕ್ತವಾದುವಲ್ಲ ಎಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಕಾರಣ ಇಷ್ಟೆ. ಈಗ ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ ನವರು ರೈತರಿಗೆ ಆಧುನಿಕ ರೀತಿಯ ಉಪಕರಣಗಳನ್ನು ಏನು ಒದಗಿಸಿ ಕೊಡುತ್ತಾರೋ ಅದರ ಜೊತೆಗೆ ರೈತರಿಗೆ ಬೇಕಾದಂಥ ನೀರಾವರಿ ಬಾವಿಗಳಿಗೆ ಬೋರ್‌ವೆಲ್ ಹಾಕಿಸುವಂಥ ಹೆಚ್ಚು ಜವಾಬ್ದಾರಿಯನ್ನು ಕೊಟ್ಟು ಗೊಬ್ಬರ ಮತ್ತು ಬೀಜದ ಹಂಚಿಕೆ ಮತ್ತು ಸೂಪರ್‌ವೈಸ್ ಮಾಡುವುದನ್ನು ಅವರಿಂದ ತೆಗೆದರೆ ಉತ್ತಮವಾಗುತ್ತದೆ ಎಂದು ಹೇಳುತ್ತೇನೆ, ಇನ್ನು ಸೀಡ್ಸ್ ಆಕ್ಟ್ ಫೋರ್ಸ್‌ನಲ್ಲಿ ಇದೆ ಎಂದು ಕೇಳಿದ್ದೇನೆ. ಆ ಬಗ್ಗೆ ಇನ್ನೂ ಬಹಳ ಸ್ಟ್ರಿಕ್ಟ್ ಆಗಿ ಜಾರಿಗೆ ತರಬೇಕು ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇನ್ನು ಪಂಜಾಬ್‌ನಲ್ಲಿ ಅಂಡರ್‌ಗ್ರೌಂಡ್ ವಾಟರ್ ಸೆಲ್ ಎಂದು ಮಾಡಿ ಅದಕ್ಕೆ 3 ಕೋಟಿ ರೂಪಾಯಿ ಬಂಡವಾಳವನ್ನು ಹಾಕಿ ರೈತರಿಗೆ ನೀರನ್ನು ಕೊಡುವ ಒಂದು ವ್ಯವಸ್ಥೆ ಮಾಡಿದ್ದಾರೆ. ಭೂಗರ್ಭ ಇಲಾಖೆಯವರು ಅವರಿಗೆ 15-20 ರಿಗ್ಸ್ ಮೆಷಿನ್ ತರಿಸಿ ಕೊಟ್ಟಿದ್ದಾರೆ. ಅವರ ಕೆಲಸ ಏನೆಂದರೆ ಎಲ್ಲಾ ಜಿಲ್ಲೆಗೂ ಹೋಗಿ ಎಲ್ಲಿ ಜಲ ಸಿಕ್ಕುತ್ತದೆ ಅದನ್ನು ಕಂಡು ಹಿಡಿದು ಅಲ್ಲಿ ಬೋರ್‌ವೆಲ್‌ಗಳನ್ನು ಹಾಕಿ ಭೂಗರ್ಭದಲ್ಲಿ ಇರತಕ್ಕಂಥ ಜಲವನ್ನು ಪರೀಕ್ಷಿಸಿ ನೀರು ತೆಗೆದು ರೈತರಿಗೆ ಅಲ್ಲಿ ಬೋರ್‌ವೆಲ್‌ಗಳನ್ನು ಹಾಕಿ ವ್ಯವಸ್ಥೆ ಮಾಡಿದ್ದಾರೆ. ಇಂಥಾ ಕೆಲಸಗಳನ್ನು ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ನಿನವರಿಗೆ ಕೊಟ್ಟರೆ ಉತ್ತಮ. ಅವರು ವ್ಯವಸಾಯದ ಆಧುನಿಕ ಉಪಕರಣಗಳನ್ನೂ

ಮಾಡಿ ರೈತರಿಗೆ ಕೊಟ್ಟಿದ್ದಾರೆ. ಈ ರೀತಿ ಆಗ್ರೋ ಇಂಡಸ್ಟ್ರೀಸ್‌ನವರು ಮಾಡಬೇಕು ಎಂದು ಹೇಳುವುದಕ್ಕೆ ಇಚ್ಛಿಪಡುತ್ತೇನೆ.

ಇನ್ನು ಫಾರೆಸ್ಟ್ ಬಗ್ಗೆ ಒಂದು ಮಾತು ಹೇಳುತ್ತೇನೆ, ಈಗ ಫಾರೆಸ್ಟ್ ಇಂಡಸ್ಟ್ರೀಸ್ ಡೆವಲಪ್‌ಮೆಂಟ್ ಕಾರ್ಪೊರೇಷನ್ ಅಂತ ಒಂದು ಸಂಸ್ಥೆ ಇದೆ. ಆ ಸಂಸ್ಥೆಗೆ ಸುಮಾರು 15 ಲಕ್ಷ ರೂಪಾಯಿ ಹಣ ವಿನಾಕಾರಣ ಖರ್ಚಾಗಿದೆ. ಯಾವ ಉದ್ದೇಶಕ್ಕಾಗಿ ಆ ಹಣ ಖರ್ಚಾಗಬೇಕೋ ಆ ಉದ್ದೇಶಕ್ಕೆ ಆಗಿಲ್ಲ. ಈ ಬಗ್ಗೆ ದೂರುಗಳು ಬಂದಿವೆ. ಇದರ ಬಗ್ಗೆ ಕೂಲಂಕಷವಾಗಿ ವಿಚಾರಣೆ ನಡೆಯಬೇಕು ಎಂದು ನಾನು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ. ಈಗ ಫಾರೆಸ್ಟ್ ಡೆವಲಪ್‌ಮೆಂಟ್ ಕಾರ್ಪೊರೇಷನ್ ಇದ್ದರೂ ಕೂಡ ಇನ್ನೊಂದು ಕಾರ್ಪೊರೇಷನ್ ಫಾರೆಸ್ಟ್ ಇಂಡಸ್ಟ್ರೀಸ್ ಡೆವಲಪ್‌ಮೆಂಟ್ ಕಾರ್ಪೊರೇಷನ್ ಎಂದು ರಚನೆ ಮಾಡಿದ್ದೀರ. ಇದರ ಔಚಿತ್ಯ ಏನು ಎಂದು, ಇದನ್ನು ಏತಕ್ಕಾಗಿ ಮಾಡಿದ್ದೀರಿ ಎನ್ನುವುದನ್ನು ತಿಳಿಸಬೇಕೆಂದು ಬಯಸುತ್ತೇನೆ. ಬಹುಶಃ ಫಾರೆಸ್ಟ್ ಡೆವಲಪ್‌ಮೆಂಟ್ ಕಾರ್ಪೊರೇಷನ್ ಇರುವಾಗ ಮತ್ತೊಂದು ಫಾರೆಸ್ಟ್ ಇಂಡಸ್ಟ್ರೀಸ್ ಡೆವಲಪ್‌ಮೆಂಟ್ ಕಾರ್ಪೊರೇಷನ್ ಮಾಡುವ ಔಚಿತ್ಯವಿರಲಿಲ್ಲವೆಂದು ನನಗನ್ನಿಸುತ್ತದೆ. ಇದಕ್ಕೆ ಮಾನ್ಯ ಮಂತ್ರಿಗಳೇ ಚೇರ್‌ಮನ್‌ರಾಗಿರುತ್ತಾರೆ. ಇತ್ತೀಚೆಗೆ ಒಂದು ಸಂಪ್ರದಾಯ ಬೆಳೆದು ಬರುತ್ತಿದೆ, ಪ್ರತಿಯೊಂದು ಇಲಾಖೆಯ ಸಚಿವರೂ ಕೆಲವು ಕಾರ್ಪೊರೇಷನ್ ಮಾಡಿ, ಅದಕ್ಕೆ ಅವರೇ ಅಧ್ಯಕ್ಷರಾಗುತ್ತಿದ್ದಾರೆ. ಈ ಸಂಪ್ರದಾಯ ಒಳ್ಳೆಯದಲ್ಲ. ಫಾರೆಸ್ಟ್ ಇಂಡಸ್ಟ್ರೀಸ್ ಕಾರ್ಪೊರೇಷನಿಗೆ ಸೇರಿದಂತೆ ಮೂರು ಸಾ ಮಿಲ್ಸ್ ಮತ್ತು ಎರಡು ವುಡ್ ಪ್ರಿಸರ್ವೇಷನ್ ಮಿಲ್ಸ್ ಡೈರೆಕ್ಟರ್ ಆಫ್ ಫಾರೆಸ್ಟ್ ಇಂಡಸ್ಟ್ರೀಸ್ ಅವರ ಕೈಕೆಳಗೆ ಇವೆ. ಇದಕ್ಕಾಗಿ ಒಂದು ಕಾರ್ಪೊರೇಷನ್ ಮಾಡುವ ಅವಶ್ಯಕತೆ ಇರಲಿಲ್ಲವೆಂದು ನಾನು ಈ ಸಂದರ್ಭದಲ್ಲಿ ತಿಳಿಸಬಯಸುತ್ತೇನೆ.

ಫಾರೆಸ್ಟ್ ಇಲಾಖೆಯಲ್ಲಿ ಐದು ಜನ ಚೀಫ್ ಕನ್‌ಸರ್ವೇಟರುಗಳಿದ್ದಾರೆ. ಪ್ರಾಣಿಗಳ ಸಂರಕ್ಷಣೆಗೇ ಒಬ್ಬ ಚೀಫ್ ಕನ್‌ಸರ್ವೇಟರ್ ಇದ್ದಾರೆ : ಕೆಲಸದ ವ್ಯಾಪ್ತಿಯನ್ನು ನೋಡಿಕೊಂಡು ಈ ಹುದ್ದೆಗಳನ್ನು ನಿರ್ಮಾಣ ಮಾಡಬೇಕೇ ವಿನಾ ಕೆಲವರಿಗೆ ಹುದ್ದೆಗಳನ್ನು ಕೊಡಬೇಕೆಂಬ ದೃಷ್ಟಿಯಿಂದ ಮನಸ್ವೇಚ್ಛೆಯಾಗಿ ಹುದ್ದೆಗಳನ್ನು ನಿರ್ಮಾಣ ಮಾಡವುದು ದೇಶದ ಆರ್ಥಿಕ ಪರಿಸ್ಥಿತಿಯ ದೃಷ್ಟಿಯಿಂದ ಒಳ್ಳೆಯದಲ್ಲ. ಈ ರೀತಿ ಹುದ್ದೆಗಳ ನಿರ್ಮಾಣದಿಂದ ಸಮರ್ಪಕವಾಗಿ ಕೆಲಸ ಕಾರ್ಯಗಳು ಆಗುವುದಿಲ್ಲವೆಂದು ಹೇಳುತ್ತೇನೆ. ಚಿಕ್ಕ ವಯಸ್ಸಿನ ಅನೇಕ ದಕ್ಷ ಅಧಿಕಾರಿಗಳಿದ್ದರೂ ಕೂಡ ಚೀಫ್ ಕನ್‌ಸರ್ವೇಟರ್ ಅವರಿಗೆ ಎಕ್ಸ್‌ಟೆನ್‌ಷನ್ ಪಬೇ ಪದೇ ಕೊಡುತ್ತಿರುವುದು ಒಳ್ಳೆಯ ಸಂಪ್ರದಾಯವಲ್ಲ. ಇದನ್ನು ನಿಲ್ಲಿಸಬೇಕೆಂದು ಹೇಳುತ್ತೇನೆ.

ಹಳೇ ಮೈಸೂರಿನ ಅರಣ್ಯ ಇಲಾಖೆಯ ಅಧಿಕಾರಿಗಳನ್ನು ಬಹಳ ಕಡೆಗಾಣಿಸಿ ನೋಡುತ್ತಿದ್ದಾರೆ, ಅವರಿಗೆ ಸಲ್ಲಬೇಕಾದ ಪ್ರಮೋಷನ್ ಇಂಥ ವಿಚಾರಗಳಲ್ಲಿ ಸರ್ಕಾರ ಆದ್ಯಗಮನವನ್ನು ಕೊಡುತ್ತಿಲ್ಲ, ಕೇವಲ ಕೆಲವೇ ಅಧಿಕಾರಿಗಳ ಹಿತದೃಷ್ಟಿಯಿಂದ ಅವರ ಪ್ರಮೋಷನ್ಸ್ ಮುಂತಾದುವನ್ನು ತಡೆಹಿಡಿದಿದೆ ಎನ್ನುವ ವದಂತಿ ಇದೆ. ಮಾನ್ಯ ಸಚಿವರು ಇದರ ಬಗ್ಗೆ ವಿವರಗಳನ್ನು ಕೊಡಬೇಕು ಎಂದು ಹೇಳುತ್ತೇನೆ.

ಶ್ರೀ ಬಂಗೇರ ಎನ್ನುವವರು ಸರ್ಕಾರ ಉನ್ನತ ಅಧಿಕಾರಿ. ಇವರ ಬಗ್ಗೆ ಅನೇಕ ದೂರುಗಳು ಕೇಳಿ ಬಂದಿದ್ದರೂ ಕೂಡ ಅವರನ್ನು ಅದೇ ಹುದ್ದೆಯಲ್ಲಿಯೇ ಮುಂದುವರಿಸುತ್ತಿದ್ದಾರೆ, ಇದರ ಔಚಿತ್ಯವೇನು ಎಂದು ಹೇಳುತ್ತೇನೆ,

ಇಂಡಿಯನ್ ಫಾರೆಸ್ಟ್ ಸರ್ವಿಸ್ ಸೀನಿಯಾರಿಟಿ ಪಟ್ಟಿ ತಯಾರಾಗಿದ್ದರೂ ಕೂಡ ಒಬ್ಬಿಬ್ಬರಿಗೆ ಅನುಕೂಲ ಮಾಡಿಕೊಡಬೇಕೆಂಬ ಉದ್ದೇಶದಿಂದ ಆ ಪಟ್ಟಿಯನ್ನು ಪಬ್ಲಿಷ್ ಮಾಡದೆ ತಡೆ ಹಿಡಿದಿದ್ದಾರೆ ಎನ್ನುವ ದೂರು ಕೇಳಿ ಬರುತ್ತಿದೆ. ಒಬ್ಬಿಬ್ಬರ ಹಿತದೃಷ್ಟಿಯಿಂದ ಅನೇಕ ಜನ ಅಧಿಕಾರಿಗಳಿಗೆ ಸಂಬಂಧಪಟ್ಟ ಪಟ್ಟಿಯನ್ನು ತಡೆ ಹಿಡಿಯುವುದು ಸೂಕ್ತವಲ್ಲ ಎಂದು ಹೇಳುತ್ತೇನೆ, ಇದರ ಬಗ್ಗೆ ಕೂಡ ಮಾನ್ಯ ಸಚಿವರು ವಿವರಗಳನ್ನು ಕೊಡಬೇಕೆಂದು ಕೇಳುತ್ತೇನೆ.

ವ್ಯವಸಾಯ ಇಲಾಖೆಯಲ್ಲಿ ಕೆಲಸಕ್ಕೆ ಬಾರದೆ ಇರುವ ನೂರಾರು ಜನ ಅಧಿಕಾರಿಗಳಿದ್ದಾರೆ. ಇದರಿಂದ ದೇಶದ ಆರ್ಥಿಕಸ್ಥಿತಿಗೆ ತೊಂದರೆಯಾಗುತ್ತಿದೆಯೇ ವಿನಾ ವ್ಯವಸಾಯಗಾರರಿಗೆ ಯಾವ ವಿಧವಾದ ಉಪಯೋಗವೂ ಆಗುತ್ತಿಲ್ಲ. ಒಬ್ಬ ಡೆಪ್ಯುಟಿ ಡೈರೆಕ್ಟರ ಕೆಳಗೆ ಎಷ್ಟೊಂದು ಪ್ರಮಾಣದಲ್ಲಿ ಅಧಿಕಾರಿಗಳಿದ್ದಾರೆಂದರೆ ಮೆನ್ಯೂರ್ ಡೆವಲಪ್‌ಮೆಂಟ್ ಆಫೀಸರ್, ಸೀಡ್ ಡೆವಲಪ್‌ಮೆಂಟ್ ಆಫೀಸರ್,—ಸೀಡ್ ಡೆಲಪ್‌ಮೆಂಟ್ ಆಫೀಸರಿಗೂ ಆ ಕೆಲಸಕ್ಕೂ ಯಾವ ವಿಧವಾದ ಸಂಬಂಧವೂ ಇಲ್ಲ. ವಿನಾಕಾರಣ ಅವರು ಟಿ.ಎ., ಡಿ.ಎ., ತೆಗೆದುಕೊಂಡು ಕಾಲಹರಣ ಮಾಡುತ್ತಿದ್ದಾರೆ.

(ಶ್ರೀ ಕೆ. ಎಚ್. ಹನುಮೇಗೌಡ)

ಸೀಡ್ ಪ್ರೋಸೆಸಿಂಗ್ ಸೆಂಟರ್ ಇಲ್ಲ, ಆಯಾ ಜಿಲ್ಲೆಗೆ ಬೇಕಾದ ಬೀಜವನ್ನು ಅಲ್ಲಲ್ಲಿಯೇ ಬೆಳೆಯುವುದಕ್ಕೆ ವ್ಯವಸ್ಥೆ ಇಲ್ಲದೇ ಇರುವುದರಿಂದ ಇದಕ್ಕೆ ಒಬ್ಬ ಅಧಿಕಾರಿಯನ್ನು ನೇಮಕ ಮಾಡಿರುವುದರಲ್ಲಿ ಅರ್ಥವಿಲ್ಲ. ಪ್ಲಾಂಟ್ ಪ್ರೊಟೆಕ್ಷನ್ ಆಫೀಸರ್, ಇದು ನಿರರ್ಥಕವಾದ ಹುದ್ದೆ. ಇದಕ್ಕೆ ಸಂಬಂಧಪಟ್ಟ ಹಾಗೆ ತಾಲ್ಲೂಕು ಬೋರ್ಡಿನಲ್ಲಿರುವ ಗ್ರಾಮಸೇವಕರು ನೋಡಿಕೊಳ್ಳಬಹುದು, ಅಗ್ರಿಕಲ್ಚರರ್ ಎಕ್ಸ್‌ಟೆನ್‌ಷನ್ ಆಫೀಸರ್ ನೋಡಿಕೊಳ್ಳಬಹುದು. ಆದುದರಿಂದ ಈಗ ಇರುವಂಥ ಅನಾವಶ್ಯಕವಾದ ಅಧಿಕಾರಿ ವರ್ಗವನ್ನು ಕಡಮೆ ಮಾಡಿ ಸಾಧ್ಯವಾದಷ್ಟು ಮಟ್ಟಿಗೆ ರೀಸರ್ಚ್ ಕೆಲಸಕ್ಕೆ ಡೈವರ್ಟ್ ಮಾಡಿ ದೇಶದಲ್ಲಿ ಆಗಾಗ್ಗೆ ಪೈರುಗಳಿಗೆ ಬರುತ್ತಿರತಕ್ಕ ಕಾಯಿಲೆ ಬಗ್ಗೆ ಸಂಶೋಧನ ನಡೆಸುವುದಕ್ಕೆ ಅವರ ಸೇವೆಯನ್ನು ಉಪಯೋಗಿಸಿಕೊಳ್ಳಬಹುದು ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಕೋಣಂದೂರು ಲಿಂಗಪ್ಪ (ತೀರ್ಥಹಳ್ಳಿ).—ಅಧ್ಯಕ್ಷರೇ, ಮಾನ್ಯ ಅರಣ್ಯ ಮತ್ತು ವ್ಯವಸಾಯ ಮಂತ್ರಿಗಳು ಮಂಡಿಸಿರುವ ಬೇಡಿಕೆಯನ್ನು ಸಂಪೂರ್ಣವಾಗಿ ವಿರೋಧಿಸಿ ಎರಡು ಮಾತನ್ನು ಹೇಳಲು ಅಪೇಕ್ಷೆ ಪಡುತ್ತೇನೆ.

ಮೊಟ್ಟ ಮೊದಲನೆಯದಾಗಿ ಗದುಗೇ ರಾಜ್ಯ, ಧಾರವಾಡ ಜಿಲ್ಲೆಯೇ ರಾಷ್ಟ್ರ ಎನ್ನತಕ್ಕ ಭಾವನೆ ಇರತಕ್ಕ ಮಾನ್ಯ ಮಂತ್ರಿಗಳಿಂದ ರಾಜ್ಯದ ಎಲ್ಲ ಕಡೆಗಳಿಗೂ ನ್ಯಾಯ ದೊರಕುತ್ತದೆ ಎನ್ನುವ ವಿಶ್ವಾಸ ನನಗೆ ಇಲ್ಲ. ಈ ಬಗ್ಗೆ ಬಹಳ ವಿಷಾದದಿಂದ ಹೇಳುತ್ತೇನೆ. ಧಾರವಾಡದಲ್ಲಿ ಮತ್ತೊಂದು ಅಗ್ರಿಕಲ್ಚರಲ್ ಯೂನಿವರ್ಸಿಟಿ ಮಾಡತಕ್ಕ ಯೋಜನೆಯನ್ನು ಅವರು ಏಕೆ ಕೈಕೊಳ್ಳಬೇಕಾಗಿತ್ತು ಅಥವಾ ಫಾರೆಸ್ಟ್ ಕಾಲೇಜುಗಳನ್ನು ಮಲೆನಾಡಿನ ಭಾಗದಲ್ಲಿ ಕಾಡು ಇರತಕ್ಕ ಪ್ರದೇಶದಲ್ಲಿ ಯಾವ ಭಾಗದಲ್ಲಿಯೂ ಅವರು ಆರಂಭಿಸಲಿಕ್ಕೆ ಯೋಚನೆ ಮಾಡಿಲ್ಲ. ಮಲೆನಾಡಿನ ಭಾಗಗಳಾದ ಶಿವಮೊಗ್ಗ ಜಿಲ್ಲೆ, ಚಿಕ್ಕಮಂಗಳೂರು, ದಕ್ಷಿಣ ಕನ್ನಡ, ಕಾರವಾರ ಕೊಡಗು ಈ ಯಾವುದಾದರೂ ಜಿಲ್ಲೆಗಳಲ್ಲಿ ಅವರು ಅಗ್ರಿಕಲ್ಚರಲ್ ಯೂನಿವರ್ಸಿಟಿಯನ್ನು ಅಥವಾ ಫಾರೆಸ್ಟ್ ಕಾಲೇಜುಗಳು ಇವುಗಳನ್ನು ಮಾಡುವುದಕ್ಕೆ ಯೋಜನೆಯನ್ನು ಹಾಕಿದ್ದಾರೆಯೇ ಎಂದು ಕೇಳುತ್ತೇನೆ. ಇವರ ಪತ್ರಿಕಾ ಹೇಳಿಕೆಯ ಪ್ರಕಾರ ಅಗ್ರಿಕಲ್ಚರಲ್ ಯೂನಿವರ್ಸಿಟಿ ಇನ್ನೊಂದನ್ನು ಧಾರವಾಡದಲ್ಲಿ ತೆಗೆಯುವ ಯೋಜನೆಯನ್ನು ಹಾಕಿದ್ದಾರೆ, ಅಲ್ಲಿ ಮಾಡುವುದರ ಬಗ್ಗೆ ವಿರೋಧವಿಲ್ಲ. ಆದರೆ ಎಲ್ಲವೂ ಧಾರವಾಡದಲ್ಲಿ, ಎಲ್ಲವೂ ಗದಗ್‌ನಲ್ಲಿ ಆದರೆ ನಾವು ಯಾರಾದರೂ ಎಲ್ಲಿಗೆ ಹೋಗಬೇಕು ? ನಮ್ಮ ಮಲೆನಾಡಿನ ಪ್ರದೇಶಕ್ಕೆ, ಒಂದೊಂದು ಜಿಲ್ಲೆಗೆ ಒಂದೊಂದು ಅರಣ್ಯ ಕಾಲೇಜನ್ನು ಕೊಡಿರಿ ಮತ್ತು ವ್ಯವಸಾಯ ಕಾಲೇಜು ಕೊಡಿರಿ, ನಮ್ಮಲ್ಲಿಯೂ ಒಂದು ವಿಶ್ವವಿದ್ಯಾನಿಲಯವನ್ನು, ಪ್ರಾರಂಭ ಮಾಡಿರಿ, ಆದರಿಂದ ಏನು ತೊಂದರೆ ಇದೆ ? ಆದರೆ ಯಾವುದೇ ವಿಶ್ವವಿದ್ಯಾನಿಲಯವನ್ನು, ಮತ್ತೊಂದು ವ್ಯವಸಾಯ ವಿಶ್ವವಿದ್ಯಾನಿಲಯವನ್ನು ಆರಂಭ ಮಾಡುವಾಗ ಈಗಿರತಕ್ಕ ಹೆಬ್ಬಾಳದ ವಿಶ್ವವಿದ್ಯಾನಿಲಯದ ಮಾದರಿಯಲ್ಲ ಮಾಡುವುದು ಬೇಡ. ನಮ್ಮಲ್ಲಿರತಕ್ಕ ವಿಶ್ವವಿದ್ಯಾನಿಲಯದಿಂದ ಈ ಹೊತ್ತಿನವರೆಗೂ 10 ಪುಟಗಳಷ್ಟು ಕನ್ನಡದಲ್ಲಿ ಏನನ್ನೂ ಮಾಡಿಲ್ಲ. ಇವರು ಇಂಗ್ಲೀಷಿನಲ್ಲಿ ಬೇಸಾಯ ನಮ್ಮ ರಾಜ್ಯದಲ್ಲಿ ಮಾಡುತ್ತಿದ್ದಾರೆ. ಫರಂಗಿ ರೋಗ ತಗುಲಿದ ಜನ ಎಲ್ಲಿಯವರೆಗೂ ಆಡಳಿತದಲ್ಲಿರುತ್ತಾರೆ ಅಲ್ಲಿಯವರೆಗೂ ಯಾವುದೂ ಉದ್ಧಾರವಾಗಲಾರದು. ವ್ಯವಸಾಯ ವಿಶ್ವವಿದ್ಯಾನಿಲಯದಲ್ಲಿ ಎಲ್ಲವೂ ಕನ್ನಡದಲ್ಲಿಯೇ ಆಗಬೇಕು, ಶಿಕ್ಷಣ ಮಾಧ್ಯಮ ಮೊಟ್ಟ ಮೊದಲು ಕನ್ನಡವಾಗಬೇಕು. ಇಂದು ಯಾವ ರಾಜ್ಯದ ಜನರಿಗೆ ವ್ಯವಸಾಯ ವಿಷಯವನ್ನು ಕಲಿಸುತ್ತಿದ್ದಾರೆಂದು ಕೇಳುತ್ತೇನೆ. ಇಂಗ್ಲೆಂಡ್, ಅಮೆರಿಕಾದವರಿಗೆ ಕಲಿಸುತ್ತಿದ್ದಾರೆಯೋ ಅಥವಾ ಕರ್ನಾಟಕದ ಜನತೆಗೆ ಕಲಿಸುತ್ತಿದ್ದಾರೆಯೋ ? ಆದುದರಿಂದ ಮೊದಲು ಕನ್ನಡ ಮಾಧ್ಯಮ ಬರಬೇಕು, ಎಲ್ಲವೂ ಕನ್ನಡದಲ್ಲಿಯೇ ಬರಬೇಕು. ಹೆಬ್ಬಾಳದ ವಿಶ್ವವಿದ್ಯಾನಿಲಯದಲ್ಲಿ ಡೀನ್ ಒಬ್ಬರು ಮದರಾಸಿನವರಿದ್ದಾರೆ. ಅವರು ತಜ್ಞರಿದ್ದಾರೆ. ಹೊರಗಿನವರು ಒಬ್ಬರು ಬಂದು ಕುಳಿತು, ಶ್ರೀ ರಾಮಕೃಷ್ಣ ಎಂಬುವವರು, ಅವರ ಡಿಪಾರ್ಟ್‌ಮೆಂಟಿನಲ್ಲಿ ಮಾತ್ರವಲ್ಲ ಎಲ್ಲ ಡಿಪಾರ್ಟ್‌ಮೆಂಟುಗಳಲ್ಲಿಯದ ಕೂಡ ಪೂರ್ತಿ ತಮಿಳುನಾಡಿನವರನ್ನು, ಆಂಧ್ರದವರನ್ನು ಸೇರಿಸಿಕೊಂಡಿದ್ದಾರೆ. ಕರ್ನಾಟಕದಲ್ಲಿ ಯಾರೂ ಇಲ್ಲವೇ ? ಮಂತ್ರಿಗಳನ್ನು ಕೂಡ ತಮಿಳುನಾಡಿನಿಂದ ಆಮದು ಮಾಡಿಕೊಳ್ಳಬಾರದೇಕೆ ? ನಮ್ಮ ರಾಜ್ಯದವರೇ ಏಕೆ ಬೇಕು ? ನಮ್ಮ ಕಾಲ ಮೇಲೆ ನಾವೇ ಕಲ್ಲು ಹಾಕಿಕೊಳ್ಳತಕ್ಕ ವಿಶಾಲ ಮನೋಭಾವನೆ ಬೇಡ, ಅದು ವಿಶಾಲ ಮನೋಭಾವನೆಯಲ್ಲ ನಮ್ಮ ಸರ್ಕಾರ ನಮ್ಮಲ್ಲಿ ಯೋಗ್ಯತೆ ಇರುವವರಿಗೆ ಕೆಲಸ ಕೊಡಬೇಕು.

ನಮ್ಮ ರಾಜ್ಯದಲ್ಲಿ ಹರಿಯುವ ನದಿಗಳೇನಿವೆ, ಇವುಗಳಿಗೆ ಪರಸ್ಪರ ಸಂಪರ್ಕ ಕಲ್ಪಿಸುವುದಕ್ಕೆ ಅಂತರನದಿಗಳಿಗೆ ಸಂಪರ್ಕ ಕಲ್ಪಿಸುವುದಕ್ಕೆ ರಾಜ್ಯ ಮಟ್ಟದಲ್ಲಿ ಒಂದು ಯೋಜನೆಯನ್ನು ತಯಾರು ಮಾಡಿದರೆ ಬಹಳ ಪ್ರಯೋಜನವಾಗುತ್ತದೆ. ನಮ್ಮಲ್ಲಿ ಪಶ್ಚಿಮ ಘಟ್ಟಗಳಿಂದ ಪೂರ್ವಕ್ಕೆ ಹರಿಯುವ ನದಿಗಳ ನೀರನ್ನು ಶೇಖರಿಸುವುದರ ಮೂಲಕ ಬೇಸಿಡಯಕೆ, ಬೇಕಾದಷ್ಟು ಪ್ರಯತ್ನ ಮಾಡಬಹುದು. ಈ ಹೊತ್ತು ಬೇಸಾಯದ ಬಗ್ಗೆ ಬೇಕಾದಷ್ಟು ಜನ ಹೇಳಿದ್ದಾರೆ. ನಾನು ಆ ಬಗ್ಗೆ ಹೆಚ್ಚು ಟೀಕೆ ಮಾಡುವುದಕ್ಕೆ ಹೋಗುವುದಿಲ್ಲ.

ಮುಖ್ಯವಾಗಿ ಮಲೆನಾಡಿನ ಜನಕ್ಕೆ ಸಂಬಂಧಪಟ್ಟ ವಿಷಯಗಳ ಬಗ್ಗೆ ತಮ್ಮ ಗಮನಕ್ಕೆ ನಾಲ್ಕಾರು ಮಾತುಗಳನ್ನು ತರಬೇಕಾಗಿದೆ. ಮಲೆನಾಡಿನ ಜನಕ್ಕೆ ಕಟ್ಟಿಗೆ ಬಹಳ ಮುಖ್ಯವಾದುದು, ಇದನ್ನು ಮಳೆ ಬರುವುದಕ್ಕೆ ಮುಂಚೆ ಸ್ಟಾಕು ಮಾಡಿಟ್ಟುಕೊಳ್ಳಬೇಕು. ಮಳೆ ಬಂದಾಗ ಕಟ್ಟಿಗೆ ತರಲಾಗುವುದಿಲ್ಲ. ನಿಮ್ಮಲ್ಲಿ ಇರುವ ಗಾರ್ಡುಗಳಂತಹ ಅಧಿಕಾರಿಗಳು ಇದಕ್ಕೆ ಅವಕಾಶ ಕೊಡುತ್ತಿಲ್ಲ. ಇದರ ಬಗ್ಗೆ ಒಂದು ನಿರ್ಣಯವನ್ನು ತಾವು ಮಾಡಬೇಕು. ನಮ್ಮ ಮಲೆನಾಡಿನಲ್ಲಿ ಅನೂಚಾನವಾಗಿ ನಡೆದುಕೊಂಡು ಬಂದಿರುವ ಒಂದು ಪದ್ಧತಿ ಎಂದರೆ ಮಲೆನಾಡಿನಲ್ಲಿರುವ ರೈತರು ಅವರ ಸ್ವಂತ ಉಪಯೋಗಕ್ಕಾಗಿ ಕಟ್ಟಿಗೆಯನ್ನು ಕಾಡುಗಳಲ್ಲಿ ಕಡಿದು ಹೋಗುತ್ತಿದ್ದಾರೆ. ಇದನ್ನು ಸರಕಾರ ಪುಕಟ್ಟೆಯಾಗಿ ಒದಗಿಸಿಕೊಡಬೇಕು, ಇದರಿಂದ ಇಲ್ಲಿನ ಜನಕ್ಕೆ ಬಹಳ ಅನುಕೂಲವಾಗುತ್ತದೆ. ಆದರೆ ಮಾರಾಟ ಮಾಡುವವರು ಸೌದೆಗಾಗಿ ಬಂದು ಕಾಡನ್ನು ಕಡಿಯುವಾಗ ಅದಕ್ಕೆ ತೆರಿಗೆ ಹಾಕಿ ಅದನ್ನು ನಾವು ಬೇಡ ಎಂದು ಹೇಳುತ್ತಿಲ್ಲ, ಅದುದರಿಂದ ಮಲೆನಾಡಿನ ರೈತರು ಕಾಡಿನೊಳಗೆ ಕಟ್ಟಿಗೆಗಾಗಿ ಮರಗಳನ್ನು ಕಡಿದುಕೊಂಡು ಹೋಗಲು ಸಂಪೂರ್ಣವಾಗಿ ಅವಕಾಶ ಮಾಡಿಕೊಡಬೇಕು. ಏಕೆಂದರೆ ಇನ್ನೇನು ನಮ್ಮ ಭಾಗದಲ್ಲ ಮಳೆಯಾರಂಭವಾಗುತ್ತಿದೆ, ನಮ್ಮ ಮಲೆನಾಡಿನಲ್ಲಿ ತೀರ್ಥಹಳ್ಳಿ, ಆಗುಂಬೆ ಇಲ್ಲೆಲ್ಲಾ ಹೆಚ್ಚು ಮಳೆಬರುವ ಪ್ರದೇಶಗಳು, ಆಗುಂಬೆ ಎನ್ನುವುದು ನಮ್ಮ ದಕ್ಷಿಣ ಇಂಡಿಯಾದ ಚಿರಾಪುಂಜಿ ಎಂದು ಹೆಸರು ಪಡೆದು ಇದ್ದಂತಹಪ್ರದೇಶ ಇದು, ಈಗ ಮಲೆನಾಡಿನಲ್ಲಿ ಕಾಡುಗಳನ್ನು ಕಡಿಯಲು ಆರಂಭವಾಡುತ್ತಿರುವುದರಿಂದ ಕಾಡುಗಳೇ ನಾಶವಾಗುತ್ತಿದೆ ಮತ್ತು ಇದರಿಂದಾಗಿ ಇಂದು ಬರುವ ಮಳೆಯೂ ಕಡಿಮೆಯಾಗುತ್ತಿದೆ. ಇಂತಹ ಕಾಡುಗಳನ್ನು ಕಡಿಯುವುದರಲ್ಲಿ ನಿಮ್ಮ ಅಧಿಕಾರಿಗಳು ಬಹಳ ಚೆನ್ನಾಗಿ ಕೆಲಸ ಮಾಡುತ್ತಿದ್ದಾರೆ. ಇಂತಹ ಅಧಿಕಾರಿಗಳಿಂದಲೇ ಇಂದು ಕಾಡುಗಳು ಹಾಳಾಗಿ ಹೋಗುತ್ತಿವೆ. ಕಾಡುಗಳು ಇನ್ನು ಮುಂದೆ ಆದರೂ ಉಳಿಯುವಂತೆ ಮಾಡಬೇಕು, ಇದರಲ್ಲಿ ನಿಮ್ಮ ಕಾಡುಗಳಲ್ಲಿರುವ ರೇಂಜರುಗಳ ಪಾತ್ರ ಬಹಳ ಹೆಚ್ಚಾಗಿರುತ್ತದೆ. ಇಂದು ಯಾವ ರೇಂಜರನ್ನು ಬೇಕಾದರೆ ತಾವು ನೋಡಬಹುದು. ಅವರು ಲಕ್ಷಾಧಿಕಾರಿಗಳಾಗಿದ್ದಾರೆ ಮತ್ತು ಇತರರಿಗೆ ಸಾಲ ಕೊಡುವ ಸ್ಥಿತಿಯಲ್ಲಿದ್ದಾರೆ, ಸಾಗರದಲ್ಲಿರುವ ರೇಜರನ್ನು ನೋಡಬಹುದು, ಹೊಸಕೋಟೆಯಲ್ಲಿರುವ ರೇಂಜರನ್ನು ನೋಡಬಹುದು, ಅರಸಾಳಿನಲ್ಲಿರುವ ರೇಂಜರನ್ನು ನೋಡಬಹುದು, ಇಂತಹ ರೇಂಜರುಗಳೊಡನೆ ಸಾಮೀಲು ಆಗಿರುವವರು ನಿಮ್ಮ ಸ್ನೇಹಿತರೇ ಇದ್ದಾರೆ. ಇದು ಎಲ್ಲರಿಗೂ ಗೊತ್ತಿರುವ ವಿಷಯವೇ ಆಗಿದೆ. ನಾನು ಇದರ ಬಗ್ಗೆ ಹೆಚ್ಚು ಹೇಳಬೇಕಾಗಿಲ್ಲ. ಇವೊತ್ತಿನ ದಿವಸ ಆಗುಂಬೆ ಕಾಡು ಹಾಳಾಗಿರುವುದು ಇಂತಹ ಅಧಿಕಾರಿಗಳಿರುವುದರಿಂದಲೇ! ನಮ್ಮ ದಟ್ಟವಾದ ಕಾಡುಗಳೆಲ್ಲಾ ನಾಶವಾಗಿ ಹೋಗುತ್ತಿವೆ. ಈ ರೀತಿ ಕಾಡುಗಳು ನಷ್ಟವಾಗಿರುವುದರಿಂದಲೇ ಇಂದು ಮಲೆನಾಡಿನಲ್ಲಿ ಮಳೆ ಬರುವುದು ಕೂಡ ಕಡಿಮೆಯಾಗುತ್ತಿದೆ. ಮುಖ್ಯವಾಗಿ ಇಲ್ಲಿ ನೀಲಗಿರಿ ಮರಗಳನ್ನು ಬೆಳೆಸುತ್ತಿದ್ದಾರೆ. ನಮ್ಮ ಆಗುಂಬೆಯಲ್ಲಿ ಹಿಂದೆ 380 ಇಂಚು ಮಳೆಯಾಗುತ್ತಿತ್ತು. ಇದು ಚಿರಾಪುಂಜಿ ಎಂದು ಹೆಸರು ಪಡೆದಿತ್ತು.

ಇಂದು ಆಗುಂಬೆಯಲ್ಲ ಬರುತ್ತಿರುವ ಮಳೆ 185 ಇಂಚು ಆಗಿದೆ, ಇಷ್ಟು ಇಳಿಯಲು ಕಾರಣ ಇಂದು ದಟ್ಟವಾದ ಕಾಡುಗಳು ಇಲ್ಲಿ ನಾಶವಾಗುತ್ತಿರುವುದರಿಂದ, ಕಾಡುಗಳನ್ನು ಹೆಚ್ಚು ಹೆಚ್ಚು ಬೆಳೆಸಿದರೆ ಮಳೆ ಕೂಡ ಚೆನ್ನಾಗಿ ಬರಲು ಸಹಾಯವಾಗುತ್ತದೆ, ಇಲ್ಲಿರುವ ಮಿಂಕೋ ಫ್ಯಾಕ್ಟರಿಗೆ ಮರಗಳನ್ನು ಕೊಡುತ್ತಿದ್ದಾರೆ. ಅವರು ತಾವಾಗಿಯೇ ಕಾಡಿಗೆ ಬಂದು ಮರಗಳನ್ನು ಕಡಿದು ಅವರೇ ತೆಗೆದುಕೊಂಡು ಹೋಗುತ್ತಿದ್ದಾರೆ. ಇದಕ್ಕೆ ನಿಮ್ಮ ಇಲಾಖೆಯ ರೇಂಜರು ಕೂಡ ಅವಕಾಶ ಕೊಟ್ಟಿದ್ದಾರೆ. ಇದರಿಂದಾಗಿ ಇಲ್ಲಿ ಬಹಳ ಬೆಲೆ ಬಾಳುವಂತಹ ಮರಗಳನ್ನೆಲ್ಲಾ ಇಂದು ಈ ಕಾಡಿನಲ್ಲಿ ಕಡಿದು ಕಾಡು ನಾಶವಾಗುತ್ತಿದೆ. ಕಾಡುಗಳನ್ನು ನಮ್ಮ ದೇಶದಲ್ಲಿ ಹೆಚ್ಚು ಹೆಚ್ಚಾಗಿ ಬೆಳೆಸಲು ಅವಕಾಶ ಮಾಡಿ ಕೊಡಬೇಕು. ಇದಕ್ಕೆ ಬದಲಾಗಿ ನೀಲಗಿರಿ ಮರಗಳನ್ನು ಬೆಳೆಸಲು ಪ್ರಯತ್ನ ಮಾಡುತ್ತಿದ್ದಾರೆ. ನೀಲಗಿರಿ ಮರಗಳನ್ನು ಬೆಳೆಸುವುದು ಸರಿಯಲ್ಲ. ಇದನ್ನು ತಡೆಯಬೇಕು, ಇಲ್ಲದೇ ಇದ್ದರೆ ಮುಂದೆ ಇದನ್ನು ನಾವೇ ತಡೆಗಟ್ಟಬೇಕಾಗಿ ಬರುತ್ತದೆ. ಇನ್ನು ನಮ್ಮ ಮಲೆನಾಡಿನಲ್ಲಿ ಬೆಳೆಯುತ್ತಿರುವ ಅಡಕೆಗೆ ಸರಿಯಾದ ಮಾರುಕಟ್ಟೆ ಸಿಗದೇ ಅಡಕೆಯ ಧಾರಣೆ

(ಶ್ರೀ ಕೋಣಂದೂರು ಲಿಂಗಪ್ಪ)

ಇಳಿಯುತ್ತ ಹೋಗುತ್ತಿದೆ, ಇದರ ಬಗ್ಗೆ ಸರಕಾರ ಒಂದು ಕಮಿಟಿ ಮಾಡಿತ್ತು. ಇದರ ವರದಿ ಕೂಡ ಬಂದಿರಬಹುದು ಎಂದು ನಾನು ತಿಳಿದುಕೊಂಡಿದ್ದೇನೆ, ಇದರ ಬಗ್ಗೆ ಏನಾಗಿದೆ ಎನ್ನುವುದನ್ನು ಮಾನ್ಯ ಮಂತ್ರಿಗಳು ಇಲ್ಲಿ ಉತ್ತರ ಕೊಡುವಾಗ ಹೇಳಬೇಕೆಂದು ಪ್ರಾರ್ಥನೆ ಮಾಡುತ್ತೇನೆ. ಇನ್ನು ಡಿಸ್ಟ್ರಿಕ್ಟು ರೇಂಜರುಗಳನ್ನು ನೇಮಕ ಮಾಡುವಾಗ ಒಂದೇ ಜಿಲ್ಲೆಗೆ ಸೇರಿದವರನ್ನು ಅಲ್ಲಿಗೆ ನೇಮಕ ಮಾಡಬಾರದು. ಅವರು ಯಾವ ಜಿಲ್ಲೆಯವರೋ ಆ ಜಿಲ್ಲೆ ಬಿಟ್ಟು ಬೇರೆ ಜಿಲ್ಲೆಗೆ ಅವರನ್ನು ನೇಮಕ ಮಾಡಬೇಕು ಮತ್ತು ಯಾವ ರೇಂಜರನ್ನೇ ಆಗಲೀ ಒಂದು ವರ್ಷಕ್ಕಿಂತ ಹೆಚ್ಚಿಗೆ ಒಂದು ಕಡೆಯಲ್ಲಿ ಇರುವಂತೆ ಮಾಡಬಾರದು, ಇನ್ನು ಮುಂದಾದರೂ ಕಾಡುಗಳನ್ನು ನಾಶವಾಗುವುದಕ್ಕೆ ಅವಕಾಶ ಕೊಡದೆ ಹೆಚ್ಚು ಕಾಡುಗಳನ್ನು ಬೆಳೆಸುವ ಕಡೆಗೆ ಲಕ್ಷ ಕೊಡಬೇಕೆಂದು ಹೇಳುತ್ತೇನೆ ಮತ್ತು ಅರಣ್ಯ ಇಲಾಖೆಯಲ್ಲಿರುವ ದೋಷಗಳನ್ನು ಸಾಧ್ಯವಾದಷ್ಟು ಕಡಿಮೆ ಮಾಡಬೇಕೆಂದು ಮತ್ತು ದೇಶಕ್ಕೆ ಕಲ್ಯಾಣವಾಗುವಂತೆ ಮಾಡಬೇಕೆಂದು ಹೇಳಿ ಇಲ್ಲಿ ತಂದಿರುವ ಡಿಮ್ಯಾಂಡುಗಳನ್ನು ಸಂಪೂರ್ಣವಾಗಿ ವಿರೋಧಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಹಂಜಿ ಶಿವಣ್ಣ (ತರೀಕೆರೆ).—ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಮಂಡಿಸಿರತಕ್ಕ ವ್ಯವಸಾಯ ಇಲಾಖೆಯ ಬೇಡಿಕೆಗಳನ್ನು ಸ್ವಾಗತಿಸುತ್ತಾ, ನಾಲ್ಕಾರು ಮಾತುಗಳನ್ನು ಹೇಳಲು ಅಪೇಕ್ಷೆ ಮಾಡುತ್ತೇನೆ. ವ್ಯವಸಾಯದ ಇಲಾಖೆಯಲ್ಲಿರುವ ಅಧಿಕಾರಿಗಳು ದೇಶದ ಜನತೆಗೆ ಮುಖ್ಯವಾಗಿ ಆಗಬೇಕಾದ ಕೆಲಸಗಳನ್ನು ಮಾಡಿಕೊಡುವುದರಲ್ಲಿ ಬಹಳ ಸಂಕೋಚ ಪಡುತ್ತಿರುವುದು ನಮಗೆ ಕಂಡುಬರುತ್ತಿದೆ. ನಮ್ಮ ತಾಲ್ಲೂಕಿನಲ್ಲೇ ಇರುವ ಅಧಿಕಾರಿಗಳು ಬೀಜಗಳನ್ನು ಉತ್ಪತ್ತಿ ಮಾಡುವುದರಲ್ಲಿ ಮತ್ತು ಇದನ್ನು ಹಂಚುವುದರಲ್ಲಿ ಸರಿಯಾಗಿ ಕೆಲಸ ಮಾಡುತ್ತಿಲ್ಲ. ಒಳ್ಳೆಯ ಬೀಜಗಳನ್ನು ವ್ಯವಸಾಯಗಾರರಿಗೆ ತರಿಸಿ ಹಂಚುವ ವ್ಯವಸ್ಥೆ ಮಾಡಬೇಕೆಂದು ಸರಕಾರದಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ನಮ್ಮ ತರೀಕೆರೆ ತಾಲ್ಲೂಕಿನಲ್ಲಿ ಅರಸೀಕೆರೆ ಫಾರಂ ಎಂದು ಇದೆ, ಇದರಲ್ಲಿ ಸರಕಾರ ಸುಮಾರು 380 ಎಕರೆಗಳಷ್ಟು ಭೂಮಿಯನ್ನು ವಶಮಾಡಿಕೊಂಡಿದ್ದಾರೆ, ಇದರಲ್ಲಿ ಸುಮಾರು 40 ಎಕರೆಯಷ್ಟು ಮಾತ್ರ ಸಾಗುವಳಿ ಮಾಡಿದ್ದಾರೆ. ಇಲ್ಲಿ ಒಂದು ಟ್ಯಾಂಕು ಮಾಡಿದ್ದಾರೆ ಮತ್ತು ಇನ್ನಿತರ ವಿಶೇಷವಾದ ಸಲಕರಣೆಗಳನ್ನು ಒದಗಿಸಿ ಇದನ್ನು ಒಂದು ಬಿಳೀ ಆನೆಯಂತೆ ಸಾಕುತ್ತಿದ್ದಾರೆ. ಈ ರೀತಿ 350 ಎಕರೆಗಳನ್ನು ಫಾರಂ ಮಾಡುವುದರ ಬದಲು ಅದನ್ನು ರೈತರಿಗೆ ಕೊಟ್ಟಿದ್ದರೆ ಅವರು ಉತ್ತಮ ಬೀಜ ಹಾಕಿ ಹೆಚ್ಚು ಉತ್ಪತ್ತಿ ಮಾಡಲು ಸಾಧ್ಯವಾಗುತ್ತಿರಲಿಲ್ಲವೇ ? ರೈತರಿಗೆ ಹೆಚ್ಚು ಉತ್ಪತ್ತಿ ಮಾಡಲು ಅವರಿಗೆ ಬೇಕಾಗುವ ಒಳ್ಳೆ ಬೀಜ ಹಾಗೂ ಗೊಬ್ಬರ ಇವುಗಳನ್ನು ಸಕಾಲದಲ್ಲಿ ಒದಗಿಸಿಕೊಟ್ಟರೆ ಅವರು ಹೆಚ್ಚು ಉತ್ಪತ್ತಿ ಮಾಡಲು ಸಾಧ್ಯವಾಗುತ್ತದೆ, ಇದಲ್ಲದೆ ನಮ್ಮ ಅರಣ್ಯ ಇಲಾಖೆಯಲ್ಲಿರುವ ಅಧಿಕಾರಿಗಳು ಸರಿಯಾಗಿ ಕೆಲಸ ಮಾಡದೇ ಇರುವುದರಿಂದಾಗಿ ಇಂದು ನಮ್ಮ ದೇಶದ ಕಾಡುಗಳೆಲ್ಲಾ ಹಾಳಾಗಿ ಹೋಗುತ್ತಿವೆ. ಇದರ ಬಗ್ಗೆ ಈಗಾಗಲೇ ನಮ್ಮ ಮಾನ್ಯ ಸದಸ್ಯರಾದ ಶ್ರೀ ಕೋಣಂದೂರು ಲಿಂಗಪ್ಪನವರು ಚೆನ್ನಾಗಿ ಹೇಳಿದ್ದಾರೆ. ಇಲ್ಲಿರುವ ಅಧಿಕಾರಿಗಳೇ ಲಂಚ ಹೊಡೆದು ಅದನ್ನು ಹಂಚಿಕೊಳ್ಳುವಾಗ ಅವರವರಲ್ಲೇ ಹೊಡೆದಾಟವಾಗಿ ಇಂದು ಅದು ಎನ್‌ಕ್ವೈರಿ ನಡೆಯುತ್ತಿದೆ ಎಂದೂ ಕೇಳುತ್ತೇನೆ. ಇದೇನಾಗಿದೆಯೋ ಇನ್ನೂ ನಮಗೆ ತಿಳಿಯಲಿಲ್ಲ. ಇಂತಹ ಅಧಿಕಾರಿಗಳ ಬಗ್ಗೆ ಸರಕಾರ ಸಾಕಷ್ಟು ನಿಗಾ ಇಡಬೇಕೆಂದು ಸಲಹೆ ಮಾಡುತ್ತೇನೆ. ಇಂದು ಅಧಿಕಾರಿಗಳ ಹಾವಳಿಯಿಂದಾಗಿ ಕಾಡುಗಳು ಬೆಳೆಯಲು ಸಾಧ್ಯವೇ ಇಲ್ಲ. ಇವು ಹಾಳಾಗಿ ಹೋಗುತ್ತಿವೆ. ಇಂತಹ ಒಂದು ಅಧಿಕಾರಿಗಳ ಮೆಷಿನರಿ ನಮ್ಮ ದೇಶದಲ್ಲಿ ಇಂದು ಬಂದಿದೆ. ಇದೊಂದು ಪ್ರಾಮುಖ್ಯವಾದ ಇಲಾಖೆ, ಇದನ್ನು ಸರಿಪಡಿಸಲು ನಮ್ಮ ಮಾನ್ಯ ಮಂತ್ರಿಗಳು ಪ್ರಯತ್ನ ಮಾಡಿ ಸರಿಪಡಿಸುತ್ತಾರೆಂದು ನಾನು ನಂಬುತ್ತೇನೆ. ಆದರೆ ಇವರಿಂದಲೂ ಇದು ಆಗುತ್ತೆ ಎಂದು ನಾನು ಭಾವಿಸುವುದಿಲ್ಲ. ಆದರೂ ಶಕ್ತಿಮೀರಿ ಪ್ರಯತ್ನ ಮಾಡಿ ಇದನ್ನು ಸರಿಪಡಿಸಬೇಕೆಂದು ಹೇಳುತ್ತೇನೆ. ಕಾಡುಗಳಲ್ಲಿ ಹೊಸದಾಗಿ ಪ್ಲಾಂಟೇಷನ್‌ಗಳನ್ನು ಮಾಡಬೇಕೆಂದು ಈಚೆಗೆ ನೀಲಗಿರಿ ಮರಗಳನ್ನು ಬೆಳೆಸುತ್ತಿದ್ದಾರೆ. ಇದರಿಂದೇನೂ ಅನುಕೂಲವಾಗುವುದಿಲ್ಲ, ಇಂತಹ ನೀಲಗಿರಿ ಮರಗಳನ್ನು ಬೆಳೆಸುವುದನ್ನು ಕೈಬಿಡಬೇಕೆಂದು ಸಲಹೆ ಮಾಡುತ್ತೇನೆ. ಇದಕ್ಕೆ ಬದಲು ಇರುವ ಕಾಡುಗಳನ್ನು ಇನ್ನೂ ಚೆನ್ನಾಗಿ ಬೆಳೆಸುವುದರ ಕಡೆಗೆ ಮತ್ತು ಕಾಡುಗಳು ನಾಶವಾಗದ ಹಾಗೆ ತಕ್ಕ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಸಲಹೆ ಮಾಡುತ್ತೇನೆ. ಇದಲ್ಲದೆ ನಮ್ಮ ಕಾಡುಗಳಲ್ಲಿರುವ ಅಧಿಕಾರಿಗಳು ಎಂದರೆ ರೇಂಜರುಗಳನ್ನು ಸ್ವಲ್ಪ ಹತೋಟಿಯಲ್ಲಿಡಬೇಕು,

ಇವರಿಂದಲೇ ಇಂದು ಕಾಡುಗಳು ಹಾಳಾಗಿ ಹೋಗುತ್ತಿವೆ, ಇದರ ಕಡೆಗೆ ಲಕ್ಷ ಕೊಡಬೇಕು. ಇನ್ನು ಹಿಂದಿನ ಸರಕಾರ ಕೆಲವು ಕಡೆ ಅರಣ್ಯದ ಜಮೀನುಗಳನ್ನು ರಿಲೀಸು ಮಾಡಿ ಸಾಗುವಳಿಗಾಗಿ ಕೊಟ್ಟಿದ್ದರು.

1-30 P. M.

ಆದರೆ ಕಾಡು ಇಲ್ಲದಿರುವ ಕಡೆಗಳಲ್ಲಿಯೇ ಹಿಂದಿನ ಸರ್ಕಾರದವರು ಸಾಗುವಳಿಗೆ ಜಮೀನನ್ನು ರಿಲೀಜ್ ಮಾಡಿದ್ದಾರೆ. ಅದನ್ನು ಈಗಿನ ಸರ್ಕಾರದವರು ಕೊಡುವುದಕ್ಕೆ ಅಡ್ಡಿ ಮಾಡುವುದು ಸರಿಯಲ್ಲ. ಈ ಜಾಗಗಳಲ್ಲಿ ಈಗಾಗಲೆ ರೈತರು ತಮ್ಮ ಬೆವರನ್ನು ಸುರಿಸಿ ಬೆಳೆ ಬೆಳೆಯುತ್ತಾ ಇದ್ದಾರೆ. ಅವರ ಒಂದು ತ್ಯಾಗಕ್ಕಾದರೂ ಸಹ ಆ ಜಮೀನುಗಳನ್ನು ಅವರಿಗೇ ಬಿಟ್ಟುಕೊಡಬೇಕು. ಈಗ ಅಲ್ಲಿ ಕಾಡನ್ನು ಬೆಳೆಸುವುದು ಕಷ್ಟವಾಗುತ್ತದೆ. ಕಾಡನ್ನು ಉಳಿಸಬೇಕು ನಿಜ. ಆದರೆ ಜನರು ಸಹ ಉಳಿಯಬೇಕಾಗುತ್ತದೆ. ಆದ್ದರಿಂದ ಸಮಯ ಸನ್ನಿವೇಶ ನೋಡಿಕೊಂಡು ಹೊಸ ಕಾಡನ್ನು ಸಾಗುವಳಿಗೆ ಕೊಡದಿದ್ದರೂ ಸಹ ಈಗ ಹಿಂದಿನ ಸರ್ಕಾರದವರು ರಿಲೀಜ್ ಮಾಡಿರುವ ಜಮೀನನ್ನಾದರೂ ಸಹ ಅವರ ಸ್ವಾಧೀನಕ್ಕೆ ಬಿಟ್ಟುಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಇಂದು ನಮ್ಮ ತಾಲ್ಲೂಕ್‌ನಲ್ಲಿ ಆನೆಗಳ ಹಾವಳಿ ಜಾಸ್ತಿಯಾಗಿದೆ. ಕಾಡುಮೃಗಗಳನ್ನು ನಾಶ ಮಾಡಬಾರದು ಎಂಬುದನ್ನು ಒಪ್ಪುತ್ತೇನೆ. ಆದರೆ ಇವುಗಳ ಚೇಷ್ಟೆ ಜಾಸ್ತಿಯಾಗಿದೆ. ಆದ್ದರಿಂದ ಇವುಗಳನ್ನು ಗುಂಡಿಟ್ಟು ಕೊಲ್ಲಬೇಕು ಇಲ್ಲವೇ ದೂರ ಅಟ್ಟುವುದಕ್ಕೆ ಪ್ರಯತ್ನ ಮಾಡಬೇಕೆಂದು ಹೇಳಿ ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ತಮ್ಮನ್ನು ವಂದಿಸಿ ನನ್ನ ಎರಡು ಮಾತುಗಳನ್ನು ಮುಕ್ತಾಯ ಮಾಡುತ್ತೇನೆ.

† ಶ್ರೀ ಬಿ. ಎಸ್. ಪಾಟೀಲ್ (ಬಾಗೇವಾಡಿ).—ಮಾನ್ಯ ಅಧ್ಯಕ್ಷರೇ, ಮಾನ್ಯ ಅರಣ್ಯ ಸಚಿವರು ಮಂಡಿಸಿರುವ ಡಿಮ್ಯಾಂಡುಗಳನ್ನು ವಿರೋಧಿಸುತ್ತಾ ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ. ಒಕ್ಕಲುತನವೇ ಈ ದೇಶದ ಬೆನ್ನೆಲುಬು ಎಂಬುದನ್ನು ನಾವೆಲ್ಲರೂ ಒಪ್ಪಿಕೊಂಡಿದ್ದೇವೆ. ಈ ಒಕ್ಕಲುತನಕ್ಕೆ ಸರ್ಕಾರ ಬೇಕಾದಷ್ಟು ಗಮನಕೊಟ್ಟು ಅದರ ಸುಧಾರಣೆಗೆ ಪ್ರಯತ್ನ ಮಾಡುತ್ತಿದ್ದರೂ ಸಹ, ಅದರ ಅನುಕೂಲಗಳು ರೈತರಿಗೆ ಮಾತ್ರ ಮುಟ್ಟದೇ ಇರುವುದು ಚಿಂತಾಜನಕವಾಗಿದೆ. ಸರ್ಕಾರದವರು ಇದರ ಕಡೆಗೆ ತೀವ್ರವಾದ ಗಮನ ಕೊಡಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ. ಪ್ರತಿಯೊಂದು ತಾಲ್ಲೂಕ್‌ನಲ್ಲಿಯೂ ಸಹ ರಿಗ್ ಮತ್ತು ಬುಲ್ಡೋಜರನ್ನು ರೈತರಿಗೆ ಒದಗಿಸಲು ಒಂದೊಂದು ಸೆಂಟರನ್ನು ಪ್ರಾರಂಭ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಬಾವಿ ತೆಗೆಸುವುದಕ್ಕೆ ತಕಾವಿ ಸಾಲವನ್ನು ಕೊಡಬೇಕು ಮತ್ತು ಬಾವಿಗಳನು ಆಳಪಡಿಸುವುದಕ್ಕೆ ಈಗ ಮೂರು ಕಂತುಗಳಲ್ಲಿ ಸಾವಿರ ರೂಪಾಯಿಗಳವರೆಗೆ ಕೊಡುತ್ತಿದ್ದಾರೆ. ಈ ಹಣವನ್ನು ರೈತರು ಪಡೆಯಬೇಕಾದರೆ ಇಂತಿಂತಹವರಿಗೆ ಇಷ್ಟಿಷ್ಟು ಎಂದು ಫಿಕ್ಸ್ ಆಗಿಬಿಟ್ಟಿರುತ್ತದೆ. ಆ ರೀತಿ ಕೊಟ್ಟರೆ ರೈತರಿಗೆ ಸಿಕ್ಕುವುದು ಕೇವಲ 500 ರೂಪಾಯಿಗಳು ಮಾತ್ರ, ಇದು ಸರಿಯಲ್ಲ. ಸಾವಿರ ರೂಪಾಯಿಗಳು ಸಹ ರೈತರಿಗೆ ನೇರವಾಗಿ ಮುಟ್ಟುವ ವ್ಯವಸ್ಥೆ ಮಾಡಬೇಕು. ಬೀಜ ಮತ್ತು ಗೊಬ್ಬರ ಕೂಡ ರೈತರಿಗೆ ಸಕಾಲದಲ್ಲಿ ಕೊಡುವುದಿಲ್ಲ. ಯೂರಿಯಾ ಸಹ ಸಾಕಷ್ಟು ರೈತರಿಗೆ ಸಿಗದೆ ಬ್ಲಾಕ್‌ಮಾರ್ಕೆಟ್ಟಿನಲ್ಲಿ ಒಂದಕ್ಕೆ ಎರಡರಷ್ಟು ಮೂರರಷ್ಟು ಕೊಟ್ಟು ಕೊಳ್ಳಬೇಕಾಗಿದೆ. ಇದನ್ನು ತಪ್ಪಿಸಲು ಇದಕ್ಕಾಗಿ ಒಂದು ಸೆಂಟರನ್ನು ಮಾಡಿ ರೈತರಿಗೆ ಸಾಕಷ್ಟು ಸಿಗುವಂತೆ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇದರ ಜೊತೆಗೆ ಇಂದು ರೈತರು ತಾವು ಬೆಳೆದ ಬೆಳೆಯನ್ನು ಮಾರಾಟ ಮಾಡುವುದಕ್ಕೆ ಪೇಟೆಗೆ ಬಂದಾಗ ಹಾದಿಯೊಳಗೇನೇ ಬಹಳಷ್ಟು ತೊಂದರೆಯಾಗುತ್ತಿದೆ. 5 ಚೀಲದಷ್ಟು ಮಾಲನ್ನು ಪೇಟೆಗೆ ತಂದರೆ 2 ಚೀಲದಷ್ಟು ಹಾಳಾಗುತ್ತಿದೆ. ತಂದಂಥ ಮಾಲಿಗೆ ಒಳ್ಳೆಯ ಧಾರಣೆ ರೈತರಿಗೆ ಸಿಗುವಂತಹ ವ್ಯವಸ್ಥೆ ಮಾಡಬೇಕೆಂದು ಮಾನ್ಯ ಮಂತ್ರಿಗಳಲ್ಲಿ ವಿಜ್ಞಾಪನೆ ಮಾಡಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಚ್. ಜಿ. ಚೆನ್ನಪ್ಪ (ಮಾಗಡಿ).—ಮಾನ್ಯ ಅಧ್ಯಕ್ಷರೇ, ಈ ದಿವಸ ನಮ್ಮ ಮುಂದೆ ಇರತಕ್ಕಂಥ ವ್ಯವಸಾಯ ಇಲಾಖೆಯ ಬೇಡಿಕೆಗಳ ಮೇಲೆ ಮಾತನಾಡುವುದಕ್ಕೆ ನನಗೆ ಅವಕಾಶ ಕೊಟ್ಟಿದ್ದಕ್ಕೆ ನಾನು ಮೊಟ್ಟಮೊದಲನೆಯದಾಗಿ ತಮ್ಮನ್ನು ವಂದಿಸುತ್ತಾ ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಬಯಸುತ್ತೇನೆ. ವ್ಯವಸಾಯ ಇಲಾಖೆ ನಮ್ಮ ದೇಶದಲ್ಲಿ ಚೆನ್ನಾಗಿ ಕೆಲಸ ಮಾಡುತ್ತಿದೆ ಎಂದು ಹೇಳಿದರೆ ಅದು ನಗೆಪಾಟಲಾಗಬಹುದು. ಈ ಇಲಾಖೆಯಲ್ಲಿ ನೌಕರರ ಸಂಖ್ಯೆ ಹೆಚ್ಚು ಇದೆಯೇ ಹೊರತು ಕೆಲಸ ಮಾತ್ರ ಏನೇನೂ ಆಗುತ್ತಿಲ್ಲ. ಒಬ್ಬ ಅಗ್ರಿಕಲ್ಚರಲ್ ಎಕ್ಸ್‌ಟೆನ್

(ಶ್ರೀ ಎಚ್. ಜಿ. ಚೆನ್ನಪ್ಪ)

ಷನ್ ಆಫೀಸರ್ ಇದ್ದಕಡೆ ಇಂದು ನಾಲ್ಕು ಜನ ಆಗಿದ್ದಾರೆ. ಒಂದೊಂದು ಬ್ಲಾಕ್‌ನಲ್ಲಿಯೂ 20 ಜನ ಗ್ರಾಮಸೇವಕರು ಇದ್ದಾರೆ. ಆದರೆ ಕೆಲಸಕಾರ್ಯಗಳು ಮಾತ್ರ ಸುಗಮವಾಗಿ ನಡೆಯುತ್ತಿಲ್ಲ. ಈ ಕಾರಣದಿಂದ ಈ ಇಲಾಖೆಯನ್ನು ತೋಟಗಾರಿಕೆ ಇಲಾಖೆಯೊಡನೆ ಮರ್ಜ ಮಾಡಿದರೆ ಒಳ್ಳೆಯದಾಗುತ್ತದೆಂದು ನನಗನ್ನಿಸುತ್ತದೆ. ಇಂದು ತೋಟಗಾರಿಕೆ ಇಲಾಖೆ ಸ್ವಲ್ಪ ಉತ್ತಮವಾದಂಥ ಕೆಲಸವನ್ನು ಮಾಡುತ್ತಿದೆ. ಇಂದು ಎಲ್ಲ ತಾಲ್ಲೂಕ್‌ಗಳಲ್ಲಿಯೂ ಹಣ್ಣಿನ ತೋಟಗಳನ್ನು ಬೆಳೆಸುತ್ತಿರುವ ಚಟುವಟಿಕೆಗಳನ್ನು ನಾವು ಕಾಣುತ್ತಿದ್ದೇವೆ. ಆದರೆ ಇಂದು ವ್ಯವಸಾಯ ಇಲಾಖೆಗೆ ಹೋಗಿ ನೋಡಿದರೆ ಒಬ್ಬರೂ ಅಧಿಕಾರಿಗಳು ಇರುವುದಿಲ್ಲ. ಗೊಬ್ಬರದ ಹಂಚಿಕೆ ಕೆಲಸವನ್ನು ಸಹ ಇವರಿಂದ ಬೇರೆಯವರಿಗೆ ವಹಿಸಿರುವುದರಿಂದ ಇವರಿಗೆ ಬೇರೆ ಕೆಲಸವಿಲ್ಲದೆ ಕೇವಲ ಕಾಲ ಕಳೆಯುವ ಇಲಾಖೆಯಾಗಿದೆ. ಇವರಿಗಾಗಿ ಕೊಡುತ್ತಿರುವ ಹಣದಿಂದ ದೇಶಕ್ಕೆ ಪ್ರಗತಿಯಾಗಲಾರದೆಂದು ನನಗನ್ನಿಸುತ್ತದೆ. ಈ ಇಲಾಖೆಗೆ ಕೊಡುವ ಹಣವನ್ನು ಅರಣ್ಯ ಬೆಳೆಸಲು ಮತ್ತು ತೋಟಗಾರಿಕೆ ಇಲಾಖೆಗೆ ಕೊಟ್ಟರೆ ಹೆಚ್ಚಿನ ಪ್ರಯೋಜನವಾಗಬಹುದು, ದೇಶಕ್ಕೂ ಫಲಕಾರಿಯಾಗಬಹುದೆಂದು ನನಗನ್ನಿಸುತ್ತದೆ. ಯಾವ ಜಾಗಗಳಲ್ಲಿ ಏನೂ ಬೆಳೆಯುವುದಿಲ್ಲ ಎಂದು ಪಾಳು ಬಿಡಲಾಗಿತ್ತೋ ಅಂತಹ ಜಾಗವನ್ನು ಇಂದು ತೋಟಗಾರಿಕೆ ಇಲಾಖೆಯವರು ತೆಗೆದುಕೊಂಡು ಆ ಜಾಗಗಳಲ್ಲಿ ಹಣ್ಣಿನ ಗಿಡಗಳನ್ನು ನೆಟ್ಟು ನಗುವ ನಂದನ ವನದಂತೆ ಅಭಿವೃದ್ಧಿ ಮಾಡಿದ್ದಾರೆ. ಇನ್ನು ಹತ್ತಾರು ವರ್ಷಗಳು ಕಳೆದರೆ ಈ ಇಲಾಖೆಯಿಂದ ಬರುವ ಉತ್ಪತ್ತಿ ಒಂದು ಇಲಾಖೆಯನ್ನು ಸಾಕಲು ಅವಕಾಶವಾಗುತ್ತದೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ಆದ್ದರಿಂದ ಈ ಇಲಾಖೆಗೆ ಹೆಚ್ಚು ಪ್ರೋತ್ಸಾಹ ಕೊಡಬೇಕು. ಫಾರೆಸ್ಟ್ ವಿಷಯದಲ್ಲಿ ಹಿಂದೆ ಇದ್ದಂತಹ ಸರ್ಕಾರದವರು ಒಂದು ಯೋಜನೆಯನ್ನು ಜಾರಿಗೆ ತಂದಿದ್ದರು. ಏನೆಂದರೆ ಗೋಮಾಳಗಳಲ್ಲಿ ಯೂಕಲಿಪ್ಟಸ್‌ನ್ನು ಬೆಳೆಸಿದರೆ ಸರ್ಕಾರದವರು 50 ಪರ್ಸೆಂಟ್ ಸಬ್ಸಿಡಿ ಕೊಡುವುದು, ಉಳಿದ 50 ಪರ್ಸೆಂಟ್‌ನ್ನು ಪಂಚಾಯಿತಿಯವರು ಮತ್ತು ತಾಲ್ಲೂಕ್ ಬೋರ್ಡಿನವರು ವಹಿಸಿಕೊಳ್ಳತಕ್ಕದ್ದು ಎಂದು ಈ ಗಿಡಗಳನ್ನು ಬೆಳೆಸುವುದರಿಂದ ಪಂಚಾಯಿತಿಗೂ ಆದಾಯ ಬರುತ್ತದೆ ಮತ್ತು ದೇಶಕ್ಕೆ ಮಳೆ ಬರಲು ಆಧಾರವಾಗುತ್ತದೆಂದು ಈ ಸ್ಕೀಮನ್ನು ಕಾರ್ಯಗತ ಮಾಡಲಾಯಿತು. ಇಂದು ಕೆಲವು ಭಾಗಗಳಲ್ಲಿ ಆ ಯೋಜನೆ ಯಶಸ್ವಿಯಾಗಿ ಕೆಲಸ ಮಾಡಿದೆ. ನಮ್ಮ ತಾಲ್ಲೂಕ್‌ನ ಅಜ್ಜನಹಳ್ಳಿಯ ಗೋಮಾಳದಲ್ಲಿ 40 ಎಕರೆಯಲ್ಲಿ ಇದನ್ನು ಬೆಳೆಸಿದ್ದಾರೆ. ಮುಂದೆ ಇದನ್ನು ಮಾರಾಟ ಮಾಡಿದಾಗ ಅಲ್ಲಿಯ ಪಂಚಾಯಿತಿಗೆ ಲಕ್ಷಕ್ಕೂ ಹೆಚ್ಚು ವರಮಾನ ಬರುವುದರಿಂದ ಆ ಹಣದಿಂದ ಪಂಚಾಯಿತಿಯ ಅಭಿವೃದ್ಧಿಕಾರ್ಯಗಳನ್ನು ಯಾರ ಸಹಾಯವೂ ಇಲ್ಲದೆ ನಡೆಸಿಕೊಂಡು ಹೋಗತಕ್ಕ ಅನುಕೂಲತೆ ಬರುತ್ತದೆ. ಆದ್ದರಿಂದ ಈ ಸ್ಕೀಮನ್ನು ಮುಂದುವರಿಸಿಕೊಂಡು ಬರಲು ಈಗಿನ ಸರ್ಕಾರದವರು ಒಪ್ಪುತ್ತಾರೆಂದು ನಾನು ನಂಬಿದ್ದೇನೆ. ಚೆನ್ನೇನಹಳ್ಳಿಯ ಗೋಮಾಳದಲ್ಲಿ ಸಹ 40 ಎಕರೆಯಲ್ಲಿ ನೀಲಗಿರಿ ಮರ ಬೆಳೆಯಲಾಗಿದೆ. ಈ ಹಳ್ಳಿ ಬೆಂಗಳೂರು ಮತ್ತು ಮಾಗಡಿಯ ರಸ್ತೆಯ ಮಧ್ಯಭಾಗದಲ್ಲಿರುವುದರಿಂದ ಮಾನ್ಯ ಮಂತ್ರಿಗಳು ಹೋಗಿ ನೋಡಬಹುದು. ಆ ರೀತಿ ಹೋಗಿ ನೋಡಿದರೆ ಈ ಎಲ್ಲ ಕಡೆಗಳಲ್ಲಿಯೂ ಬೆಳೆಸುವುದಕ್ಕೆ ಪ್ರೋತ್ಸಾಹ ಕೊಡಬೇಕೆಂಬ ಉತ್ಸಾಹ ಮಾನ್ಯ ಮಂತ್ರಿಗಳಿಗೆ ಬರುತ್ತದೆ. ಆದ್ದರಿಂದ ಈ ಸ್ಕೀಮನ್ನು ಮುಂದುವರಿಸಬೇಕೆಂದು ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ. ನಾನು ವ್ಯವಸಾಯ ಇಲಾಖೆಯನ್ನು ಕ್ರಿಟಿಸೈಜ್ ಮಾಡುತ್ತಿಲ್ಲ. ಅಲ್ಲಿ ನೌಕರರ ಸಂಖ್ಯೆ ಜಾಸ್ತಿಯಾಗುತ್ತಿದೆಯೇ ಹೊರತು ಕಾರ್ಯಗಳು ಆಗುತ್ತಿಲ್ಲ. ಆ ಇಲಾಖೆಯಲ್ಲಿ ಏನಾದರು ಕೆಲಸವಾಗಬೇಕಾದರೆ ಅಲ್ಲಿ ಹೋಗಿ ನೋಡಿದಾಗ ಯಾರೂ ಇರುವುದೇ ಇಲ್ಲ. ಎಲ್ಲೆಲ್ಲಿಯೋ ಹೋಗಿರುತ್ತಾರೆ. ಈ ಇಲಾಖೆ ಸಮರ್ಪಕವಾಗಿ ಕೆಲಸ ಮಾಡುತ್ತಿಲ್ಲ ಎಂಬುದು ನನ್ನ ಒಬ್ಬನ ಅಭಿಪ್ರಾಯವಲ್ಲ, ಸಾರ್ವಜನಿಕರ ಅಭಿಪ್ರಾಯವೂ ಸಹ ಆಗಿದೆ. ಈ ಕಾರಣದಿಂದ ಇಲ್ಲಿಯ ಸ್ಟಾಫನ್ನು ಕಡಿಮೆ ಮಾಡಿ ಆ ಹಣವನ್ನು ಬೇರೆ ಬಾಬಿಗೆ ಖರ್ಚು ಮಾಡಬಹುದೆಂದು ಹೇಳುತ್ತೇನೆ. ಇಂದು ರೀಸರ್ಚ್ ಫಾರಂಗಳನ್ನು ತೆರೆದಿದ್ದಾರೆ. ಇದರಿಂದ ಏನೇನು ಪ್ರಯೋಜನವಾಗುತ್ತಿಲ್ಲ. ಇಲ್ಲಿಗೆ ನಾವು ಏನಾದರು ಬರೆದು ಕೇಳಿದರೆ ಅವರಿಂದ ಉತ್ತರವೇ ಬರುವುದಿಲ್ಲ. ಮತ್ತು ಇವರುಗಳು ಗ್ರಾಮಗಳಿಗೆ ಬಂದು ಸಲಹೆ ಕೊಡತಕ್ಕ ಮಟ್ಟದಲ್ಲಿಯೂ ಸಹ ಇಲ್ಲ. ಇಂದು ನಮ್ಮ ಭಾಗದಲ್ಲಿ ತೆಂಗಿನ ಮರಗಳಿಗೆ ರೋಗ ಬಂದಿದೆ. ಅವರ ಸುಳಿಗಳು ಸುರುಳಿಸುತ್ತುಕೊಂಡು ಒಣಗಿಹೋಗುತ್ತಿವೆ. 30–40 ಅಡಿ ಎತ್ತರದ ಮರಗಳಿಗೆ ಈ ರೋಗ ಬಂದಿದೆ. ಮಲೆನಾಡಿನ ಅಡಿಕೆ ಮರಗಳಿಗೆ ರೋಗ ಬಂದಿದ್ದರಿಂದ ಅಲ್ಲಿ ಬಹಳಷ್ಟು ನಷ್ಟವಾಯಿತು. ಇಲ್ಲಿಯೂ ಸಹ ಜಾಗ್ರತೆ ಇದಕ್ಕೆ ಕ್ರಮ ತೆಗೆದುಕೊಳ್ಳದಿದ್ದರೆ, ರೆಮಿಡಿ ಕಂಡುಹಿಡಿಯ

ದಿದ್ದರೆ ತೆಂಗಿನ ಬೆಳೆಗೆ ಉತ್ತೇಜನ ಕೊಟ್ಟಂತಾಗುವುದಿಲ್ಲವೆಂದು ಈ ಸಂಧರ್ಭದಲ್ಲಿ ಮಾನ್ಯ ಮಂತ್ರಿಗಳ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ. ತೆಂಗಿನ ಬೆಳೆಗಾರರ ಆಸೆ ಕುಗ್ಗಿ ಈ ಬೆಳೆಯನ್ನೇ ಕೈಬಿಡುವ ಪರಿಸ್ಥಿತಿ ಬರಬಹುದು. ಇದರಿಂದ ದೇಶದ ಆರ್ಥಿಕ ವರಮಾನ ಕುಗ್ಗುತ್ತದೆ.

ಈಗಾಗಲೇ ಕೆಲವು ದಿವಸಗಳ ಹಿಂದೆ ಅಗ್ರಿಕಲ್ಚರಲ್ ಯೂನಿವರ್ಸಿಟಿಯ ರಿಸರ್ಚ್ ಸೆಕ್ಷನ್ನಿನ ಅಧಿಕಾರ ವರ್ಗದವರಿಗೆ ನಾನು ಮನವಿಯನ್ನು ಸಲ್ಲಿಸಿದ್ದೇನೆ. ಅವರು ಅದಕ್ಕೆ ಯಾವ ರೆಮಿಡಿಯನ್ನು ಸಹ ಮಾಡಲಿಲ್ಲ. ಇವೊತ್ತು ಆ ರೋಗ ಒಂದು ಮರದಿಂದ 8-10 ಮರಗಳಿಗೆ ಹಬ್ಬಿದೆ. ಆ ಒಂದು ರೋಗದಿಂದ ಇಡೀ ತೆಂಗಿನ ತೋಟವೇ ನಾಶವಾಗಬಹುದು. ಆದ್ದರಿಂದ ಅದಕ್ಕೆ ಸರ್ಕಾರದವರು ಹೆಚ್ಚಿನ ಗಮನವನ್ನು ಕೊಡಬೇಕು. ಆ ರೋಗಕ್ಕೆ ಸರಿಯಾದ ಒಂದು ರೆಮಿಡಿಯನ್ನು ಕಂಡುಹಿಡಿಯಬೇಕು. ಇಲ್ಲದಿದ್ದರೆ ಜನಗಳಿಗೆ ಅದರಿಂದ ನಿರಾಶೆಯಾಗಿ ತೆಂಗಿನ ಬೆಳೆ ಬೆಳೆಯುವುದನ್ನೇ ಬಿಡುತ್ತಾರೆ ಎನಿಸುತ್ತದೆ.

ಇನ್‌ಸೆಕ್ಟಿಸೈಡ್ಸ್, ಪೆಸ್ಟಿಸೈಡ್ಸ್ ಸೇಲ್ಸ್ ಮಾಡಬೇಕಾದರೆ 300 ರೂಪಾಯಿಗಳ ಲೈಸೆನ್ಸ್ ತೆಗೆದುಕೊಳ್ಳಬೇಕು ಎನ್ನುವಂಥಾ ಒಂದು ನಿಯಮವನ್ನು ತಂದಿದ್ದಾರೆ. ಇದರಿಂದಾಗಿ ಅದನ್ನು ಮಾರಾಟ ಮಾಡುವವರಿಗೆ ತೊಂದರೆ ಆಗಿದೆ ಆದ್ದರಿಂದ ಅದನ್ನು ಮಾರುವುದಕ್ಕೆ ಯಾರು ಮುಂದೆ ಬರುತ್ತಾರೆ ಅಂಥವರಿಗೆ ಫ್ರೀ ಲೈಸೆನ್ಸ್ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಹಿಂದೆ ಸಬ್ಸಿಡೈಜ್ಡ್ ರೇಟಿನಲ್ಲಿ ಈ ಪೆಸ್ಟಿಸೈಡ್ಸ್ ಮತ್ತು ಇನ್‌ಸೆಕ್ಟಿಸೈಡ್ಸ್ ಅನ್ನು ರೈತರಿಗೆ ಸರ್ಕಾರದವರು ಒದಗಿಸುತ್ತಿದ್ದರು. ಇತ್ತೀಚೆಗೆ ಅದನ್ನು ತಪ್ಪಿಸಿದ್ದಾರೆ. ಅದು ಸರಿಯಲ್ಲ. ಪುನ: ಹಿಂದಿನ ಹಾಗೆಯೇ ಸಬ್ಸಿಡೈಜ್ಡ್ ರೇಟಿನಲ್ಲಿ ರೈತರಿಗೆ ಪೆಸ್ಟಿಸೈಡ್ಸ್ ಮತ್ತು ಫರ್ಟಿಲೈಜರನ್ನು ಒದಗಿಸಬೇಕೆಂದು ನಾನು ಸರ್ಕಾರದವರನ್ನು ಕೇಳಿಕೊಳ್ಳುತ್ತೇನೆ. ಮಾನ್ಯ ವ್ಯವಸಾಯ ಮಂತ್ರಿಗಳು ನಾನು ಹೇಳತಕ್ಕ ವಿಷಯಗಳನ್ನು ಗಮನಿಸಿ ಆ ಬಗ್ಗೆ ಹೆಚ್ಚಿನ ರೀತಿಯಲ್ಲಿ ರೈತರಿಗೆ ಸಹಾಯ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಇಷ್ಟು ಹೇಳಿ ಈ ಸಂದರ್ಭದಲ್ಲಿ ಇಷ್ಟು ಮಾತನಾಡುವುದಕ್ಕೆ ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಆರ್. ಗುಂಡೂರಾವ್ (ಸೋಮವಾರಪೇಟೆ).—ಸನ್ಮಾನ್ಯ ಸಭಾಧ್ಯಕ್ಷರೇ, ಶ್ರೀಮಾನ್ ಕೆ. ಎಚ್. ಪಾಟೀಲರು ಈ ಸಭೆಯ ಮುಂದೆ ತಂದಿರತಕ್ಕ ವ್ಯವಸಾಯ ಮತ್ತು ಅರಣ್ಯ ಇಲಾಖೆಗೆ ಸಂಬಂಧಪಟ್ಟ ಬೇಡಿಕೆಗಳನ್ನು ನಾನು ಸ್ವಾಗತಿಸುತ್ತೇನೆ. ಮತ್ತು ಆ ಬಗ್ಗೆ ಕೆಲವು ಸಲಹೆಗಳನ್ನು ಕೊಡಬೇಕೆಂದು ನಾನು ನಿಂತಿದ್ದೇನೆ. ಅಗ್ರಿಕಲ್ಚರಲ್ ಇಲಾಖೆಯ ಬಗ್ಗೆ ನಾನು ಜಾಸ್ತಿ ಮಾತನಾಡುವುದಕ್ಕೆ ಹೋಗುವುದಿಲ್ಲ. ಏತಕ್ಕೆಂದರೆ ನಾನು ಇದರಲ್ಲಿ ಹೆಚ್ಚಿನ ಪಾರಂಗತನಾಗಿಲ್ಲ. ಆದರೂ ಸಹ ಕೊಡಗಿನ ಬಗ್ಗೆ ಮಾತನಾಡಬೇಕಾದರೆ ಕೊಡಗು ಮೈಸೂರಿಗೆ ಸೇರುವುದಕ್ಕೆ ಮೊದಲು ನಮ್ಮ ಕೊಡಗಿನಲ್ಲಿ ಒಂದು ವ್ಯವಸಾಯದ ತರಬೇತಿ ಕೇಂದ್ರವನ್ನು ಮತ್ತು ಒಂದು ಅಗ್ರಿಕಲ್ಚರಲ್ ಕಾಲೇಜನ್ನು ಸ್ಥಾಪನೆ ಮಾಡಬೇಕೆಂದು ಸರ್ಕಾರದ ಆಲೋಚನೆಯಲ್ಲಿತ್ತು. ಆದರೆ ಕೊಡಗು ಮೈಸೂರಿಗೆ ಸೇರಿದ ಮೇಲೆ ಇಲ್ಲಿಯವರೆಗೂ ಅವು ಕಾರ್ಯಗತವಾಗಿಲ್ಲ. ಆದ್ದರಿಂದ ನಮ್ಮ ಕೊಡಗಿಗೆ ಒಂದು ಅಗ್ರಿಕಲ್ಚರಲ್ ಕಾಲೇಜು ಕೊಡುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ನಾನು ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ.

ಅರಣ್ಯದ ಬಗ್ಗೆ ಮಾತನಾಡಬೇಕಾದರೆ ಕಳೆದ ಸಾರಿ ಇದೇ ಸಭೆಯಲ್ಲಿ ಮುಖ್ಯವಾಗಿ ಮಲೆನಾಡಿನಲ್ಲಿ ಅರಣ್ಯ ಸಂಪತ್ತು ಯಾವರೀತಿ ನಾಶವಾಯಿತು, ಅರಣ್ಯ ಸಂಪತ್ತಿನಿಂದ ನಮ್ಮ ದೇಶಕ್ಕೆ ಯಾವ ರೀತಿ ಪ್ರಯೋಜನವಾಗುತ್ತದೆ ಅದನ್ನು ಯಾವರೀತಿ ರಕ್ಷಣೆ ಮಾಡಬೇಕು ಎಂಬುದನ್ನು ನಾನು ಕಳೆದ ಸಲ ಹೇಳಿದ್ದೇನೆ. ಈಗ ನಮ್ಮ ಶ್ರೀಮಾನ್ ಕೆ. ಎಚ್. ಪಾಟೀಲ್ ಅವರು ಅರಣ್ಯ ಖಾತೆಯ ಮಂತ್ರಿಗಳಾದಮೇಲೆ ಅರಣ್ಯದಲ್ಲಿ ಕಳ್ಳ ಸಾಗಾಣಿಕೆಯಾಗುತ್ತಿದ್ದ ಅರಣ್ಯ ಸಂಪತ್ತು ಬಹುಪಾಲು ಎಂದರೆ 100ಕ್ಕೆ 80 ಭಾಗ ನಿಂತಿದೆ. ಅದರಲ್ಲಿಯೂ ಕೊಡಗಿನಲ್ಲಿ ನನ್ನ ಸ್ವಂತ ಅನುಭವವನ್ನು ಹೇಳುವುದಾದರೆ ಕಳೆದ 10 ವರ್ಷಗಳಿಂದ ಈ ಕಳ್ಳ ಸಾಗಾಣಿಕೆಯಲ್ಲಿ ಸುಮಾರು 60 ಕೋಟಿ ರೂಪಾಯಿಗಳ ಅರಣ್ಯ ಸಂಪತ್ತು ಹೋಗಿದೆ. ಈಗ ಕಳೆದು ಒಂದು ವರ್ಷದಿಂದ ಶ್ರೀಮಾನ್ ಕೆ. ಎಚ್. ಪಾಟೀಲರು ಈ ಅರಣ್ಯ ಶಾಖೆಯನ್ನು ವಹಿಸಿಕೊಂಡಮೇಲೆ ಕಳ್ಳಸಾಗಾಣಿಕೆ ಪೂರ್ತಿ ನಿಂತಿದೆ. ಅಧಿಕಾರಿಗಳು ಬಹಳ ದಕ್ಷತೆಯಿಂದ ಕೆಲಸ ಮಾಡುತ್ತಿದ್ದಾರೆ. ಯಾವುದೇ ತರಹ ಮೋಸಕ್ಕೂ ಎಡೆಕೊಡುತ್ತಿಲ್ಲ. ಮಾನ್ಯ ಅರಣ್ಯಮಂತ್ರಿಗಳನ್ನು ಅವರ ದಕ್ಷತೆಗಾಗಿ ಅಭಿನಂದಿಸಬೇಕಾಗಿದೆ.

ಅರಣ್ಯದಲ್ಲಿ ತೇಗದ ಮರ, ಬೀಟೆ ಮರ, ಹೊನ್ನೇ ಮರ ಇವುಗಳನ್ನು ಬೆಳೆಸುವುದಕ್ಕೆ ವ್ಯವಸ್ಥೆ ಮಾಡಿದರೆ ಹಲವಾರು ವರ್ಷಗಳಲ್ಲಿ ಅರಣ್ಯ ಸಂಪತ್ತು ಬೆಳೆಯುತ್ತದೆ. ಈಗ ಅರಣ್ಯದಲ್ಲಿ ವಾಸವಾಗಿರುವ ಜನಗಳನ್ನು ಬೇರೆ ಕಡೆಗೆ ಕಳುಹಿಸಬೇಕೆಂದು ಸರ್ಕಾರದವರು ಯೋಚನೆ ಮಾಡು

(ಶ್ರೀ ಆರ್. ಗುಂಡೂರಾವ್)

ತ್ತಿದ್ದಾರೆ. ಈ ವಿಚಾರದಲ್ಲಿ ನನ್ನ ಪ್ರಾರ್ಥನೆ ಏನೆಂದರೆ ಅವರು ಸಾಧಾರಣವಾಗಿ 50–60 ವರ್ಷಗಳಿಂದ ಅರಣ್ಯವನ್ನು ಅಭಿವೃದ್ಧಿ ಮಾಡುವುದಕ್ಕೋಸ್ಕರ ಕೆಲಸ ಮಾಡಿಕೊಂಡು ಬಂದಿರುವವರಾಗಿದ್ದಾರೆ. ಅಂಥವರನ್ನು ಅರಣ್ಯದಿಂದ ಹೊರಗೆ ಹಾಕಬೇಕು ಎಂದರೆ ಬಹಳ ಕಷ್ಟವಾಗುತ್ತದೆ. ಅವರು ಅಲ್ಲಿಯೇ ಇರಬೇಕು. ಅವರು ಅಲ್ಲಿ ಮನೆಗಳಲ್ಲಿ ವಾಸ ಮಾಡುವುದಕ್ಕೆ ಇನ್ನೂ ಕೆಲವು ವರ್ಷಗಳ ಕಾಲ ಅನುಮತಿಯನ್ನು ಕೊಡಬೇಕು. ಅವರಿಗೆ ಸರ್ಕಾರದವರು ಬೇರೆ ಕಡೆ ಜಮೀನು ಕೊಡುವವರೆಗೆ ಅವರಿಗೆ ತೊಂದರೆ ಕೊಡಬಾರದು, ಕೊಡಗಿನಲ್ಲಿ ಮಲೆನಾಡಿನಲ್ಲಿ ಎಲ್ಲಾ ಭಾಗಗಳಲ್ಲಿಯೂ ಈ ತರಹ ತೊಂದರೆ ಇದೆ. ಆದ್ದರಿಂದ ಆ ಜನಗಳಿಗೆ ಸರ್ಕಾರದವರು ಖಂಡಿತವಾಗಿಯೂ ರಕ್ಷಣೆ ಕೊಡಬೇಕು. ಅರಣ್ಯ ಇಲಾಖೆಯನ್ನೇ ನಂಬಿಕೊಂಡು ವಾಸ ಮಾಡುವವರು. ಅವರು ಅವಿದ್ಯಾವಂತ ಜನರು. ಪಾಪ ಅಂಥಾ ಜನಗಳನ್ನು ಕಾಡಿನಿಂದ ಓಡಿಸುವುದಕ್ಕೆ ಪ್ರಯತ್ನ ಮಾಡಿದರೆ ಆ ಬಡಜನಗಳಿಗೆ ತೊಂದರೆಯಾಗುತ್ತದೆ. ಆದ್ದರಿಂದ ಸ್ವಲ್ಪ ಅವರಿಗೆ ಸರ್ಕಾರದವರು ಸಹಾಯ ಮಾಡಬೇಕೆಂದು ನಾನು ಮಾನ್ಯ ಅರಣ್ಯ ಶಾಖೆಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ. ನಮ್ಮ ದೇಶದಲ್ಲಿ ಅರಣ್ಯ ಸಂಪತ್ತನ್ನು ಹೆಚ್ಚು ಬೆಳಸಬೇಕು. ಏತಕ್ಕೆಂದರೆ ಅದು ನಮ್ಮ ದೇಶಕ್ಕೆ ಒಳ್ಳೆಯ ಹವಾಮಾನವನ್ನು ಒದಗಿಸುತ್ತದೆ, ಹಣವನ್ನು ಒದಗಿಸುತ್ತದೆ. ಮತ್ತು ಅರಣ್ಯ ಸಂಪತ್ತು ಹೆಚ್ಚು ಇದ್ದರೆ ಚೆನ್ನಾಗಿ ಮಳೆ ಬರುತ್ತದೆ. ಈ ದೃಷ್ಟಿಯಿಂದ ನಮ್ಮ ದೇಶದಲ್ಲಿ ಅರಣ್ಯ ಸಂಪತ್ತನ್ನು ಹೆಚ್ಚು ಮಾಡಬೇಕು. ಇಷ್ಟು ಹೇಳಿ ಈ ಬೇಡಿಕೆಗಳಿಗೆ ನನ್ನ ಹೃತ್ಪೂರ್ವಕವಾದ ಬೆಂಬಲವನ್ನು ಸೂಚಿಸಿ ಮಾನ್ಯ ಅಧ್ಯಕ್ಷರು ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಬಾಪೂಗೌಡ ರಾಯಪ್ಪ (ಷಹಪೂರ್).—ಮಾನ್ಯ ಸಭಾಪತಿಗಳೇ, ಇಂದಿನ ದಿವಸ ವ್ಯವಸಾಯ ಖಾತೆಯ ಸಚಿವರಾದ ಮಾನ್ಯ ಶ್ರೀ ಕೆ. ಎಚ್. ಪಾಟೀಲ್ ಅವರು ವ್ಯವಸಾಯದ ಬಗ್ಗೆ ಬೇಡಿಕೆಯನ್ನು ಮಂಡಿಸುತ್ತಾ ಬಹಳ ಕಡಿಮೆಯಾಗಿ ಬೇಡಿದ್ದಾರೆ. ಈ ರಾಜ್ಯದಲ್ಲಿ ಹೆಚ್ಚು ಜನಸಂಖ್ಯೆ ಇಂದಿನ ದಿವಸ ವಿಶೇಷವಾಗಿ ವ್ಯವಸಾಯವನ್ನೇ ಅವಲಂಬಿಸಿದ್ದಾರೆ. ಮಾನ್ಯ ಶ್ರೀ ಕೆ. ಎಚ್. ಪಾಟೀಲ್ ಅವರು ಅನೇಕ ದಿವಸಗಳ ಕಾಲ ಒಕ್ಕಲಿಗರಾಗಿ ಒಕ್ಕಲುತನದಲ್ಲಿ ಹೆಚ್ಚಿನ ಅನುಭವವುಳ್ಳ ಮಂತ್ರಿಯಾಗಿ ಇಂದಿನ ದಿವಸ ಹೆಚ್ಚಿನ ಕ್ರಾಂತಿಕಾರಿಯಾದ ಬೇಡಿಕೆಯನ್ನು ಬೇಡಬಹುದಾಗಿತ್ತು. ಈಗ ಅವರು ಅತ್ಯಂತ ಪ್ರಗತಿಪರವಾದ ಪಕ್ಷದ ವ್ಯವಸಾಯದ ಮಂತ್ರಿಯಾಗಿ ಈ ರಾಜ್ಯದಲ್ಲಿದ್ದಂಥ ಕಡಿಮೆ ಹಿಡುವಳಿದಾರರ ಹಿತರಕ್ಷಣೆಯನ್ನು ಮಾಡಬೇಕೆಂದು ಹೆಚ್ಚಿನ ಯೋಜನೆಗಳನ್ನು ತಮ್ಮ ಬೇಡಿಕೆಯಲ್ಲಿ ಹಾಕಿಕೊಳ್ಳಬಹುದಾಗಿತ್ತು. ಕೇವಲ 14 ಕೋಟಿ ರೂಪಾಯಿಗಳಲ್ಲಿ ಅವರು ತರತಕ್ಕ ಭೂಸುಧಾರಣೆಯ ಕಾರ್ಯನಿಮಿತ್ತವಾಗಿ ಭೂಮಿ ಇಲ್ಲದೇ ಇರುವ ರೈತರಿಗೆ ಭೂಮಿಯನ್ನು ಹಂಚುವುದು ಮತ್ತು ಇದ್ದಂಥ 10–15 ಎಕರೆ ಭೂಮಿಯನ್ನು ಹಂಚುವಾಗ ಹಿಡುವಳಿದಾರರ ಹಿತ ರಕ್ಷಣೆ ಮಾಡತಕ್ಕ ವಿಚಾರಮಾಡಬೇಕೆಂಬುದು ಸಂಪೂರ್ಣವಾಗಿ ಶೂನ್ಯವಾಗಿದೆ. ನಾನು ಅವರನ್ನು ಕೇಳುತ್ತೇನೆ. ಈ ರಾಜ್ಯದಲ್ಲಿ ಅವರು ತರತಕ್ಕ ಭೂಸುಧಾರಣೆ ಕಾಯಿದೆ ಏನಿದೆಯೋ ಅದರ ಪ್ರಕಾರ ಹೆಚ್ಚಿನ ಭೂಮಿಯನ್ನು ಕಡಿಮೆ ಪ್ರಮಾಣದವರಿಗೆ ಹಂಚಿ 10–15–20 ಎಕರೆ ಜಮೀನು ಇರುವಂತಹವರ ಆರ್ಥಿಕಮಟ್ಟವನ್ನು ಹೆಚ್ಚುಮಾಡಬೇಕಾದರೆ ಇಂತಹ ಹಿಡುವಳಿದಾರರಿಗೆ ಕೇವಲ ಕೇಂದ್ರದ ಮುಖಾಂತರ ಬಂದಂಥ ಯೋಜನೆಗಳನ್ನು ಅಲ್ಲಲ್ಲಿಯೇ ತೆಗೆದುಕೊಂಡು ಇವತ್ತು ಏನಾದರೂ ಒಕ್ಕಲುತನದಲ್ಲಿ ಹಾಗೂ ವ್ಯವಸಾಯದಲ್ಲಿ ಇರತಕ್ಕವರಿಗೆ ಕ್ರಾಂತಿ ಮಾಡುತ್ತಿದ್ದಾರೆ ಮತ್ತು ಸಣ್ಣ ಒಕ್ಕಲಿಗರಿಗೆ ಮೋಸ ಮಾಡುತ್ತಿದ್ದಾರೆಂದು ನಾನು ಹೇಳುತ್ತೇನೆ. ಇಂತಹ ಫೇಸ್ ಪ್ರೋಗ್ರಾಂಗಳಿಂದ ಸ್ಮಾಲ್‌ಸ್ಕೇಲ್ ಫಾರ್ಮರ್ಸ್‌ಗೆ ಅದರಲ್ಲಿಯೂ 15–20 ಎಕರೆ ಇರತಕ್ಕ ಜನರಿಗೆ ಏನೂ ಉಪಯೋಗವಾಗುತ್ತಾ ಇಲ್ಲ. ಪಂಪುಸೆಟ್ಟುಗಳನ್ನೂ ಮತ್ತು ಫರ್ಟಿಲೈಜರ್ಸ್‌ಗಳನ್ನೂ ಕೊಳ್ಳಲು ಲೋಕಲ್‌ನವರಿಗೆ ಫೈನಾನ್ಸ್ ಮಾಡಿದಂತೆ ಕೇವಲ 10–15 ಎಕರೆಗಳು ಇರತಕ್ಕ ಹಿಡುವಳಿದಾರರಿಗೂ ಮಾಡಬಹುದಾಗಿತ್ತು. ಅದನ್ನು ತಾವು ಮಾಡಲಿಲ್ಲ. ಇವತ್ತು ಇಲ್ಲಿಯವರೆಗೂ ಇದ್ದಂಥ ಭೂಮಿಯನ್ನು ಆರ್ಥಿಕ ಹಿಡುವಳಿಯಾಗಿ ಮಾಡತಕ್ಕ ಪ್ರಯತ್ನ ಇಕನಾಮಿಕ್ ಹೋಲ್ಡಿಂಗ್ ನಲ್ಲಿ ಮಾಡಿಲ್ಲ. ಅದು ಎಂದೆಂದಿಗೂ ಸಾಧ್ಯವಾಗುವುದಿಲ್ಲ. ಇವತ್ತು ನಾನು ಹೆಚ್ಚು ಟೀಕೆಯನ್ನು ಈ ಬಗ್ಗೆ ಮಾಡುವುದಕ್ಕೆ ಹೋಗುವುದಿಲ್ಲ. ಇವತ್ತು ಆಡಳಿತದಲ್ಲಿರತಕ್ಕ ಅಧಿಕಾರಿಗಳು ಎಷ್ಟು ಹೆಚ್ಚು ಪ್ರಮಾಣದಲ್ಲಿರಬೇಕಾಗಿತ್ತೋ ಅಷ್ಟು ಪ್ರಮಾಣದಲ್ಲಿಲ್ಲ. ಅದರಲ್ಲಿಯೂ ಅವರು ಕಡಿಮೆ ಇದ್ದಾರೆ. ಒಂದು ಮಾತನ್ನು ಹೇಳುತ್ತೇನೆ. ಏಕೆಂದರೆ ಇದ್ದಂಥ ಅಧಿಕಾರಿಗಳಿಗೇ ಸಂಪೂರ್ಣವಾದಂಥ ಕೆಲಸವಿಲ್ಲ. ಸಂಪೂರ್ಣವಾಗಿ ವ್ಯವಸಾಯವನ್ನೇ ಫೇಸ್ ಮಾಡತಕ್ಕ ಸಾಮಗ್ರಿಗಳು, ಅನುಕೂಲಗಳು ಇವತ್ತು

ಇಲ್ಲವೆಂದು ಹೇಳಬಹುದು. ಕೆಲವು ಕಡೆಗಳಲ್ಲಿ ಅಧಿಕಾರಿಗಳು ಬಹಳವಾಗಿ ಹೆಚ್ಚಾಗಿದ್ದಾರೆ. ಅಲ್ಲಿ ಅಧಿಕಾರಿಗಳನ್ನು ಕಡಿಮೆಮಾಡಬೇಕು. ಎಷ್ಟೇ ಅಧಿಕಾರಿಗಳಿದ್ದರೂ ಎಷ್ಟರಮಟ್ಟಿಗೆ ತಾಲ್ಲೂಕು ಮಟ್ಟದಲ್ಲಿ, ಜಿಲ್ಲಾಮಟ್ಟದಲ್ಲಿ, ಡಿವಿಷನ್ ಮಟ್ಟದಲ್ಲಿ ಅವರಿಂದ ಕೆಲಸಗಳನ್ನು ತೆಗೆಯಬೇಕೋ ಅದರಲ್ಲಿ ವಿಫಲವಾಗಿದ್ದಾರೆ. ಅಧಿಕಾರಿಗಳಿಗೆ ಕೆಲವಾರು ಸಂದರ್ಭಗಳಲ್ಲಿ ಸಾಕಷ್ಟು ಸೌಕರ್ಯಗಳನ್ನು ಒದಗಿಸಿಕೊಟ್ಟಿಲ್ಲ. ಬೆಳೆಗಳಿಗೆ ರೋಗ ಬಂದಾಗ ನಮ್ಮಲ್ಲಿ ಪೆಸ್ಟಿಸೈಡುಗಳನ್ನು ಒದಗಿಸುವುದಕ್ಕೆ ತಕ್ಕ ಸೌಕರ್ಯವಿಲ್ಲ. ಮಾನ್ಯ ಶ್ರೀ ಕೆ. ಎಚ್. ಪಾಟೀಲ್ ಅವರು ಸಣ್ಣ ಒಕ್ಕಲಿಗರ ದೃಷ್ಟಿಯಿಂದ ಏನಾದರೂ ಹೆಚ್ಚಿನ ಕ್ರಾಂತಿ ಕಾರಕವಾದ ಬೇಡಿಕೆಯನ್ನು ಬೇಡಬಹುದಾಗಿತ್ತು. ಆದರೆ ಕೇವಲ ಒಕ್ಕಲಿಗರಲ್ಲಿ ಸ್ಮಾಲ್ ಫಾರ್ಮರ್ಸ್ ಏಜೆನ್ಸಿಯನ್ನು ತಗೆದುಕೊಂಡು ಪರಿಣಾಮಕರ ಆರ್ಥಿಕ ದೃಷ್ಟಿಯನ್ನು ಕಟ್ಟುನಿಟ್ಟಾಗಿ ಮಾಡುತ್ತೇನೆಂದು ಹೇಳಿದರು. ಈ ರೀತಿಯಾಗಿ ಒಕ್ಕಲಿಗರಿಗೆ ಅವರು ಮೋಸ ಮಾಡುತ್ತಿದ್ದಾರೆಂದು ನಾನು ಹೇಳುತ್ತೇನೆ. ಇನ್ನು ಒಕ್ಕಲಿಗರು ತಯಾರು ಮಾಡುವ ಬೆಳೆಯ ವಿಷಯವಾಗಿ ಹೇಳಬೇಕಾದರೆ ಅವರು ಬೆಳೆಯುವ ಪದಾರ್ಥಗಳಿಗೆ ಸರಿಯಾದ ಬೆಲೆ ಸಿಗುತ್ತಾ ಇಲ್ಲ. ಜೋಳ, ರಾಗಿ, ಅಕ್ಕಿ ಮಾರುಕಟ್ಟೆಗೆ ಬಂದರೆ, ಸರ್ಕಾರದವರು ನೇರವಾಗಿ ಖರೀದಿಗೆ ತೆಗೆದುಕೊಂಡು ಜನರಿಗೆ ಹಂಚಿಕೆ ಮಾಡಬೇಕು. ಇವತ್ತು ಏನೇನೂ ದವಸಧಾನ್ಯಗಳು ಮಾರ್ಕೆಟ್ಟಿಗೆ ಬರುತ್ತವೆ ಜೋಳದ ಧಾರಣೆ 160 ರೂಪಾಯಿಗಳು ಇರುವಾಗ ಒಕ್ಕಲಿಗರಿಗೆ ಕೇವಲ 60–70ರಂತೆ ಕೊಡುತ್ತೀರಿ. ಈಗ ಸಿಮೆಂಟ್, ಎಣ್ಣೆ, ಗೊಬ್ಬರ-ಇವುಗಳ ಧಾರಣೆ ದಿನೇ ದಿನೇ ಹೆಚ್ಚಿನ ಪ್ರಮಾಣದಲ್ಲಿ ಹೋಗುತ್ತಿದೆ. ಕೇಂದ್ರದ ಒಪ್ಪಿಗೆಯ ಮೇಲೆ ತಾವು ರೈತರಿಗೆ ನಿರ್ದೇಶನವನ್ನು ಮೊದಲೇ ಮಾಡಬೇಕಾಗಿದೆ. ಅಂತಹ ವ್ಯವಹಾರಗಳನ್ನು ಮಾಡುವಾಗ ಒಕ್ಕಲಿಗರು ತಯಾರುಮಾಡತಕ್ಕ ಬೆಳೆಗಳಿಗೆ ಸರಿಯಾದ ಬೆಲೆ ಬರುವಂತೆ ಮಾಡಬೇಕು. ಇಲ್ಲದಿದ್ದರೆ ಒಕ್ಕಲಿಗರಿಗೆ ಅಗಾಧವಾದಂಥ ಪೆಟ್ಟು ಆಗುತ್ತದೆ. ಇವತ್ತು ಜನರ ಹಿತರಕ್ಷಣೆಯೇ ಒಕ್ಕಲಿಗರ ಹಿತರಕ್ಷಣೆ; ಅವನ ಆರ್ಥಿಕಮಟ್ಟ ಹೆಚ್ಚಬೇಕು. ಇನ್ನು ಫರ್ಟಿಲೈಜರ್ಸ್ ವ್ಯವಹಾರ ಮಾಡುತ್ತಿದ್ದಾರೆ. ಅದು ದುರ್ದೈವದ ಸಂಗತಿ. ಕೋ-ಆಪರೇಟಿವ್ ಸೊಸೈಟಿಗಳು ಒಳ್ಳೆಯ ದೃಷ್ಟಿಯಿಂದ ಕೆಲಸಮಾಡುವಂತೆ ವ್ಯವಸ್ಥೆಯಾಗಬೇಕು. ಇವತ್ತು ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ ಬಗ್ಗೆ ನಾನು ಹೇಳುವುದಾದರೆ, ಅಲ್ಲಿ ಅವರಿಗೆ ಒಳ್ಳೆಯ ಕೆಲಸಗಳನ್ನು ಕೊಡಬಹುದಾಗಿತ್ತು. ಪಂಪುಸೆಟ್ ಕೊಡುವುದಾಗಲೀ, ಅಗ್ರಿಕಲ್ಚರಲ್ ಇಂಪ್ಲಿಮೆಂಟ್ಸ್ ಏನಿವೆಯೋ ಆ ಸಲಕರಣೆಗಳನ್ನು ಕೊಡಬಹುದಾಗಿತ್ತು. ಇವತ್ತು ಅವರು ರೈತರಿಗೆ ಬೀಜಗಳನ್ನು ಕೊಡಬೇಕು. ಆದರೆ ಅಲ್ಲಿ ಎಷ್ಟರಮಟ್ಟಿಗೆ ಇದು ಸರಬರಾಜು ಆಗುತ್ತಿದೆಂಬ ಬಗ್ಗೆ ಅಲ್ಲಿನ ಚಟುವಟಿಕೆಗಳು ಕ್ಲಾಷ್ ಆಗುವ ಪರಿಸ್ಥಿತಿ ಬಂದಿದೆ. ನಿರ್ದಿಷ್ಟವಾಗಿ ಅದು ಯಾವ ರೀತಿ ಹಂಚಿಕೆಯಾಗಬೇಕೆಂಬ ಪರಿಸ್ಥಿತಿಯನ್ನು ಇನ್ನೂ ನಾವು ಕಾಣಬೇಕಾಗಿದೆ. ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ ಬಗ್ಗೆ ಮಾನ್ಯ ಶ್ರೀ ಹನುಮೇಗೌಡರು ಹೇಳಿದ ಪ್ರಕಾರ ಅಲ್ಲಿ ಯಾವ ರೀತಿಯಲ್ಲಿ ಈ ಯೋಜನೆಗಳನ್ನು ಹಾಕುತ್ತಾರೋ ಗೊತ್ತಿಲ್ಲ. ಅಂಡರ್‌ಗ್ರೌಂಡ್ ವಾಟರ್ ಸರ್ವೆಯ್ ಏನಿದೆ ಅದನ್ನು ಪರೀಕ್ಷೆಮಾಡಿ, ಎಲ್ಲಾ ತಾಲ್ಲೂಕುಗಳಲ್ಲಿ ನೀರಿನ ಮಟ್ಟ ಎಲ್ಲೆಲ್ಲಿ ಅನುಕೂಲವಿದೆ ಅಲ್ಲಿ ಯೋಗ್ಯವಾದ ಕ್ರಮಗಳನ್ನು ತೆಗೆದುಕೊಳ್ಳಬೇಕು. ಅಂಡರ್‌ಗ್ರಾಂಡ್ ವಾಟರ್ ಸ್ಕೀಮ್ ಬಗ್ಗೆ ಇಡೀ ರಾಜ್ಯದಲ್ಲಿ ಟ್ಯೂಬ್‌ವೆಲ್‌ಗಳನ್ನು ಹಾಕುವ ಕಾರ್ಯಕ್ರಮವನ್ನು ಇಂಜನಿಯರಿಂಗ್ ಡಿಪಾರ್ಟ್‌ಮೆಂಟಿಗೆ ಕೊಡಬೇಕು. ಶೇಕಡ 10–11ರಷ್ಟು ನೀರಾವರಿ ಪರ್ಸಂಟೇಜ್ ಇದೆ. ಅದು ಇನ್ನೂ ಹೆಚ್ಚು ಪ್ರಮಾಣದಲ್ಲಿ ಆಗಬೇಕು. ಸಣ್ಣ ಒಕ್ಕಲಿಗರಿಗೆ ಅನುಕೂಲಮಾಡಿಕೊಡಬೇಕು. ಹೈದರಾಬಾದ್ ಕರ್ಣಾಟಕದಲ್ಲಿ ಅದರಲ್ಲಿಯೂ ರಾಯಚೂರಿನಲ್ಲಿ ಅಗ್ರಿಕಲ್ಚರಲ್ ಇಂಜನಿಯರಿಂಗ್ ಸ್ಕೂಲ್ ಇದೆ. ಅದನ್ನು ಒಂದು ಅಗ್ರಿಕಲ್ಚರಲ್ ಕಾಲೇಜನ್ನಾಗಿ ಮಾರ್ಪಾಡು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಅಲ್ಲಿ ಅಪ್ಪರ್ ಕೃಷ್ಣಾ ಪ್ರಾಜೆಕ್ಟ್ ಬಗ್ಗೆ ಹೇಳುವುದಾದರೆ. ಅಲ್ಲಿ ನೀರಾವರಿ ಕಾರ್ಯಕ್ರಮಗಳನ್ನು ಇನ್ನೂ ಹೆಚ್ಚಿಗೆ ಮಾಡಬೇಕಾಗಿದೆ. ತುಂಗಭದ್ರ ನೀರು ನೆರೆ ರಾಜ್ಯಗಳಲ್ಲಿ ಹೆಚ್ಚಿಗೆ ಹರಿಯುತ್ತಿದೆ. ಅದರಿಂದ ಹೆಚ್ಚಿಗೆ ನೀರಾವರಿ ಸೌಕರ್ಯಗಳನ್ನು ಅಲ್ಲಿಯವರಿಗೆ ಕೊಡಬಹುದು. ಗುಲ್ಬರ್ಗದಲ್ಲಿ ಜೂನ್ ತಿಂಗಳಲ್ಲಿ 17 ಲಕ್ಷ ಎಕರೆ ಖರೀಫ್ ಬೆಳೆ ಬರಬೇಕಾಗಿತ್ತು. ಮಳೆ ಚೆನ್ನಾಗಿ ಬೀಳುವುದಾದರೆ, 14 ಲಕ್ಷ ಎಕರೆ ರಬಿ ಬೆಳೆ ಬೆಳೆಯಲು ವ್ಯವಸ್ಥೆ ಮಾಡುವ ಪ್ರಸಂಗ ಬರುತ್ತದೆ. ಈಗ ಅಲ್ಲಿ ಅತ್ಯಂತ ಭೀಕರವಾದ ಕ್ಷಾಮ ಇದೆ. ಅಲ್ಲಿರತಕ್ಕ ರೈತರಿಗೆ ಜೂನ್ ತಿಂಗಳ ಮಳೆ ಬಂದರೆ 14 ಲಕ್ಷ ಎಕರೆ ಜಮೀನಿನಲ್ಲಿ ಬೀಜ ಹಾಕುವುದಕ್ಕೆ ಏನು ವ್ಯವಸ್ಥೆ ಮಾಡಿದ್ದಾರೆಂಬ ಮಾತನ್ನು ಸರ್ಕಾರದವರು ತಿಳಿಸಬೇಕು. ಏಕೆಂದರೆ ಇವತ್ತು ಅಲ್ಲಿ ಅಧಿಕಾರಿಗಳಾಗಿರುವವರು ಏಳೂವರೆ ಕೋಟಿ ರೂಪಾಯಿಗಳಷ್ಟು ಬೀಜವನ್ನು ಕೇಳುತ್ತಿದ್ದಾರೆ. ಸುಮಾರು 31 ಲಕ್ಷ ಎಕರೆ ಭೂಮಿಯಲ್ಲಿ ಇವತ್ತು ರಬಿ ಬೆಳೆ ಬಿತ್ತನೆಯಾಗಬೇಕು. ಅಲ್ಲಿ ಏಳೂವರೆ ಕೋಟಿ ರೂಪಾಯಿಗಳಷ್ಟು ಬೀಜವನ್ನು ಸರಬರಾಜು ಮಾಡಲು ವ್ಯವಸ್ಥೆ ಮಾಡಬೇಕು. ಇದಕ್ಕೆ ಸರ್ಕಾರದವರು ಅತ್ಯಂತ ಗಮನ ಕೊಡದೇ ಇದ್ದಾರೆ. ಕೋ-ಆಪರೇಟಿವ್ ಪ್ರೊಡ್ಯೂಸಿಂಗ್

(ಶ್ರೀ ಬಾಪೂಗೌಡ ರಾಯಪ್ಪ)

ಮಾರ್ಕೆಟ್, ತಾಲ್ಲೂಕು ಹಿಸುವಳಿ ಮಾರ್ಕೆಟಿಂಗ್ ಸೊಸೈಟಿಗಳಿಂದ ಬೀಜವನ್ನು ರೈತರಿಗೆ ಕೊಡಬೇಕಾದರೆ ಯಾವ ಧಾರಣೆಯಲ್ಲಿ ಕೊಡಬೇಕು. ರೈತನು ಬೀಜವನ್ನು ಕೊಳ್ಳುವ ಶಕ್ತಿ ಎಷ್ಟಿರಬೇಕೆಂಬುದನ್ನು ನೀವು ಯೋಚನೆ ಮಾಡಬೇಕು. ಇವಕ್ಕು ರೈತರಿಗೆ ಅವರ ಸಂಪತ್ತು ಆಗಿರತಕ್ಕ ಬೀಜವನ್ನು ಸಬ್ಸಿಡೈಜ್ಡ್ ರೇಟಿನಲ್ಲಿ ಕೊಡಬೇಕು. ಬೀಜವನ್ನು ಸರ್ಕಾರದವರು ಶೇಖರಣೆ ಮಾಡಿದ್ದಾರೆ ಅಥವಾ ಕೆಲವು ಸೊಸೈಟಿಗಳು ಅದನ್ನು ಶೇಖರಣೆ ಮಾಡಿದ್ದಾರೆಂದು ಹೇಳಿದರೂ ರೈತರಿಗೆ ಅನೇಕ ಸಂದರ್ಭಗಳಲ್ಲಿ ಅವನ್ನು ಕೊಂಡುಕೊಳ್ಳುವುದಕ್ಕೂ ಶಕ್ತಿ ಇರುವುದಿಲ್ಲ. ತನ್ನ ಜಮೀನಿನಲ್ಲಿ ಮಳೆ ಬಂದರೆ ಕೇವಲ ಬಿತ್ತನೆ ಮಾಡುವುದಕ್ಕೂ ಅನೇಕ ಸಂದರ್ಭಗಳಲ್ಲಿ ಶಕ್ತಿ ಇರುವುದಿಲ್ಲ. ವ್ಯವಸಾಯ ಮಾಡುವುದಕ್ಕೂ ಆಗುವುದಿಲ್ಲವೆಂದು ನಾನು ಹೇಳುತ್ತೇನೆ. ಇದೇ ರೀತಿಯಲ್ಲಿ ಕಲ್ಬುರ್ಗಿಯಲ್ಲಿ ಬಿತ್ತನೆ ಸಲುವಾಗಿ ಸಾಕಷ್ಟು ಸೌಕರ್ಯಗಳು ಇಲ್ಲವೆ ಶೇಕಡ 50ರಷ್ಟು ಎತ್ತುಗಳು ಸತ್ತು ಹೋಗಿವೆಯೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಆದ್ದರಿಂದ ಈಗಲೇ ಸತ್ತಂಥ ಎತ್ತುಗಳ ಸೆನ್ಸಸ್ ಮಾಡಿ ಸಂಬಂಧಪಟ್ಟ ರೈತರಿಗೆ ತಕಾವಿ ಲೋನ್ ಕೊಡುವುದಕ್ಕೆ ವ್ಯವಸ್ಥೆ ಮಾಡಬೇಕು. ಇನ್ನು ಹೆಚ್ಚಿಗೆ ಭೂಮಿಗಳನ್ನು ಇಟ್ಟುಕೊಂಡಿರುವ ಜನರಿಗೆ ಉಳಲು ಟ್ರಾಕ್ಟರ್‌ಗಳನ್ನು ಒದಗಿಸಿ ಈ ಕಾರ್ಯವನ್ನು ಒಂದು ಮಿಲಿಟರಿ ವೇಗದಲ್ಲಿ ನಡೆಸಬೇಕೆಂದು ಹೇಳಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

2-00 P. M.

† ಶ್ರೀ ಕೆ. ಎಚ್. ಪಾಟೀಲ್ (ಅರಣ್ಯ ಮತ್ತು ವ್ಯವಸಾಯ ಶಾಖೆಯ ಮಂತ್ರಿಗಳು).—ಸನ್ಮಾನ್ಯ ಅಧ್ಯಕ್ಷಣಿಯವರೆ, ನಾನು ಸಭೆಯ ಮುಂದೆ ಮಂಡಿಸಿರತಕ್ಕ ಒಕ್ಕಲುತನ, ತೋಟಗಾರಿಕೆ ಮತ್ತು ಅರಣ್ಯ ಈ ಮೂರು ಬಾಬುಗಳ ಮೇಲೆ ನಡೆದಿರತಕ್ಕ ಚರ್ಚೆಯನ್ನು ನೋಡಿ ನನಗೆ ಬಹಳ ಆನಂದವಾಗಿದೆ. ವಿರೋಧಪಕ್ಷದ ನಾಯಕರಾದ ಶ್ರೀಮಾನ್ ದೇವೇಗೌಡರು ಮೊದಲುಗೊಂಡು ಬಾಪೂಗೌಡರವರೆಗೆ ಒಟ್ಟು ಹದಿನಾಲ್ಕು ಜನ ಸದಸ್ಯರುಗಳು ಈ ಚರ್ಚೆಯಲ್ಲಿ ಭಾಗವಹಿಸಿದ್ದಾರೆ. ಇವರೆಲ್ಲರೂ ಬಹಳ ಉತ್ಸುಕತೆಯಿಂದ ಹೆಚ್ಚಿನ ಆಸ್ತೆವಹಿಸಿ ಮಾತನಾಡಿದ್ದಾರೆ. ಅನೇಕ ಅಮೂಲ್ಯ ಸಲಹೆಗಳನ್ನೂ ಕೂಡ ಮಾಡಿದ್ದಾರೆ. ಅಲ್ಲದೆ ಕೆಲವರು ಈ ಬಾಬುಗಳಲ್ಲಿ ತಮಗಿರುವ ಕಾತುರತೆಯನ್ನೂ ಕೂಡ ವ್ಯಕ್ತಪಡಿಸಿದ್ದಾರೆ. ಇವರೆಲ್ಲರಿಗೂ ಮೊಟ್ಟಮೊದಲನೆಯದಾಗಿ ನನ್ನ ಅಭಿನಂದನೆಗಳು. ಆದರೆ ಮಾತನಾಡತಕ್ಕ ಭರದಲ್ಲಿ ವಿರೋಧ ಪಕ್ಷದ ಮಾನ್ಯ ಸದಸ್ಯರುಗಳು ಅವರ ಭಾಷಣಗಳಿಗೆ ಅಲಂಕಾರ ಉಂಟು ಮಾಡಲು ಕೆಲವು ಅಂಶಗಳನ್ನು ಉತ್ಪ್ರೇಕ್ಷೆ ಮಾಡಿ ಮಾತನಾಡಿದ್ದಾರೆ. ಅಂಥ ರೀತಿಯಲ್ಲಿ ಕೆಲವರು ಟೀಕೆಗಳನ್ನೂ ಮಾಡಿದ್ದಾರೆ. ಆದರೆ ಅವರು ಹೇಳಿರತಕ್ಕ ಶಬ್ದಗಳನ್ನೇ ಬಳಸುತ್ತ ಅವರು ಹೇಳಿರತಕ್ಕ ಧಾಟಿಯಲ್ಲೇ ನಾನು ಅವರು ಎತ್ತಿರುವ ವಿಷಯಗಳಿಗೆ ಉತ್ತರ ಕೊಡುವುದಕ್ಕೆ ಇಷ್ಟಪಡುವುದಿಲ್ಲ. ಟೀಕೆಗಳನ್ನು ಯಾವ ಪಕ್ಷದವರೇ ಮಾಡಿರಲಿ ಆದರೆ ಸಭೆಯ ಗೌರವ ಕಾಪಾಡಿಕೊಂಡು ಬರುವುದಕ್ಕಾಗಿ ನಾನು ಅಷ್ಟು ಕೆಳಮಟ್ಟಕ್ಕಿಳಿದು ಉತ್ತರ ಕೊಡತಕ್ಕ ಗೋಜಿಗೆ ಹೋಗಬಾರದೆಂದು ನನ್ನ ಆಸೆ. ಆದರೆ ಮಾನ್ಯ ಸದಸ್ಯರು ಏನೇನು ಹೇಳಿದ್ದಾರೆ ಅದರಲ್ಲಿ ಸೂಕ್ತವಾದುದನ್ನು ಮಾತ್ರ ಅಳವಡಿಸಿಕೊಂಡು ರೈತರಿಗೆ ಅನುಕೂಲ ಉಂಟು ಮಾಡತಕ್ಕ ಬಾಬುಗಳೇನಿವೆ ಅವುಗಳನ್ನು ಅಳವಡಿಸಿಕೊಂಡು ಉತ್ತರ ಹೇಳುವುದಕ್ಕೆ ನಾನೀಗ ಇಚ್ಛೆಪಟ್ಟಿದ್ದೇನೆ.

ನಾನು ಹೋದ ವರ್ಷ ನಡೆದ ಆಯವ್ಯಯದ ಅಧಿವೇಶನದ ಕಾಲಕ್ಕೆ ಇದೇ ಸಭೆಯ ಮುಂದೆ ಕೆಲವು ಆಶ್ವಾಸನೆಗಳನ್ನು ನೀಡಿದ್ದೆ. ಆ ಆಶ್ವಾಸನೆಗಳನ್ನು ಈಡೇರಿಸುವುದರಲ್ಲಿ ಇಲ್ಲಿಯವರೆಗೆ ನಾನು ಸಾಧಿಸಿರತಕ್ಕ ಪ್ರಗತಿಯಾದರೂ ಏನೆಂಬುದನ್ನು ಅಳತೆ ಮಾಡಿದ್ದರಲ್ಲಿ ನಾನು ಸಾಧಿಸಿರತಕ್ಕ ಸಾಧನೆಗಳನ್ನು ನೋಡಿ ನನಗೆ ಬಹಳ ಸಂತೋಷವಾಗಿದೆ. ಇದಕ್ಕಿಂತಲೂ ಹೆಚ್ಚಿನ ಸಾಧನೆಯನ್ನು ನಡೆಸಲು ಬೇರೆ ಯಾರಿಂದಲೂ ಸಾಧ್ಯವಿರಲಿಲ್ಲ ಅನ್ನುವುದು ನನ್ನ ಆತ್ಮಕ್ಕೆ ಗೊತ್ತಾಗಿದೆ. ಆದರೆ ಇದರಲ್ಲಿ ಕೆಲವು ಅಂಶಗಳನ್ನು ಸದಸ್ಯರು ಒಪ್ಪಬಹುದು, ಇನ್ನು ಕೆಲವನ್ನು ಒಪ್ಪದಿರಬಹುದು. ನನ್ನ ಅಭಿಪ್ರಾಯದಲ್ಲಿ ಇಂಥ ಆಡಳಿತ ರೂಪರೇಷೆಗಳಲ್ಲಿ ಮತಭೇದವಿರುವುದಕ್ಕೆ ಅವಕಾಶವಿದೆ. ಆದರೆ ಈ ವಿಚಾರದಲ್ಲಿ ನಾನು ಕೊಡತಕ್ಕ ಅಭಿಪ್ರಾಯ ಸರಿಯೇ ಅಥವಾ ಬೇರೆಯವರು ಕೊಡತಕ್ಕ ಅಭಿಪ್ರಾಯ ಸರಿಯೇ ಎಂಬುದನ್ನು ಈ ಸಭೆಯೇ ನಿರ್ಣಯಿಸಲಿ.

ನಾನು ಈಗ ಮೊದಲನೆಯದಾಗಿ ಅರಣ್ಯ ಖಾತೆಯ ಬಗ್ಗೆ ಉತ್ತರ ಕೊಡುವುದಕ್ಕೆ ಇಚ್ಛೆ ಪಡುತ್ತೇನೆ. ಇದರ ಬಗ್ಗೆ ಮಾತನಾಡಿರತಕ್ಕ ಮಾನ್ಯ ಸದಸ್ಯರುಗಳೂ ಕಡಿಮೆ ಮತ್ತು ಅವರು ಮಾತನಾಡಿರುವುದೆಲ್ಲಾ ಕಾಮನ್ನಾಗಿದೆ. ಅಂದರೆ ಎಲ್ಲರೂ ಈ ಒಂದು ಡೆವಲಪ್‌ಮೆಂಟ್ ಕಾರ್ಪೊರೇಷನ್ ಏನಿದೆ ಅದರ ಬಗ್ಗೆ ಟೀಕೆಗಳನ್ನು ಮಾಡಿದ್ದಾರೆ. ಮಾನ್ಯ ಶ್ರೀ ಹನುಮೇಗೌಡರು ಈ ದಿವಸ ಮಾಡಿದ ಟೀಕೆಯನ್ನು ನೆನ್ನೆ ದಿವಸ ಮಾಡಿದ್ದರೆ ಅವಕ್ಕೆ ಉತ್ತರವನ್ನು ಈ ದಿವಸವೇ ತರಿಸಿಡುತ್ತಿದ್ದೆ. ಏನೇ ಆಗಲಿ ಅವರು ಕಂಡ ಒಬ್ಬ ಜವಾಬ್ದಾರಿಯನ್ನರಿತ ಸದಸ್ಯರು. ಅವರು ಮಾತನಾಡಿರುವುದೆಲ್ಲಾ ನಿಜವಿರಲೇಬೇಕೆಂಬ ಲೆಕ್ಕದ ಮೇಲೆ ನಾನೀಗ ಉತ್ತರ ಕೊಡುತ್ತಿದ್ದೇನೆ. ಮಾನ್ಯ ಸದಸ್ಯರು ಹೇಳುವಂಥ ರೀತಿಯಲ್ಲೇ ಅಲ್ಲಿ ನಡೆದಿದ್ದರೆ ಅದು ವಿಷಾದನೀಯ. ಅವರು ಹೇಳಿರತಕ್ಕ ವಿಷಯವನ್ನು ಅಧಿಕಾರಿಗಳಿಗೆ ಹೇಳಿ ವಿಚಾರ ಮಾಡುವಂತೆ ತಿಳಿಸುತ್ತೇವೆ. 12 ಎಕರೆಗಳಲ್ಲಿ ಈಗಾಗಲೇ ಪ್ಲಾಂಟೇಷನ್ ಮಾಡಲಾಗಿದೆ. ಇನ್ನು 6 ಎಕರೆಗಳಲ್ಲಿ ಇಂಡಸ್ಟ್ರಿಯಲ್ ಪ್ಲಾಂಟೇಷನ್ ಮಾಡಿರುತ್ತೆ. ಇನ್ನು ಪ್ರತಿ ವರ್ಷ ಮೆಕೆನೈಸ್ಡ್ ಕಲ್ಟಿವೇಷನ್ ಇಂತಿಷ್ಟು ಎಕರೆಗಳಲ್ಲಿ ನಡೆಯಬೇಕೆಂದು ಪ್ರೋಗ್ರಾಂ ಹಾಕಿಕೊಂಡಿದೆ. ಆದರೆ ಈ ಮೆಕೆನೈಸ್ಡ್ ಕಲ್ಟಿವೇಷನ್ನಿನಿಂದ ಇಲ್ಲಿ ಜನರಿಗೆ ಸಿಕ್ಕುವಂಥ ಕೂಲಿ ತಪ್ಪಿತು ಎಂದು ಕೆಲವರು ಹೇಳಬಹುದು. ಆದರೆ ನಾವು ಕೂಲಿಗಳ ಆಧಾರದ ಮೇಲೇ ಇಲ್ಲಿ ಟ್ರೆಂಚ್ ಹೊಡೆಸುವ ಕೆಲಸವನ್ನು ಮುಂದುವರಿಸಿದರೆ ಇನ್ನು 50 ವರ್ಷಗಳಾದರೂ ನಮ್ಮ ಅರಣ್ಯ ಸಂಪತ್ತಿನ ಅಭಿವೃದ್ಧಿಯನ್ನು ಕಾಣಲಿಕ್ಕೆ ಸಾಧ್ಯವಾಗುತ್ತಿರಲಿಲ್ಲ. ಅದಕ್ಕಾಗಿ ಇದನ್ನು ಈಗ ಲಾಗೂ ಮಾಡಲಾಗಿದೆ. ಇನ್ನು ಬರಲಿರುವ 10 ವರ್ಷಗಳ ನಂತರ ನಮಗೆ ಇಲ್ಲಿ ಅರಣ್ಯವನ್ನು ಬೆಳೆಸಬೇಕೆಂಬ ಮಾತು ಉಳಿದಿರಬಾರದು ಅನ್ನುವಂಥ ದೃಷ್ಟಿಯಿಂದ ಇದಕ್ಕೆ ಕೈಹಾಕಲಾಗಿದೆ. ಆದರೆ ಈ ಕಾರ್ಯಕ್ಕೆ ಮಾನ್ಯ ಸದಸ್ಯರ ಸಹಕಾರ ಬೇಕು ಆದಾಗ್ಯೂ ನಾನು ಇದನ್ನು ಪೂರ್ಣವಾಗಿ ಮಾಡೇ ತೀರುತ್ತೇವೆಂದು ಈಗ ಹೇಳುವುದಕ್ಕೆ ಸಾಧ್ಯವಿಲ್ಲ. ಏಕೆಂದರೆ ನಮ್ಮಲ್ಲಿ ಇನ್ನೂ ಆ ಹಳೇ ಕಾಲದ ಅಧಿಕಾರಿಗಳು ಬಹಳವಾಗಿ ಉಳಿದಿದ್ದಾರೆ. ಅವರನ್ನು ಅವಲಂಭಿಸಿ ನಾನು ಈ ಕೆಲಸಗಳನ್ನು ಸಾಧಿಸಬೇಕಾಗಿದೆ. ಇದರಲ್ಲಿ ಒಬ್ಬೊಬ್ಬ ಅಧಿಕಾರಿಯ ಅಭಿಪ್ರಾಯ ಒಂದೊಂದು ರೀತಿಯಾಗಿರುತ್ತದೆ. ಆದರೆ ನಮ್ಮಲ್ಲಿ ಕೆಲವು ಸೂಕ್ತವಾದ ಅಧಿಕಾರಿಗಳೂ ಇದ್ದಾರೆ. ಇನ್ನು ಕೆಲವರು ಸೂಕ್ತವಲ್ಲದವರೂ ಇದ್ದಾರೆ. ಇನ್ನು ಕೆಲವು ನಿರುತ್ಸಾಹಿ ಅಧಿಕಾರಿಗಳೂ ಇದ್ದಾರೆ. ಇವರೆಲ್ಲರನ್ನೂ ಅನುಸರಿಸಿ ನಾನು ಕೆಲಸ ಮಾಡಬೇಕಾಗಿದೆ. ಇದಕ್ಕಾಗಿ ನಾನು ಎಲ್ಲ ಸದಸ್ಯರ ಒಮ್ಮತದ ಸಹಕಾರವನ್ನು ಬಯಸುತ್ತಿದ್ದೇನೆ. ನಾವು ಈಗಾಗಲೇ 11 ಸಾವಿರ ರಬ್ಬರ್ ಮರಗಳನ್ನು ಬೆಳೆಸಿದ್ದೇವೆ. 1971—72ರವರೆಗೆ 10533 ಎಕರೆಗಳಲ್ಲಿ ಮರಗಳನ್ನು ಬೆಳೆಸಲಾಗಿತ್ತು, ಇನ್ನು 1971—72ರಲ್ಲಿ 447 ಎಕರೆಗಳಲ್ಲಿ ರಬ್ಬರ್ ಮರಗಳನ್ನು ಬೆಳೆಸಲಾಗಿದೆ. 1973—74ಕ್ಕೆ 850 ಎಕರೆಗಳಲ್ಲಿ ಬೆಳೆಸುವುದಕ್ಕೆ ಪ್ರಯತ್ನವನ್ನು ಇಟ್ಟುಕೊಂಡಿದೆ. ಹಾಗೇ ತೆಂಗಿನ ಮರಗಳ ವಿಚಾರಕ್ಕೆ ಬಂದರೆ 1972—73ರಲ್ಲಿ 360 ಎಕರೆಗಳಲ್ಲಿ ಬೆಳೆಸಲಾಗಿದೆ. 1973—74ಕ್ಕೆ 400 ಎಕರೆಗಳಲ್ಲಿ ಬೆಳೆಸುವ ಪ್ರಯತ್ನ ಮಾಡಲಾಗಿದೆ. ಇನ್ನು ಕಾಫಿ 1971—72ರಲ್ಲಿ 8 ಎಕರೆಗಳಲ್ಲಿ ಬೆಳೆಸಲಾಗಿದೆ. ಈ ವರ್ಷ 40 ಎಕರೆಗಳಲ್ಲಿ ಬೆಳೆಸುವುದಕ್ಕೆ ಪ್ರಯತ್ನ ಮಾಡಲಾಗಿದೆ, ಹಾಗೇ ಸಾಂಬಾರ ದ್ರವ್ಯಗಳ ಮರಗಳನ್ನು 1972—73ರಲ್ಲಿ 31 ಎಕರೆಗಳಲ್ಲಿ ಬೆಳೆಸಲಾಗಿತ್ತು. ಈ ವರ್ಷ 50 ಎಕರೆಗಳಲ್ಲಿ ಬೆಳೆಸುವುದಕ್ಕೆ ಪ್ರಯತ್ನ ಮಾಡಲಾಗಿದೆ. ಹೀಗೆ ಹಂತ ಹಂತಗಳಲ್ಲಿ ಈ ಅರಣ್ಯದ ಅಭಿವೃದ್ಧಿ ಕೆಲಸ ಮುಂದುವರಿಯುತ್ತಿದೆ. ಆದರ ಈಗಾಗಲೇ ಒಬ್ಬ ಮಾನ್ಯ ಸದಸ್ಯರು ಹೇಳಿದ ಹಾಗೆ ಇಲ್ಲಿ ಸರ್ವೆ ಕೆಲಸವಾಗಿಲ್ಲ. ಇಲ್ಲಿನ ಅರಣ್ಯ ಪ್ರದೇಶವನ್ನು ಒಂದು ಇಲಾಖೆ ತನ್ನದೆಂದರೆ ಇನ್ನೊಂದು ಇಲಾಖೆ ತಮ್ಮದೆಂದು ಹೇಳುತ್ತಿದೆ. ಈ ಎರಡಕ್ಕೂ ಮಧ್ಯೆ ಅಕ್ರಮವಾಗಿ ಅದನ್ನು ಹಿಡಿದಿರುವ ವ್ಯಕ್ತಿ ತನ್ನದೆಂದು ವಾದಿಸುತ್ತಿದ್ದಾನೆ. ಇಲ್ಲಿ ಹೀಗೆ ಸರ್ವೆ ಆಗದೆ ಇರುವುದರಿಂದ ಏನು ಮಾಡುವುದಕ್ಕೂ ಕಷ್ಟವಾಗಿದೆ. ಇಲ್ಲಿ ಸರಿಯಾಗಿ ದಾಖಲೆಗಳೂ ಕೂಡ ಇಲ್ಲ. ಇದರಿಂದ ಮುಂದೆ ರಾಜ್ಯದ ಆಯವ್ಯಯದ ಮೇಲೆ ಒಂದು ಭಯಾನಕ ಪರಿಣಾಮವಾಗಬಹುದು. ಇದನ್ನು ಯಾವ ರೀತಿಯಿಂದಲಾದರೂ ಒಂದು ವರ್ಷದಲ್ಲಿ ಮಾಡಬೇಕೆಂದು ಹೇಳಿದ್ದೇನೆ. ಅವರು 2 ವರ್ಷಗಳಾದರೂ ಬೇಕೆಂದು ಹೇಳುತ್ತಿದ್ದಾರೆ. ನಾನು ಕೇಂದ್ರ ಸರ್ಕಾರಕ್ಕೆ ಮೊರೆ ಬಿದ್ದು ಸರ್ವೆ ಕೆಲಸಕ್ಕೆ ಆಗುವ ಹಣವನ್ನು ಅವರು ಮಂಜೂರು ಮಾಡುವಂತೆ ಅಭಯಪಡೆದುಕೊಂಡಿದ್ದೇನೆ. ಸರ್ವೆ ಕೆಲಸ ಆದ ನಂತರ ನಮ್ಮ ಅರಣ್ಯ ಸಂಪತ್ತಿನ ಒಂದು ನೈಜ ಚಿತ್ರ ನಮ್ಮ ಕಣ್ಣಿಗೆ ಬೀಳುವುದಕ್ಕೆ ಸಾಧ್ಯವಾಗಬಹುದು. ಅಷ್ಟೇ ಅಲ್ಲದೆ ನಾವು ಯಾವ ಜಾತಿಯ ಮರಗಳನ್ನು ಬೆಳೆದರೆ ಹೆಚ್ಚು ಲಾಭ ಬರುತ್ತದೆಂಬುದೂ ಕೂಡ ಅದರಿಂದ ಗೊತ್ತಾಗುತ್ತದೆ. ಇದರ ಜೊತೆಗೆ ನಾವು ಈಗಾಗಲೆ ಒಂದು ಪ್ಲಾನ್ ಮಾಡಿ ಅನೇಕ ಮಾನ್ಯ ಸದಸ್ಯರು ಅಪೇಕ್ಷೆ ಪಟ್ಟ ಹಾಗೆ ಬೇರೆ ಬೇರೆ ತರಗತಿಯ ಗಿಡಗಳನ್ನು ಹಾಕುವ ಕಾರ್ಯಕ್ರಮ

(ಶ್ರೀ ಕೆ. ಎಚ್. ಪಾಟೀಲ್)

ತಯಾರಾಗಿದೆ. ಇಂದು ನೂರು ತೇಗದ ಮರಗಳನ್ನು ಕಡಿದರೆ ಅದಕ್ಕಿಂತ ಹೆಚ್ಚು ಆ ಮರಗಳನ್ನು ಹಾಕಬೇಕು, ಗಂಧದ ಮರ ಕಡಿದರೆ ಕಡಿಯುತ್ತಿದಕ್ಕಿಂತ ಹೆಚ್ಚು ಹೊಸ ಮರ ಬೆಳೆಸಬೇಕು ಎಂದು ಒಂದು ಪ್ಲಾನ್ ಹಾಕಿ ಅದರಂತೆ ಕಾರ್ಯಕ್ರಮಕ್ಕೆ ವ್ಯವಸ್ಥೆಯಾಗಿ ಕೆಲಸವಾಗುತ್ತಿದೆ. ದುರ್ದೈವ ದಿಂದ ಅರಣ್ಯ ಎಲ್ಲಾ ಪ್ರದೇಶಗಳಲ್ಲೂ ಇರುವುದರಿಂದ ರಸ್ತೆ ಪಕ್ಕದಲ್ಲಿ ಕೇವಲ ಯೂಕಲಿಪ್ಟಸ್ ಮರಗಳೇ ಬೆಳೆಯುವುದು ಅವರಿಗೆ ಕಾಣುವುದರಿಂದ ಒಂದು ರೀತಿಯಲ್ಲಿ ಆಕ್ಷೇಪಣೆ ಮಾಡುತ್ತಿದ್ದಾರೆ. ಅರಣ್ಯ ರಸ್ತೆ ಎಡಬದಿಯಲ್ಲಿರುವುದು ಸರಿಯಲ್ಲ, ಅದು ಸಮರ್ಪಕವಾಗಿಲ್ಲ ಎಂಬ ಅಭಿಪ್ರಾಯವಿದೆ, ರಸ್ತೆ ಮಾತ್ರ ಬೆಳವಣಿಗೆಯಾಗುತ್ತದೆ, ಆದುದರಿಂದ ಹೆಚ್ಚು ಒಳಹೊಕ್ಕಿರಬೇಕು ಎಂಬುದು ತಜ್ಞರ ಅಭಿಪ್ರಾಯವಾಗಿದೆ. ಮಾನ್ಯ ಸದಸ್ಯರ ಅಭಿಪ್ರಾಯವನ್ನು ಸಹ ಪರ್ಯಾಲೋಚಿಸುತ್ತೇವೆ.

ಅನೇಕ ಸದಸ್ಯರು ಬೊಂಬಿನ ವಿಚಾರ ಹೇಳಿದ್ದಾರೆ. ಸಣ್ಣಸಣ್ಣವರಿಗೆ ಬ್ಯಾಂಬು ಸಿಕ್ಕುವುದಿಲ್ಲ, ದೊಡ್ಡವರಿಗೆ ರಿಯಾಯಿತಿ ದರದಲ್ಲಿ ಕೊಟ್ಟಿದ್ದಾರೆ ಎಂದು ಹೇಳಿದ್ದಾರೆ. ಒಳ್ಳೆಯ ಅನುಭವ ವಿರುವ ಶ್ರೀ ತಿಮ್ಮಪ್ಪನವರು 250 ರೂಪಾಯಿಗಳವರೆಗೆ ದರವಿರಬೇಕಾಗಿತ್ತು, ಯೂಕಲಿಪ್ಟಸಿಗೆ ಮತ್ತು ಬಿದಿರು ಬೊಂಬುಗಳಿಗೆ ಸರಿಯಾದ ದರವಿಲ್ಲ ಎಂದು ಹೇಳಿದ್ದಾರೆ, ಆದರೆ ದುರ್ದೈವದಿಂದ ನಾವು ಕಾನೂನು ಬದ್ಧರಾಗಿದ್ದೇವೆ. ಹಿಂದೆ ಒಂದು ಕಾಲದಲ್ಲಿ ಕೇವಲ ಒಂದು—ಒಂದೂವರೆಗೆ ರೂಪಾಯಿನಂತೆ ಟನ್ನಿಗೆ ನಿಗದಿ ಮಾಡಿದ್ದಾರೆ, ಆದರ ಪ್ರಕಾರ ಕರಾರಾಗಿದೆ. ನಾವು ಒಂದು ಕಾರ್ಯಕ್ರಮ ಹಾಕಿಕೊಂಡು ಒಂದು ರೂಪಾಯಿ ದರವಿದ್ದುದನ್ನು 15 ರೂಪಾಯಿ ಮಾಡಿದೆವು. ಇದರಿಂದ ಜನರಿಗೆ ನಾವು ಪಕ್ಷಾತೀತವಾಗಿ ಮಾಡಿದ್ದೇವೆ ಎಂಬ ಭಾವನೆ ಬರಬಹುದು. ಇದನ್ನು ಗಮನಿಸಬೇಕು, ಇನ್ನೂ ಹೆಚ್ಚಾಗಬೇಕೆಂಬ ಭಾವನೆ ಇರಬಹುದು. ಸ್ವಲ್ಪ ಕಾಲ ತಡೆಯೋಣ. ಶ್ರೀ ತಿಮ್ಮಪ್ಪನವರು ಅಧಿಕಾರಕ್ಕೆ ಬಂದಾಗ 250 ರೂಪಾಯಿಗಳವರೆಗೆ ಅವರು ದರವನ್ನು ಹೆಚ್ಚಿಸಿದರೆ ಅವರನ್ನು ಅಭಿನಂದಿಸುವದರಲ್ಲಿ ನಾನು ಮೊದಲನೆಯವನು. ದರದ ವಿಚಾರದಲ್ಲಿ ಕ್ರಮ ಕೈಕೊಳ್ಳುವಾಗ ಸರಕಾರ ಅರಣ್ಯ ಸಂಪತ್ತನ್ನು ಹೆಚ್ಚಿಸುವ ದೃಷ್ಟಿಯಿಂದ ಮತ್ತು ಉದ್ದಿಮೆಗಳಿಗೆ ಸಹಾಯಕವಾಗಲೆಂಬ ದೃಷ್ಟಿಯಿಂದ ಸರಕಾರ ವರ್ತಿಸಿದೆ. ಇನ್ನೂ ಹೆಚ್ಚು ಆಗಬೇಕು, ಈಗಿರುವುದು ಸಮರ್ಪಕವಾಗಿದೆ ಎಂದು ಹೇಳುವುದಿಲ್ಲ. ಮುಂದೆ ಒಳ್ಳೆಯ ವಾತಾವರಣಕ್ಕೆ ಕಾಯೋಣ.

ಶ್ರೀ ಕಾಗೋಡು ತಿಮ್ಮಪ್ಪ.—ಯಾವ ಯಾವ ಕಂಪನಿಗಳಿಗೆ ಯಾವಯಾವ ದರದಲ್ಲಿ ಕೊಟ್ಟಿದೆ?

ಶ್ರೀ ಕೆ. ಎಚ್. ಪಾಟೀಲ್.—ನಾನು ಕೊಟ್ಟಿಲ್ಲ, ಒಂದೊಂದು ಕಂಪನಿಗೆ ಒಂದೊಂದು ರೀತಿಯಲ್ಲಿ ಕೊಟ್ಟಿದ್ದಾರೆ. ನಾನು ಅಧಿಕಾರಕ್ಕೆ ಬಂದ ನಂತರ ಯಾವ ಕಂಪನಿಗೂ ಸಹ ಅರಣ್ಯ ಸಂಪತ್ತನ್ನು ಮಾರುವುದಕ್ಕೆ ಹೋಗಿಲ್ಲ. ಹಿಂದೆ ಕರಾರು ಮಾಡಿಕೊಂಡಿದ್ದ ದರಗಳನ್ನು ಹೆಚ್ಚಿಸಿದ್ದೇನೆ. ಈ ರಾಜ್ಯದಲ್ಲಿ ಹರಿಹರದ ಪಾಲಿಫೈಬರ್ಸ್ ಬಿಟ್ಟು ಉಳಿದ ಇಂಡಸ್ಟ್ರಿಯಲಿಸ್ಟ್ಸ್ ನನ್ನ ಕಡೆ ಬಂದು ತಮಗೆ ಗೊತ್ತುಮಾಡಿದ್ದ ದರಗಳನ್ನು ಸೇಕಡ 15ರಷ್ಟು ಹೆಚ್ಚಿಸುವಂತೆ ಬರೆದು ಕೊಟ್ಟಿದ್ದಾರೆ.

ಶ್ರೀ ಕೋಣಂದೂರು ಲಿಂಗಪ್ಪ.—ರಾಜಾಜಿನಗರದ ಒಂದು ಸಣ್ಣ ಇಂಡಸ್ಟ್ರಿಗೆ 8 ವರ್ಷದಿಂದ ಅರ್ಜಿ ಹಾಕಿದರೂ ಸಹಾಯ ಮಾಡಿಲ್ಲ.

ಶ್ರೀ ಕೆ. ಎಚ್. ಪಾಟೀಲ್.—ಹೊಸದಾಗಿ ಕೊಡಬೇಕಾದ ವಿಚಾರ ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಇಂದು ಕೊಡದೆ ಕೆಲವು ಕಾಲವಾದ ನಂತರ ಕೊಡಬೇಕಾಗಿದೆ. ಈಗಿದ್ದ ವನ ಸಂಪತ್ತನ್ನು ಹಿಂದಿದ್ದ ಕರಾರುಗಳನ್ನು ಪೂರ್ಣ ಮಾಡಲು ಕೊಡಬೇಕಾಗಿದೆ, ಅದಕ್ಕೇ ಅವಕಾಶ ವಿಲ್ಲದಿರುವಾಗ ಹೊಸಬರಿಗೆ ಹೇಗೆ ಕೊಡುವುದು ? ಸಂಪತ್ತಿನ ಬೆಳವಣಿಗೆ ಜಾಸ್ತಿ ಆದಾಗ ಹೊಸ ದಾಗಿ ಕೇಳುವ ಕೈಗಾರಿಕೆಗಳವರ ಪಟ್ಟಿ ಮಾಡಿ ಕೊಡೋಣ.

ಶ್ರೀ ಕಾಗೋಡು ತಿಮ್ಮಪ್ಪ.—ಯಾವ ಯಾವ ಕಂಪನಿಯವರು ಯಾವ ಯಾವ ದರದಲ್ಲಿ ಪಡೆಯುತ್ತಿದ್ದಾರೆಂಬುದನ್ನು ತಿಳಿದುಕೊಳ್ಳಬೇಕಾಗಿದೆ.

ಶ್ರೀ ಕೆ. ಎಚ್. ಪಾಟೀಲ್. ಅದನ್ನು ನಾಳೆ ಸೈಕ್ಲೋಸ್ಟೈಲ್ ಮಾಡಿಸಿ ಇಡೀ ಸಭೆಗೆ ಒದಗಿಸುತ್ತೇನೆ. ಈ ಸಮಯವನ್ನು ಅದನ್ನು ಹೇಳಲು ಉಪಯೋಗಿಸುವುದಕ್ಕೆ ನನಗೆ ಇಷ್ಟವಿಲ್ಲ. ಅರಣ್ಯ ವಿಭಾಗದಲ್ಲಿ ಬಹಳಷ್ಟು ಅಧಿಕಾರಿಗಳನ್ನು ಹೆಚ್ಚಿಸಿದ್ದಾರೆ. ಭಯಾನಕವಾಗಿ ಬೆಳೆಸಿದ್ದಾರೆ

ಎಂದು ತಿಳಿಸಿದ್ದಾರೆ. ನನಗೆ ಅದರಿಂದ ಲಾಭವಿಲ್ಲ. ಲಂಚ ನಿಂತಿಲ್ಲವೆಂದು ಸಹ ಹೇಳಿದ್ದಾರೆ. ಇದ್ದ ಸಂಗ ತಿಳಿಸುತ್ತಿದ್ದೇನೆ. ಇಂದು ಅರಣ್ಯ ವಿಭಾಗದಲ್ಲಿ ಇಲಾಖೆಯ ಕಾರ್ಯ ಬೆಳೆಯುತ್ತಿರುವುದರಿಂದ 5 ಮಂದಿ ಚೀಫ್ ಕನ್‌ಸರ್ವೇಟರುಗಳನ್ನು ನೇಮಕ ಮಾಡಿವೆ. ಮೊದಲು 3 ಮಂದಿ ಇದ್ದರು. ಇಬ್ಬರನ್ನು ಜಾಸ್ತಿ ಮಾಡಿದೆ. ವೈಲ್ಡ್‌ಲೈಫ್‌ಗೆ ಸಂಬಂಧಪಟ್ಟಂತೆ ಒಬ್ಬರು ಮತ್ತು ಇಂಡಸ್ಟ್ರೀಸ್ ಕಾರ್ಪೊರೇಷನ್ನಿಗೆ ಒಬ್ಬರು ಹೀಗೆ ಇಬ್ಬರನ್ನು ತೆಗೆದುಕೊಂಡಿವೆ. ಹಿಂದೂಸ್ತಾನ್ ಸರಕಾರ ಅರಣ್ಯದಲ್ಲಿ ಕಾಡುಮೃಗಗಳ ಅಭಿವೃದ್ಧಿ ಮಾಡಬೇಕು ಮತ್ತು ಅವುಗಳನ್ನು ಕಾಪಾಡಬೇಕು ಎಂದು ಅದಕ್ಕಾಗಿ ಹೇರಳವಾಗಿ ಹಣವನ್ನು ಮೈಸೂರಿಗೆ ಕೊಡಬೇಕೆಂದಿದ್ದಾರೆ. ನಮ್ಮ ಸಹಾಯಕ್ಕೆ ಕೋಟ್ಯಾವಧಿ ಹಣ ಮೃಗಗಳ ರಕ್ಷಣೆಗಾಗಿ ಬರುವುದು. ಇದಕ್ಕಾಗಿ ಒಬ್ಬ ಅಧಿಕಾರಿ ಅತ್ಯಾವಶ್ಯಕ. ನಾನು ಮಾಡಿರುವ ಯೋಜನೆಯನ್ನು ಕೇಂದ್ರ ಸರಕಾರ ಒಪ್ಪಿದೆ. ಅರಣ್ಯ ಸಚಿವರ ಸಮ್ಮೇಳನದಲ್ಲಿ ಎಲ್ಲರೂ ಒಪ್ಪಿದ್ದಾರೆ. ಇದನ್ನು ನೋಡಿ ಬೇರೆ ಬೇರೆ ರಾಜ್ಯಗಳಿಗೂ ಇದನ್ನು ಅನ್ವಯಿಸಬಾರದೇ ಎಂದು ಶೀಘ್ರವಾಗಿ ಆಲೋಚನೆ ಮಾಡುತ್ತಿದ್ದಾರೆ. ಹೀಗಿರುವುದರಿಂದ ಮಾನ್ಯ ಸದಸ್ಯರು ಇದರ ಬಗ್ಗೆ ಟೀಕೆ ಮಾಡಲು ವಿವೇಚನೆಯಿಂದ ಕೂಡಿದೆಯೋ ಎಂಬುದನ್ನು ಯೋಚನೆಮಾಡಬೇಕು. ಇಬ್ಬರನ್ನು ಹೆಚ್ಚಿಸಿದಾಗ ಖಜಾನೆಗೆ 100—150 ರೂಪಾಯಿ ಹೆಚ್ಚು ಭಾರ ಬಿದ್ದಿರಬಹುದು, ಅದಕ್ಕಿಂತ ಹೆಚ್ಚೇನೂ ಇಲ್ಲ. ಒಬ್ಬ ಕನ್‌ಸರ್ವೇಟರನ್ನು ಡೈರೆಕ್ಟರ್ ಆಫ್ ವೈಲ್ಡ್ ಲೈಫ್ ಎಂದು ನೇಮಕ ಮಾಡಿದೆ, ಇನ್ನೊಬ್ಬರನ್ನು ಡೈರೆಕ್ಟರ್ ಆಫ್ ಇಂಡಸ್ಟ್ರೀಸ್ ಎಂದು ನೇಮಿಸಿದೆ. ಇಂಡಸ್ಟ್ರೀಸ್ ಡೈರೆಕ್ಟರು ಈ ದಿವಸ ಫಾರೆಸ್ಟ್ ಇಂಡಸ್ಟ್ರೀಸ್ ಮ್ಯಾನೇಜಿಂಗ್ ಡೈರೆಕ್ಟರ್ ಎಂದು ಹೇಳಬಹುದು, ಇದರಿಂದ ಹಾನಿಯೇನು ? ರಾಜ್ಯಕ್ಕೆ ಲಾಭವೇನು ? ಇದನ್ನು ಸ್ವಲ್ಪ ಸದಸದ್ವಿವೇಕದಿಂದ ವಿಚಾರ ಮಾಡಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

ಇನ್ನು ಒಂದು ಮಾತು ನನ್ನ ಸ್ನೇಹಿತರಾದ ಹನುಮೇಗೌಡರು, ಐ.ಎಫ್.ಎಸ್. ಲಿಸ್ಟ್ ತಡೆ ಹಿಡಿಯಲಾಗಿದೆ ಎನ್ನುವ ಮಾತನ್ನು ಹೇಳಿದರು, ಅದು ಸಹ ಒಬ್ಬ ಬೆಂಗೇರಿ ಎನ್ನುವವರ ಸಲುವಾಗಿ ತಡೆಹಿಡಿದಿದ್ದಾರೆ ಎಂದು ಹೇಳಿದರು. ಬೆಂಗೇರಿ ಐ.ಎಫ್.ಎಸ್. ಲಿಸ್ಟಿಗೂ ಏನೂ ಸಂಬಂಧವಿಲ್ಲ. ಇವರು ನನ್ನ ಪ್ರೈವೇಟ್ ಸೆಕ್ರೆಟರಿ. ಅವರು ಇನ್‌ಫರ್ಮೇಷನ್ ಡಿಪಾರ್ಟ್‌ಮೆಂಟ್‌ನಿಂದ ಬಂದವರು, ಐ.ಎಫ್.ಎಸ್. ಲಿಸ್ಟ್ ತಡೆಹಿಡಿದರೆ ಅವರಿಗೂ ಏನೂ ಬೆನಿಫಿಟ್ ಸಿಕ್ಕುವುದಿಲ್ಲ. ಫಾರೆಸ್ಟ್ ಡಿಪಾರ್ಟ್‌ಮೆಂಟ್ ಕೇಡರ್ ಜನರಿಗೂ ಅವರಿಗೂ ಏನೂ ಸಂಬಂಧವಿಲ್ಲ. ನಾನು ಮಂತ್ರಿಯಾಗಿರುವ ತನಕ ಅವರು ನನ್ನ ಪ್ರೈವೇಟ್ ಸೆಕ್ರೆಟರಿ ಆಗಿರುತ್ತಾರೆ. ನಾನು ಮಂತ್ರಿ ಪದವಿ ಬಿಟ್ಟು ಹೋದ ಮೇಲೆ, ಅವರು ಇನ್‌ಫರ್ಮೇಷನ್ ಡಿಪಾರ್ಟ್‌ಮೆಂಟಿನಲ್ಲಿ ಯೋಗ್ಯ ಹುದ್ದೆಗೆ ಹೋಗುತ್ತಾರೆ. ಐ.ಎಫ್.ಎಸ್. ಲಿಸ್ಟನ್ನು ಜಾರಿಗೆ ತರಬೇಕು ಎಂದು ಶ್ರೀ ಹನುಮೇಗೌಡರಿಗಿಂತ ಹೆಚ್ಚು ಉತ್ಸುಕತೆ ಇಲ್ಲದಿದ್ದರೂ ಅವರಷ್ಟೇ ಉತ್ಸುಕತೆ ನನಗೆ ಇದೆ, ಅದನ್ನು ಆದಷ್ಟು ಬೇಗ ಜಾರಿಗೆ ಕೊಡಬೇಕು ಎಂದು ನಾನು ಒಂದು ನೋಟನ್ನು ಕಳುಹಿಸಿದ್ದೇನೆ. ಸುಪ್ರೀಂ ಕೋರ್ಟಿನಲ್ಲಿ ಒಂದು ಕೇಸ್ ಇದೆ. ಅದರ ಪ್ರಕಾರ ಐ.ಎಫ್.ಎಸ್. ಲಿಸ್ಟ್ ಮಾಡುವಾಗ ರಿಟೈರ್ ಆದವರನ್ನು ಎಲ್ಲರನ್ನೂ ಗ್ರೂಪ್ ಮಾಡಲಾಗಿದೆ. ಇವತ್ತಿನ ದಿವಸ ಅದರಂತೆ ಮಾಡುವುದಾದರೆ ಶ್ರೀಮಾನ್ ಕೈಕಣಿ ಅಂಥ ಅನೇಕ ರಿಟೈರ್ಡ್ ಆಫೀಸರು ಚೀಫ್ ಕನ್‌ಸರ್ವೇಟರ್ ಆಗಿ ಕೂಡ್ರಬೇಕಾಗಿರುತ್ತದೆ ಮತ್ತು ಅವರಿಗೆ ಸ್ಟೇಟ್ ಎಕ್ಸಚೆಕರ್‌ನಿಂದ ಲಕ್ಷಾವಧಿ ಹಣವನ್ನು ಕೊಡುವುದು ಅನಿವಾರ್ಯವಾಗುತ್ತದೆ. ಅದಕ್ಕೆ ಈ ಬಗ್ಗೆ ಸುಪ್ರೀಂ ಕೋರ್ಟಿನ ನಿರ್ಣಯ ಕಾಯೋಣವೇ ಇಲ್ಲವೇ ಅಧಿಕಾರಿಗಳಿಗೆ ಪ್ರಮೋಷನ್ ಕೊಡುವುದಕ್ಕೆ ಬರುತ್ತದೆಯೋ ಎನ್ನುವ ಬಗ್ಗೆ ಕಾಯಿದೆ ತಜ್ಞರ ಮತ್ತು ಅನುಭವಿತರ ಅಭಿಪ್ರಾಯ ಪಡೆಯುತ್ತೇನೆ. ನಿಮಗೆ ಅನುಗುಣವಾದ ರೀತಿಯಲ್ಲಿ ನಾವು ಮಾತನಾಡಬೇಕು ಎಂದರೆ, ನಾನು ಏನನ್ನೂ ಹೇಳಲಾರೆ. ಇನ್ನೊಂದು ಮಾತು ಶ್ರೀ ಹನುಮೇಗೌಡರವರು ಹೇಳಿದರು ಬಹಳ ಮನನೊಂದ ಆ ಮಾತನ್ನು ಸ್ವೀಕಾರ ಮಾಡಿದೆ. ಆ ಮಾತು ಏನೆಂದರೆ ಹಳೇ ಮೈಸೂರು ಮತ್ತು ಹೊಸ ಮೈಸೂರು ಎರಡು ಭಾಗಗಳಿಂದ ಬಂದಂಥ ಅಧಿಕಾರಿಗಳ ಬಗ್ಗೆ ತನಿಖೆಯನ್ನು ಮಾಡಬೇಕು, ಕೆಲವರಿಗೆ ಇದರಲ್ಲಿ ಅನ್ಯಾಯವಾಗಿದೆ ಎನ್ನುವ ದೂರು ಬಂದಿದೆ ಎಂದು ಹೇಳಿದ್ದಾರೆ. ಯಾರ್ಯಾರು ಎಂದು ಹೇಳಿದರೆ ಈಗಲೆ ತನಿಖೆಯನ್ನು ಮಾಡಬಹುದು. ನಿರ್ವಾಯ ಇಲ್ಲ, ಈಹೊತ್ತು ಇಲ್ಲದಿದ್ದರೆ ನಾಳೆ ಕೊಡಿ. ಯಾವುದಾದರೂ ಒಂದು ಕೇಸಿನಲ್ಲಿ ರೀಜನಲ್ ಬೇಸಿಸ್ ಮೇಲೆ ನನ್ನಿಂದ ಅನ್ಯಾಯವಾಗಿದೆ ಎಂದು ಸದಸ್ಯರೇ ಆಗಲೀ, ಈ ಕಡೆಯವರೇ ಆಗಲೀ, ಆ ಕಡೆಯವರೇ ಆಗಲಿ ಸಾಬೀತು ಮಾಡಿಕೊಟ್ಟರೆ ಆದರೆ ನಾನು ಅವರು ಕೊಡುವ ಶಿಕ್ಷೆಗೆ ಗುರಿ ಆಗಲಿಕ್ಕೆ ಸಮರ್ಥ ಎನ್ನುವ ಮಾತನ್ನು ಇಲ್ಲಿ ಹೇಳುತ್ತೇನೆ ಲಂಚಕೋರ ಅಧಿಕಾರಿಗಳ ಮತ್ತು ಸ್ವಾರ್ಥಿಗಳು ನಿಮ್ಮ ಹಿಂದೆ ಬಂದು ನಿಮ್ಮ ಒಲವನ್ನು ಸಾಧಿಸುವುದೇ ಅಲ್ಲದೆ ಇಲ್ಲದ ಸಲ್ಲದ ವಿಚಾರಗಳನ್ನು ನಿಮ್ಮ ಕಿವಿಯಲ್ಲಿ ಊದಿ ಮಾನ್ಯ ಸದಸ್ಯರನ್ನು ತಪ್ಪು ದಾರಿಗೆ ಎಳೆದಿದ್ದಾರೆಂದು ಅತ್ಯಂತ ವಿಷಾದದಿಂದ ಹೇಳುವುದಕ್ಕೆ ಇಷ್ಟಪಡುತ್ತೇನೆ

ಶ್ರೀ ಕಾಗೋಡು ತಿಮ್ಮಪ್ಪ.—ನಿಮ್ಮನ್ನು ತಪ್ಪು ದಾರಿಗೆ ಎಳೆದಿದ್ದಾರೋ ?

ಶ್ರೀ ಕೆ. ಹೆಚ್. ಪಾಟೀಲ್.—ಆ ರೀತಿ ಆಗಿದ್ದರೆ ನಾನು ಮಂತ್ರಿಯಾಗಿ ಇರುವುದಕ್ಕೆ ನಾಲಾಯಕ್ಕು, ನಿಜವಾಗಿಯೂ ನನ್ನನ್ನು ತಪ್ಪು ದಾರಿಗೆ ಎಳೆದಿದ್ದಾರೆ ಎನ್ನುವುದನ್ನು ತಾವು ಖಾತರೀ ಪಡಿಸಿದರೆ, ನಾನು ಒಂದು ನಿಮಿಷ ಕೂಡ ಮಂತ್ರಿಯಾಗಿರಲಿಕ್ಕೆ ನಾಲಾಯಕ್ಕೂ ಆಗುತ್ತೇನೆ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ನೀವು ಮೆಂಬರ್‌ಗಳನ್ನು ಜಾಸ್ತಿ ಇಟ್ಟುಕೊಂಡಿದ್ದೀರಿ ಮತ್ತು ಅವರು ರಕ್ಷಣೆ ಕೊಡುತ್ತಾರೆ ಎಂದು ಅಪಾದನೆ ನಿಮ್ಮ ಮೇಲೆ ಇದೆ.

ಶ್ರೀ ಕೆ. ಹೆಚ್. ಪಾಟೀಲ್.—ಮಾನ್ಯ ಪುಟ್ಟಸ್ವಾಮಯ್ಯನವರು ಗಮನಿಸಬೇಕು. ಪ್ರಜಾ ಪ್ರಭುತ್ವದಲ್ಲಿ ಜನರ ಮನ್ನಣೆಯನ್ನು ಹೆಚ್ಚು ಇಟ್ಟುಕೊಂಡವನೇ ಸಮರ್ಥಶಾಲಿ. ಒಬ್ಬೊಬ್ಬರು ಬೇಡ ಎಂದರೂ ತಡೆಯಲಿಕ್ಕೆ ಆಗುತ್ತದೆಯೇ ? ಬಹುಸಂಖ್ಯೆಯ ಸದಸ್ಯರು ಕೆ. ಹೆಚ್. ಪಾಟೀಲರು ಸಮರ್ಥನೀಯರು, ಯೋಗ್ಯರು ಎಂದಾಗ ಅಲ್ಪಸ್ವಲ್ಪ ಅಪಸ್ವರ ಬಂದರೆ, ಈ ಪ್ರಜಾಪ್ರಭುತ್ವದಲ್ಲಿ ಅದಕ್ಕೆ ಮನ್ನಣೆ ಬರುತ್ತದೆಯೇ ? ಒಂದು ವೇಳೆ ಪ್ರಜಾಪ್ರಭುತ್ವ ತಪ್ಪು ದಾರಿಯನ್ನು ಹಿಡಿದಿದೆ ಎನ್ನುವ ಭಾವನೆ ಇದ್ದರೆ ನನ್ನ ಮೇಲೆ ವಿಚಾರಣೆಗಾಗಿ ಕೋರ್ಟು ಕಛೇರಿ ಇದೆ. ನ್ಯಾಯಾಲಯ ವಿದೆ ಅಥವಾ ನನ್ನನ್ನು ಬೆಂಬಲಿಸುವ ಬಹುಸಂಖ್ಯಾತರನ್ನು ಬಿಡಿಸುವುದಕ್ಕೆ ಸಮರ್ಥನೀಯವಾದ ರೀತಿಯಲ್ಲಿ ಪ್ರಯತ್ನ ಮಾಡಬಹುದು. ಅದಕ್ಕೆ ಯಾರು ಅಡ್ಡಿ ಮಾಡುವುದಿಲ್ಲ.

ಶ್ರೀ ಕೋಣಂದೂರು ಲಿಂಗಪ್ಪ.—ಪ್ರಜಾಪ್ರಭುತ್ವದ ಮಾತು ಹೇಳಿದರು. ತಮ್ಮ ಪಕ್ಷ ಪ್ರಜಾ ಪ್ರಭುತ್ವದಲ್ಲಿ ಒಂದು ಮದಗಜ ಆಗಿದೆ ಯಾವ ಕಲ್ಪನೆಗೂ ಮೀರಿದ ಬಹುಮತ ಪಡೆದಿದೆ.

ಶ್ರೀ ಕೆ. ಹೆಚ್. ಪಾಟೀಲ್.—ಜನತೆ ವಿಚಾರ ಮಾಡಿ ಜನತೆ ಮ್ಯಾನ್‌ಡೇಟ್ ಕೊಟ್ಟಿರುವಾಗ ಅದು ಸಹ ಕಣ್ಣಿಗೆ ಕುಕ್ಕುವ ರೀತಿಯಲ್ಲಿ ನಮ್ಮ ಪಕ್ಷವಾಗಿರುವಾಗ, ಅದನ್ನು ಟೀಕಿಸುವುದು ಸೂಕ್ತವೇ ? ನಮ್ಮ ಪಕ್ಷದ ವಿಚಾರ ಇಲ್ಲಿ ಏಕೆ ? ಇಂದು ಜನತೆ ಅಧಿಕಾರವನ್ನು ನಡೆಸುವುದಕ್ಕಾಗಿ ನಮ್ಮ ಪಕ್ಷಕ್ಕೆ ಮ್ಯಾನ್‌ಡೇಟ್ ಕೊಟ್ಟು ಕಳುಹಿಸಿರುವಾಗ, ನಾವು ಪಕ್ಷದ ಧ್ಯೇಯಧೋರಣೆಗಳನ್ನು ಇಡೇರಿಸುವುದಕ್ಕೆ ಪ್ರಯತ್ನ ಮಾಡುವಾಗ, ವಿರೋಧ ಪಕ್ಷದ ಸದಸ್ಯರು ಆದ ಹನುಮೇಗೌಡರವರು ನಮ್ಮ ನ್ಯಾಯ ನುಡಿಗಳಿಗೆ ಬೆಲೆ ಕೊಡುವಂತೆ ವರ್ತಿಸುತ್ತಾ ಇಲ್ಲ. ಅವರು ಹೊಟ್ಟೆ ತುಂಬಿಕೊಳ್ಳ ತಕ್ಕ ಪತ್ರಿಕೆಯಲ್ಲಿ ಬಂದ ವರದಿಯ ಮೇಲೆ ಈ ರೀತಿ ಹೇಳಿದರೆ, ...

ಶ್ರೀ ಕೋಣಂದೂರು ಲಿಂಗಪ್ಪ.—I rise to a point of order. ಮಾನ್ಯ ಸಚಿವರು ಹೊಟ್ಟೆ ತುಂಬಿಕೊಳ್ಳತಕ್ಕ ಪತ್ರಿಕೆಗಳು ಎಂದು ಹೇಳಿದರು. ಆ ರೀತಿ ಪತ್ರಿಕೆಗಳ ಮೇಲೆ ಆರೋಪಣೆ ಯನ್ನು ಹೊರಿಸುವುದು ಸೂಕ್ತವೇ ?

ಶ್ರೀ ಹೆಚ್. ಡಿ. ದೇವೇಗೌಡ.—ಹೊಟ್ಟೆ ತುಂಬಿಸಿಕೊಳ್ಳತಕ್ಕ ಪತ್ರಿಕೆಯನ್ನು ಅವರೂ ನಡೆಸಿ ಅದರ ಸಂಪಾದಕರು ಆಗಿದ್ದರು.

ಶ್ರೀ ಕೆ. ಹೆಚ್. ಪಾಟೀಲ್.—ಪತ್ರಿಕೆಯನ್ನು ನಡೆಸತಕ್ಕವರು ಒಳ್ಳೆಯ ಚಾರಿತ್ರವನ್ನು ಕಳೆದು ಕೊಂಡು ಯಾರಾದರೂ ಅಂಥ ಪತ್ರಿಕೆ ನಡೆಸಿದ್ದರೆ ಅಂಥವುಗಳನ್ನು ನೋಡಿ ಮೋಸ ಹೋದಾರು ಎಂದು ಹೇಳಿದೆನೇ ಹೊರತು ಬೇರೆ ಏನೂ ಹೇಳಲಿಲ್ಲ, ಇದನ್ನು ಲಿಂಗಪ್ಪನವರು ಕೇಳಲಿಲ್ಲ.

ಇನ್ನು ಅರಣ್ಯ ಭೂಮಿ ವಿತರಣೆ ಮಾಡುವ ವಿಷಯದಲ್ಲಿ ಅನೇಕ ಸದಸ್ಯರು ತಮ್ಮ ಅಭಿಪ್ರಾಯ ವನ್ನು ವ್ಯಕ್ತ ಮಾಡಿದ್ದಾರೆ. ಆ ವಿಚಾರದಲ್ಲಿ ನನಗೂ ಅವರಿಗೆ ಕೆಲ ಭೇದ ಇದೆ. ಅದನ್ನು ನಾನು ಒಪ್ಪುತ್ತೇನೆ. ಬಹು ಜನ ಸದಸ್ಯರು ಇಂದು ಮಾತನಾಡಿದವರಲ್ಲಿ ಹೊಲಗಳನ್ನು ಕೊಡಬೇಕು ಎಂದು ಹೇಳಿದ್ದಾರೆ. ಅವರಿಗೆ ನಾನು ಬಿನ್ನಹ ಮಾಡುತ್ತೇನೆ. ಅರಣ್ಯ ಸಂಪತ್ತನ್ನು ಕಾಪಾಡಿ ಕೊಳ್ಳತಕ್ಕದ್ದನ್ನು ಮಾಡಲು ಮಾಡಿ ತದನಂತರ, ನಮ್ಮ ರಾಜ್ಯದ ಅರಣ್ಯ ಸಂಪತ್ತು ರಾಷ್ಟ್ರೀಯ ಸಂಪತ್ತಿಗೆ ಸಮವಾಗಿ ಬಂದಾಗ ಉಳಿದ ಭೂಮಿಯನ್ನು ನಮ್ಮ ಅರಣ್ಯ ಸಂಪತ್ತು ನಷ್ಟವಾಗದ ರೀತಿಯಲ್ಲಿ ಕೊಡುವುದಕ್ಕೆ ನಾನು ಎಂದೂ ಅಡ್ಡಿ ಬರುವುದಿಲ್ಲ. ನೀವು ಬಡವರ ಬಗ್ಗೆ ಇಟ್ಟ ಪ್ರೇಮ ಕ್ಕಾಗಿ ಮತ್ತು ನಿಮ್ಮ ಆತ್ಮ ಕರಗಿದ್ದಕ್ಕಾಗಿ ನಿಮಗೆ ವಂದನೆಗಳನ್ನು ಅರ್ಪಿಸುತ್ತೇನೆ. ಆದರೂ ಕೂಡ ಸಾರ್ವತ್ರಿಕವಾದ ನನ್ನ ಧೋರಣೆಯನ್ನು ಬದಲಾವಣೆ ಮಾಡಿ ಜಮೀನುಗಳನ್ನು ಕೊಡುತ್ತೇನೆ ಎಂದು ಹೇಳುವ ಮಟ್ಟಕ್ಕೆ ನಾನು ಹೋಗುವುದಿಲ್ಲ. ಆದರೆ ಎಲ್ಲೆಲ್ಲಿ ಕೃಷಿಗೆ ಯೋಗ್ಯ ವಾದ ಜಮೀನು ಇದೆ ಅದನ್ನು ಕೊಡದಿದ್ದರೆ ಅವರು ನಿರ್ಗತಿಕರಾಗುತ್ತಾರೆ ಎನ್ನುವ ಮಾತು ನನ್ನ ಗಮನಕ್ಕೆ ಬರುತ್ತದೆ. ಆಗ ವಿಚಾರ ಮಾಡೋಣ. ಶ್ರೀಮಾನ್ ಗುಂಡೂರಾಯರು ಮುಂದೆ ಹೋಗಿ ಜನರಿಗೆ ಹೊಲಗಳನ್ನು ಕೊಡದೇ ಇದ್ದರೂ ಪರ್ವಾ ಇಲ್ಲ. ಅವರಿಗೆ ಜಮೀನುಗಳನ್ನು ಕೊಡಬೇಕು ಎಂದು ಹೇಳಿದ್ದಾರೆ. ಅದು ಸಹ ಎಲ್ಲಿಯತನಕ ಕಾರ್ಯಗತ ಆಗಿದೆ ಎಂದು ಗೊತ್ತಿಲ್ಲ. ನಾನು

ಈಗಾಗಲೇ ಬಹು ದಿವಸಗಳ ಹಿಂದೆ ಒಂದು ಸರ್ಕ್ಯುಲರ್ ಮುಖಾಂತರ ತಿಳಿಸಿದ್ದೇನೆ. ಯಾರಿಗೆ ಅರಣ್ಯದಲ್ಲಿ ಒಂದು ಇಂಚ್ ಜಮೀನು ಇಲ್ಲವೋ, ಯಾರಿಗೆ ಕೊಡಲಿಕ್ಕೆ ಮನೆ ಇಲ್ಲವೋ ಅಂಥವರಿಗೆ ಇರಲಿಕ್ಕೆ ವಾಸಕ್ಕಾಗಿ ಗುಡಿಸಲನ್ನು ಕಟ್ಟುವುದಕ್ಕೆ, ಎಂಥ ಅರಣ್ಯವಿದ್ದರೂ ಸಹ, ಸ್ಥಳ ಕೊಡಬೇಕೆಂದು ಅಧಿಕಾರಿಗಳಿಗೆ ತಿಳಿಸಿದ್ದೇನೆ. ಈ ವಿಷಯದಲ್ಲಿ ಯಾರದೂ ತಂಟೆ ತಕರಾರುಗಳು ಇಲ್ಲ. ಈ ವಿಷಯಗಲ್ಲಿ ಜನತೆ ವೋಟುಗಳನ್ನು ಕೊಟ್ಟು ಮ್ಯಾನ್‌ಡೇಟ್ ಕೊಟ್ಟು ನಮ್ಮನ್ನು ಇಲ್ಲಿಗೆ ಕಳುಹಿಸಿರುವಾಗ ಸೈಟ್ ಇಲ್ಲದವರಿಗೆ ಸೈಟುಗಳನ್ನು ಕೊಡುವುದು ಸರ್ಕಾರದವರ ಕರ್ತವ್ಯ. ಈ ವಿಷಯದಲ್ಲಿ ಮಾಡಿರುವಂಥ ತೀರ್ಮಾನವನ್ನು ಪಾಲನೆ ಮಾಡುವುದಕ್ಕೆ ನಾವು ಅಂಥವರಿಗೆ ಸ್ಥಳ ಕೊಡಲೇಬೇಕು.

2.30 P. M.

ಇನ್ನು ಅರಣ್ಯದಲ್ಲಿ ಕಟ್ಟಿಗೆಗಳನ್ನು ಒಯ್ಯುವಾಗ ಸೌಲಭ್ಯ ಕೊಡ್ಬೇಕು. ಮಲೆನಾಡಿನಲ್ಲಿ ಸೌಲಭ್ಯ ವಿಶೇಷವಾಗಿ ಬೇಕು, ಉಳಿದ ಕಡೆಯ ವಿಚಾರ ಬೇರೆ. ಮಲೆನಾಡಿನಲ್ಲಿ ಹೆಚ್ಚಿನ ಸೌಲಭ್ಯ ಬೇಕು ಎಂದು ಮಾನ್ಯ ಶ್ರೀ ಕೋಣಂದೂರು ಲಿಂಗಪ್ಪನವರು ನುಡಿದಿದ್ದಾರೆ, ಅವರ ಜೊತೆಗೆ ಅನೇಕರು ಒಪ್ಪಿಗೆ ಸ್ವರವನ್ನು ಸಹ ಹೇಳಿದ್ದಾರೆ. ನನಗೆ ಬಹಳ ಸಂತೋಷವಾಗುತ್ತದೆ. ಮಾನ್ಯ ಸದಸ್ಯರು ಜನತೆಯ ಕಲ್ಯಾಣಕ್ಕಾಗಿ ಬಹುವಾಗಿ ಶ್ರಮಿಸುತ್ತಿದ್ದಾರೆ ಮತ್ತು ನನ್ನ ಗಮನಕ್ಕೆ ಸಹ ತರುತ್ತಿದ್ದಾರೆ. ಆದರೆ ಕೊಟ್ಟ ಸೌಲಭ್ಯಗಳು ಮಾತ್ರ ಅವರ ಕಿವಿಗಳಿಗೆ ಹೋಗುವುದಿಲ್ಲ. ಕೊಡಲಾರದ ಸೌಲಭ್ಯಗಳ ಬಗ್ಗೆ ಬಹಳಷ್ಟು ಬೃಹದಾಕಾರವಾಗಿ ಬರುತ್ತವೆ. ಮಾನ್ಯ ಸದಸ್ಯರು ಮನೆಯನ್ನು ಕಟ್ಟಿಕೊಳ್ಳಲಿಕ್ಕೆ, ಸ್ವಂತ ಮನೆಯ ಉಪಯೋಗಕ್ಕಾಗಿ ದೊರೆಯುವ 5 ಚಕ್ಕಡಿಗೆ ಹಿಂದೆ ಇದ್ದ ದರದಲ್ಲಿ ಕೊಡಬೇಕು ಮತ್ತು ತಲೆಹೊರೆಯಲ್ಲಿ ಒಯ್ಯತಕ್ಕ ಬಡವರಿಗೆ ಪುಕ್ಕಟೆ ಕೊಡಬೇಕು ಎಂದು ತಿಳಿಸಿದ್ದಾರೆ ಅದರೂ ಸಹ ಸರ್ಕಾರ ಕೊಟ್ಟಿದ್ದು ಏನು ಒಂದು ಮಾತನ್ನು ಆಡಲಿಲ್ಲ. ಏನೇ ಇರಲಿ ಈಗಲಾದರೂ ಜನರಿಗೆ ಸಮರ್ಥನೀಯ ರೀತಿಯಲ್ಲಿ ಹೇಳುವುದಾದರೆ ನಿಮ್ಮ ಮನೆಯ ಉಪಯೋಗಕ್ಕಾಗಿ ದೊರೆಯುವ ಕಟ್ಟಿಗೆ ತಲೆ ಮೇಲೆ ಹೊರುವ ಬಡವನಿಗೆ ಪುಕ್ಕಟೆ ಕೊಡುತ್ತೇವೆ, ತಲೆ ಹೊರೆ ಮಾಡಿಕೊಂಡು ಜೀವನ ಮಾಡುವವರಿಗೆ ಸುಲಭ ದರದಲ್ಲಿ ಕೊಡಲಾಗುತ್ತಿದೆ ಎನ್ನುವ ಮಾತನ್ನು ಹೇಳುತ್ತೇನೆ. ರೈತಾಪಿ ಜನ ಚಕ್ಕಡಿ ಮೇಲೆ ತರುವವರಿಗೆ ಅದರ ಬೆಲೆ ಹೆಚ್ಚಿಸದೆ ಒಂದು ವರ್ಷಕ್ಕೆ 5 ಚಕ್ಕಡಿಗಳನ್ನು ತರಲು ಅವಕಾಶ ಕೊಟ್ಟಿದೆ ಎಂದು ನಾನು ಹೇಳಲು ಇಚ್ಛೆ ಪಡುತ್ತೇನೆ. ಇನ್ನು ಅದಾದನಂತರ, ಈ ಅರಣ್ಯದಲ್ಲಿ ಲಂಚಗುಳಿತನ ಹೆಚ್ಚಾಗುತ್ತಿದೆ ಎಂದು ಹೇಳಿದ್ದಾರೆ. ಕೆಲವು ಅಧಿಕಾರಿಗಳ ಬಗ್ಗೆ ಉಲ್ಲೇಖಮಾಡಿದ್ದಾರೆ, ಅಂತಹ ಅಧಿಕಾರಿಗಳ ಬಗ್ಗೆ ಏನೂ ಚಾಚು ತಪ್ಪದೆ ಒಂದು ಗಳಿಗೆ ಸಹಿತ ಕಳೆಯಲಾರದೆ ಎನ್‌ಕ್ವೈರಿ ಮಾಡಿಸುತ್ತೇನೆ. ಎನ್‌ಕ್ವೈರಿಯಲ್ಲಿ ಸಿಕ್ಕಿದರೆ ಅವರಿಗೆ ಯೋಗ್ಯವಾದ ಶಾಸನವನ್ನು ಮಾಡಲಾಗುತ್ತದೆ ಎಂದು ಈ ಸದನದ ಮುಖಾಂತರ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇದರ ಜೊತೆಗೆ ತಾವು ಎಲ್ಲಾ ಅಧಿಕಾರ ವರ್ಗವನ್ನು ಸಹ ಹಳಿಯುವಂತಹ ಹವ್ಯಾಸಗಳನ್ನು ಮಾಡಬಾರದು. ಅರಣ್ಯ ಖಾತೆ ಹಾಳಾಗಿ ಹೋಗಿಬಿಟ್ಟಿದೆ ಎಂದು ಮಾನ್ಯ ಶ್ರೀ ಹಂಜಿ ಶಿವಣ್ಣನವರು ಹೇಳಿದರು. ಆ ರೀತಿ ಹೇಳುವುದು ಸೂಕ್ತವಲ್ಲ. ಅನೇಕ ಸಂದರ್ಭದೊಳಗೆ ನಮ್ಮ ಅರಣ್ಯ ಅಧಿಕಾರಿಗಳು ರಾಷ್ಟ್ರದ ಅರಣ್ಯ ಇಲಾಖೆಗೆ ಮೇಲುಗೈ ತೋರಿಸಿದ್ದಾರೆ. ಕೇಂದ್ರ ಸರ್ಕಾರದವರು ಮೈಸೂರಿನಿಂದ ಕೆಲವು ಅಧಿಕಾರಿಗಳನ್ನು ಕೊಡಿರಿ ಎಂದು ಪತ್ರಬರೆದು ಕೇಳುತ್ತಾ ಇದ್ದಾರೆ, ಈ ದೃಷ್ಟಿಯಿಂದ ಅವರಿಗೆ ವಿಷಯ ಗೊತ್ತಿಲ್ಲದೆ ಇದ್ದರೆ ಕಾಗೋಡು ತಿಮ್ಮಪ್ಪನವರನ್ನು ಕೇಳಿರಿ ಎಂದು ಹೇಳುತ್ತೇನೆ, ಯಾವ ಅಧಿಕಾರಿ ಭ್ರಷ್ಟಾಚಾರಿಯಾಗುತ್ತಾನೆ ಅವರನ್ನು ಬೆಟ್ಟುಮಾಡಿ ತೋರಿಸಿ, ಅವರಿಗೆ ಉಗ್ರವಾದ ಶಿಕ್ಷೆ ಕೊಡಿ ಎಂದು ಹೇಳಿದರೆ ಶಿಕ್ಷೆ ಕೊಡಲಿಕ್ಕೆ ತಪ್ಪಿದಾಗ ನನ್ನ ಮೇಲೆ ಶಿಕ್ಷೆ ಕೊಡಿ, ಹಳಿದಾಗ ಸದನದಲ್ಲಿ ನಾನು ಒಬ್ಬ ಅವ್ಯವಹಾರಗಾರ ಇದ್ದರೆ ಉಳಿದ ದಕ್ಷ ಇಡೀ ಸದನವನ್ನೇ ಹಳಿಯಲು ಆದೀತೆ ? ಕೆ. ಎಚ್. ಪಾಟೀಲ್‌ರನ್ನು ಮಾತ್ರ ಹಳಿಯಬೇಕು, ನಮ್ಮ ಅರಣ್ಯ ಇಲಾಖೆಯಲ್ಲಿ ದಕ್ಷ ಅಧಿಕಾರಿಗಳು ಇದ್ದಾರೆ ದಕ್ಷ ಅಧಿಕಾರಿಗಳು ಇದ್ದಾರೆ ಒಂದೇ ದಿವಸದಲ್ಲಿ ಎಲ್ಲವನ್ನೂ ಸರಿಮಾಡಲು ಸಾಧ್ಯವೇ ? ಮಾನ್ಯ ಸದಸ್ಯರ ಮಾತುಗಳನ್ನು ಗಮನದಲ್ಲಿಟ್ಟು ಎಲ್ಲಾ ಪ್ರಯತ್ನಮಾಡಿ ಅಧಿಕಾರಿಗಳನ್ನು ತಿದ್ದಲಿಕ್ಕೆ ಪ್ರಯತ್ನ ಮಾಡುತ್ತೇನೆ. ತಿದ್ದಲು ಸಾಧ್ಯವಿಲ್ಲದ ಅಧಿಕಾರಿಗಳನ್ನು ಮುಕ್ತಾಯಗೊಳಿಸಲು ಪ್ರಯತ್ನ ಮಾಡುತ್ತೇನೆ. ಈಗಲೂ 90 ಅಧಿಕಾರಿಗಳನ್ನು ಸಸ್ಪೆಂಡ್ ಮಾಡಿರುವುದರ ಬಗ್ಗೆ ನನ್ನ ಮೇಲೆ ಆರೋಪಣೆ ಹೇಳುತ್ತಿದ್ದಾರೆ, 90 ಮಂದಿ ಅಧಿಕಾರಿಗಳು ಏನಿದ್ದಾರೆ ಇವರ ಬಗ್ಗೆ ಇವೊತ್ತಿನ ದಿವಸ ರೀಜನಲ್ ಭಾವನೆ ಮಾತು ಇದೆ, ಇದರ ಜೊತೆಗೆ ಜಾತಿ ಮೇಲೆ ಮಾಡಿದ್ದಾರೆ ಎಂದು ಒಂದು ಮಾತು ಹೇಳಿದರೆ ಅದನ್ನೆಲ್ಲಾ ಒಂದು ನಿಮಿಷದಲ್ಲಿ ಎದ್ದು ನಿಂತು ಮಾತನಾಡಲಿಕ್ಕೆ ಸಾಧ್ಯ

(ಶ್ರೀ ಕೆ. ಎಚ್. ಪಾಟೀಲ್)

ವಿಲ್ಲ. ಅದರಲ್ಲಿ ಅನೇಕರು ನಿರಪರಾಧಿಗಳು ಇರಬಹುದು. ಅವರನ್ನು ಸಸ್ಪೆಂಡ್ ಮಾಡಿದ್ದಾರೆ, ತೀವ್ರವಾಗಿ ಎನ್‌ಕ್ವೈರಿ ಮುಗಿಸಿ ಎಂದು ಎನ್‌ಕ್ವೈರಿ ಆಫೀಸರ್‌ಗೆ ತಿಳಿಸಿದ್ದೇನೆ, ಅವರು ಇನ್ನು ಎನ್‌ಕ್ವೈರಿ ನಡೆಸುತ್ತಿದ್ದಾರೆ, ತ್ವರಿತವಾಗಿ ಅವರ ವರದಿ ಬಂದಕೂಡಲೇ ನಿರಪರಾಧಿಯಾದವರಿಗೆ ಕ್ಷಮೆ ಕೇಳಿ ಅವರನ್ನು ತೀವ್ರವಾಗಿ ಕೆಲಸಕ್ಕೆ ಸೇರಿಸಿಕೊಳ್ಳುತ್ತೇವೆ, ಉಳಿದ ತಪ್ಪಿತಸ್ಥ ಅಧಿಕಾರಿಗಳನ್ನು ಖಾತೆಯಿಂದ ಮುಕ್ತಾಯಗೊಳಿಸುತ್ತೇವೆನ್ನುವ ಮಾತನ್ನು ಹೇಳುತ್ತೇನೆ. ಇನ್ನು ಒಂದು ಮಾತು ಹೇಳಿದರೆ ಅದು ಇನ್ನೊಂದು ರೀತಿ ಆಗಬಹುದು, ನಾನು ಇದನ್ನು ಹೆಮ್ಮೆಗಾಗಿ ಹೇಳುವುದಿಲ್ಲ, ಶಹಬಾಸ್‌ಗಿರಿ ಕೊಡಿ ಎಂದು ಹೇಳುವುದಿಲ್ಲ, ಅರಣ್ಯ ಇಲಾಖೆಯಲ್ಲಿ 13 ಕೋಟಿರೂಪಾಯಿಗಳ ಉತ್ಪನ್ನ ಬರಬೇಕು ಎಂದು ತಾವು ಅಂದಾಜು ಮಾಡಿದ್ದೀರಿ. ಒಂಭತ್ತುವರೆ ಕೋಟಿ ಅಥವಾ 10 ಕೋಟಿ ಒಳಗೆ ಇರಬೇಕು ಎಂದು ಇದ್ದದ್ದು 19 ಕೋಟಿ ರೂಪಾಯಿ ಉತ್ಪನ್ನ ಬಂದಿದೆ. ಅದಕ್ಕೆ ನಾವು ಕಾರಣರಲ್ಲ, ನೀವು ಎಲ್ಲರೂ ಕಾರಣರು ಎಂದು ಹೇಳುತ್ತೇನೆ. ಇವೊತ್ತಿನ ದಿವಸ ಸಾಮಾನ್ಯ ಜನತೆಯಲ್ಲಿ ವಿಶ್ವಾಸ ಹುಟ್ಟಿದ್ದು ಏನು ಎಂದರೆ ಕೆ. ಎಚ್. ಪಾಟೀಲರ ನಜರಿಗೆ ಬಂದ ವಿಷಯ ತೀವ್ರಗತಿಯಿಂದ ಎನ್‌ಕ್ವೈರಿಯಾಗುತ್ತದೆ ಎಂದು ಅವರ ನಜರಿಗೆ ಬಂದಿದೆ.

ಶ್ರೀ ಎಚ್. ಡಿ. ದೇವೇಗೌಡ.—ಉತ್ಪನ್ನ 13 ಕೋಟಿಯಿಂದ 19 ಕೋಟಿಗೆ ಹೋಗಿದೆ ಎಂದು ಹೇಳಿದರು. ನಿಮ್ಮ ಅಧಿಕಾರಿಗಳು ಕಳ್ಳಸಾಗಾಣಿಕೆ ಹಿಡಿದಿರುವುದರಲ್ಲಿ ಎಷ್ಟು ಮರಗಳು ಸೇರಿವೆ? ಹಿಂದೆ ಇದ್ದ ರೇಟು 5 ಇದ್ದದ್ದು ಇವೊತ್ತು 8ರಿಂದ 9ಕ್ಕೆ, 50ರಿಂದ 75ಕ್ಕೆ ಹೋಗಿದೆ, ಈ ವರ್ಷದ ಬೆಲೆಗಳಿಂದ ಆ ರೀತಿ ಎಷ್ಟೆಷ್ಟು ಜಾಸ್ತಿ ಬಂದಿದೆಯೆಂದು ಪಟ್ಟಿಕೊಡಿ.

ಶ್ರೀ ಕೆ. ಎಚ್. ಪಾಟೀಲ್.—ಪಟ್ಟಿಯನ್ನು ಕೊಡೋಣ. ರೇಟು ಹೆಚ್ಚಿಗೆ ಮಾಡಲಿಲ್ಲ. ನಾನು ಹುಣಸೂರಿಗೆ ಹೋಗಿದ್ದೆ. ಫಾರೆಸ್ಟ್ ಕಂಟ್ರಾಕ್ಟ್‌ನಲ್ಲಿ ಯಾವಯಾವುದರಲ್ಲಿ ಎಷ್ಟೆಷ್ಟು ಬಂತು ಎಂದು ಹೇಳುವುದು ಒಮ್ಮೆಲೆ ಸಾಧ್ಯವಿಲ್ಲ. ಒಟ್ಟಿನಲ್ಲಿ 19ಕೋಟಿ ರೂಪಾಯಿ ಬಂದಿರುವುದು ಖರೆ. ಅವರೆ ಶ್ರೀಮಾನ್ ದೇವೇಗೌಡರಿಗೆ ಸಮಾಧಾನವಿಲ್ಲ, ನಿಮಗೇ ಶಹಬಾಸ್‌ಗಿರಿ ಬರಲಿ. ರಿಕವರಿ ಆಫ್ ಸೇಲ್ ಬಿಟ್ಟು. ನಾನು ಹುಣಸೂರಿಗೆ ಹೋಗಿದ್ದೆ, ಅಲ್ಲಿ ಅದೇ ಲೀಲಾವು ಇದೆ. ಆ ಲೀಲಾವುಗಳು ನನ್ನ ನಜರಿಗೆ ಬಂದಕೂಡಲೇ ಪುನಃ ಲೀಲಾವು ಮಾಡಲಿಕ್ಕೆ ಪ್ರಯತ್ನಪಟ್ಟೆ. ಅದರಿಂದ ನಾಲ್ಕು ಪಟ್ಟು ಅಧಿಕವಾದ ಬೆಲೆ ಬಂತು ಶ್ರೀಮಾನ್ ದೇವೇಗೌಡರಂತಹ ಮಹನೀಯರು ಈ ಮಾತನ್ನು ಲಕ್ಷ್ಯದಲ್ಲಿ ಇಡಬೇಕು. ಇಷ್ಟೇ ಅಲ್ಲ, ಅನಂತರ ಅನೇಕ ಸಂದರ್ಭದಲ್ಲಿ ಲಿಲಾವು ಸಮಯಕ್ಕೆ ಸರಿಯಾಗಿ ಆಗದೆ ಉತ್ಪನ್ನ ಕಡಿಮೆ ಬಂತು, ಅಂಥ ಉತ್ಪನ್ನ ಹೆಚ್ಚಿಸುವುದಕ್ಕೆ ಸಮಯವನ್ನು ಅರಿತು ಲೀಲಾವು ಮಾಡಬೇಕು ಎಂದು ಆ ಖಾತೆ ಅಧಿಕಾರಿಗಳು ಆಸ್ಥೆ ವಹಿಸಿದರು. ಅದು ಅನಿವಾರ್ಯವಾಗಿ, ಇದು ಹೆಚ್ಚಲಿಕ್ಕೆ ಒಂದು ಕಾರಣ. ಒಂದು ಕಡೆ ರೋಸ್ ಉಡ್ 75 ಸಾವಿರ ರೂಪಾಯಿ ಬೆಲೆ ಬರುವುದನ್ನು ಕೆಲವು ದಿವಸದ ಹಿಂದೆ ನಮ್ಮ ಡಿ. ಐ. ಜಿ ಯವರು ಶ್ರಮಪಟ್ಟು ಹಿಡಿದರು, ಇಂಥ ಅನೇಕ ಸಂದರ್ಭಗಳು ಇರುತ್ತವೆ. ಪಬ್ಲಿಕ್ ಅಕೌಂಟ್ಸ್ ಕಮಿಟಿ ಅಧ್ಯಕ್ಷರಾದ ಶ್ರೀಮಾನ್ ದೇವೇಗೌಡರಿಗೆ ಅವನ್ನು ಅರಿಯಲಿಕ್ಕೆ ಸಾಧ್ಯವಿದೆ. ಕೆಲವಾರು ದಿನಗಳನ್ನು ಕೊಡುವುದಾದರೆ ಎಲ್ಲಾ ಸಂಖ್ಯೆಗಳನ್ನು ಹೇಳಬಲ್ಲೆ.

ಶ್ರೀ ಎಚ್. ಡಿ. ದೇವೇಗೌಡ.—ಅದು ಪಬ್ಲಿಕ್ ಅಕೌಂಟ್ಸ್ ಕಮಿಟಿಯಲ್ಲಿ ಬರುವುದಿಲ್ಲ. ಆಡಿಟ್ ಅಬ್ಜೆಕ್ಷನ್ ಇದ್ದರೆ ಬರುತ್ತದೆ, ಆಡಿಟ್ ಪ್ಯಾರಾಲ್ಲೆ ಬಿಟ್ಟು ಬೇರೆ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ. ಇವೊತ್ತು ಕೊಡುವುದಕ್ಕೆ ಆಗದೆ ಇದ್ದರೆ ಆಮೇಲೆ ಕೊಡಿ, ಅಂಕೆಸಂಖ್ಯೆಗಳನ್ನು ಕೊಟ್ಟು ಎಷ್ಟು ದುಡ್ಡು ಹೆಚ್ಚಿಸಿದ್ದೀರಿ, 6—7 ಕೋಟಿ ರೂಪಾಯಿ ದುಡ್ಡು ಹೆಚ್ಚಿಸಿದ್ದೇ ಅವರ ಶಹಬಾಸ್‌ಗಿರಿ ಕೊಡಬೇಕು. ಕಳೆದ ಒಂದು ವರ್ಷದಿಂದ ತಾವು ಅಧಿಕಾರಕ್ಕೆ ಬಂದಮೇಲೆ ಟೀಕ್, ಹೊನ್ನೆ, ಮತ್ತಿ ಮರಗಳು ಎಷ್ಟು ಬೆಲೆಗೆ ಹೋಗಿವೆ; ಮೊದಲು ಇವುಗಳ ಬೆಲೆಗಳು ಎಷ್ಟು ಇತ್ತು, ಈಗ ಅದರಲ್ಲಿ ಉತ್ಪನ್ನ ವಿಷ್ಟು ಹೆಚ್ಚು ಬರುತ್ತದೆ ಎಂಬುದನ್ನು ದಯಮಾಡಿ ಕೊಡಬೇಕು.

Unnecessarily I don't want to intervene.

ಶ್ರೀ ಕೆ. ಹೆಚ್. ಪಾಟೀಲ್.—ಕೊಡೋಣ ಅದರೆ ಒಂದು ಮಾತು ನಿಜ. ಇದು ದಕ್ಷತೆಯಿಂದ ಹೆಚ್ಚಾಗಿದೆ, ಕೆಲವಮಟ್ಟಿಗೆ ಮಾತ್ರ ಗಿಡಗಳ ಬೆಲೆಯಿಂದ ಜಾಸ್ತಿಯಾಗಿದೆ ಮತ್ತು ಅತ್ಯಲ್ಪವಾದ ಚಿಕ್ಕಮರಗಳ ಬೆಲೆಯೂ ಇದರಲ್ಲಿ ಕೂಡಿದೆ. ಬಹುಕಾಲದಿಂದ ಇದ್ದಂಥ ಚಾರ್ಕೋಲ್ ಬೆಲೆಯೂ ಸೇರಿದೆ, ಗಿಡಗಳನ್ನು ನೆಡಸುವ ಲಾಭವೂ ಇದರಲ್ಲಿ ಸೇರಿದೆ ಅಲ್ಲದೆ ಅನೇಕ ಕಡೆಗಳಲ್ಲಿ ಬೇರೆ ಬೇರೆ ಗಿಡಗಳನ್ನು ಲೀಲಾವ್ ಮಾಡಿದ್ದರಿಂದ ಇದು ಜಾಸ್ತಿಯಾಗಿದೆ, ಇವೆಲ್ಲದರ ಪರಿಣಾಮವಾಗಿ

ನಮ್ಮ ರಾಜ್ಯ ಸರ್ಕಾರದ ಉತ್ಪನ್ನ ಹೆಚ್ಚಿದೆ. ಇದು ತಮಗೆ ಸಮಾಧಾನವಾಗಿರಬಹುದು, ನನಗೆ ಸಮಾಧಾನವಿಲ್ಲ. ಈಗ ಇವರಲ್ಲಿ 19 ಕೋಟಿ ರೂಪಾಯಿ ಹಣ ಏನು ಬಂದಿದೆ ಅದು ನನಗೆ ಸಮಾಧಾನವಾಗಿಲ್ಲ. ಏತಕ್ಕೆಂದರೆ ಇದರಲ್ಲಿ 25 ಕೋಟಿ ರೂಪಾಯಿಯವರೆಗೆ ಉತ್ಪತ್ತಿ ಬರುವವರೆಗೂ ನನಗೆ ಸಮಾಧಾನವಿಲ್ಲ. ಸ್ಟೇಟ್ ಎಕ್ಸೈಜಕರ'ಗೆ ಪ್ರತಿಯೊಬ್ಬರೂ ಶ್ರಮ ಮಾಡಿ 25 ಕೋಟಿ ರೂಪಾಯಿಯವರೆಗೆ ಮುಟ್ಟಿಸುವುದಕ್ಕೆ ಗಮನ ಕೊಡಬೇಕು ಎಂದು ಹೇಳುತ್ತೇನೆ. ಇದಕ್ಕೆ ನಾನು ಹಿಂದೇಟು ಹಾಕುತ್ತೇನೆಯೋ ಇಲ್ಲವೇ ಎನ್ನುವುದನ್ನು ತಾವು ಕೂಲಂಕಷವಾಗಿ ನೋಡಬೇಕು ಎಂದು ಹೇಳುತ್ತೇನೆ.

ಇನ್ನು ಮಾನ್ಯ ಸದಸ್ಯರು ಹೇಳಿದರು ಈಗಾಗಲೇ ಫಾರೆಸ್ಟ್ ಡೆವಲಪ್‌ಮೆಂಟ್ ಕಾರ್ಪೋರೇಷನ್ ಇದೆ, ಅದರ ಜೊತೆಗೆ ಇನ್ನೊಂದು ಫಾರೆಸ್ಟ್ ಇಂಡಸ್ಟ್ರೀಸ್ ಡೆವಲಪ್‌ಮೆಂಟ್ ಕಾರ್ಪೋರೇಷನ್ ಮಾಡಿದ್ದಾರಲ್ಲಾ ಇದು ಏತಕ್ಕೆ ಎಂದು. ಈ ಬಗ್ಗೆ ಹೇಳಬೇಕಾದರೆ ಫಾರೆಸ್ಟ್ ಡೆವಲಪ್‌ಮೆಂಟ್ ಕಾರ್ಪೋರೇಷನ್ ಏನು ಇದೆ ಅದರ ಬೆಳವಣಿಗೆ ಯಾವರೀತಿ ಎಂದರೆ ಸರ್ಕಾರದವರು ಕೊಟ್ಟಿರತಕ್ಕಂಥ ಹೊಲಗಳು ಏನು ಇವೆ ಅದರಲ್ಲಿ ಬೆಳೆ ಬೆಳೆಯುವುದಕ್ಕೆ ಬ್ಯಾಂಕುಗಳಲ್ಲಿ ಸಾಲ ಪಡೆದು ಆ ಸಾಲಗಳ ಮುಖಾಂತರ ಅದರಲ್ಲಿ ಬೆಳೆ ಬೆಳೆಯುತ್ತಿದ್ದಾರೆ. ಆದರೆ ಫಾರೆಸ್ಟ್ ಇಂಡಸ್ಟ್ರೀಸ್ ಡೆವಲಪ್‌ಮೆಂಟ್ ಕಾರ್ಪೋರೇಷನ್ ಏತಕ್ಕೆ ಬಂತು ಎಂದರೆ ವ್ಯಕ್ತಿಗಳು ದಳ್ಳಾಳಿಗಳಾಗಿ ನಡುಮಧ್ಯೆ ಹಣವನ್ನು ಎಕ್ಸ್‌ಪೋರ್ಟ್‌ನಿಂದಾಗಲಿ ಅಥವಾ ಇಂಪೋರ್ಟ್‌ನಿಂದಾಗಲಿ ಹಣವನ್ನು ಹೊಡೆಯುತ್ತಿದ್ದರು. ಇದರಿಂದ ಲ್ಯಾಪ್ಸ್ ಅಂಡ್ ಟ್ರ್ಯಾಪ್ಸ್ ಆಗಿ ಹೇರಳವಾಗಿ ಹಣ ನಷ್ಟವಾಗಿ ಹೋಗುತ್ತಿತ್ತು. ಈಗಾಗಲೇ ತಯಾರಾಗಿರತಕ್ಕಂಥ 16 ಉದ್ದಿಮೆಗಳಲ್ಲಿ ಅವನ್ನು ತಜ್ಞರಿಂದ ಕೂಲಂಕಷವಾಗಿ ವಿಚಾರಿಸಿ ಅದರಲ್ಲಿ ಎಷ್ಟು ಉದ್ದಿಮೆಗಳು ಸಾಧ್ಯವಾಗುತ್ತದೋ ಅಷ್ಟು ಉದ್ದಿಮೆಗಳನ್ನು ಆರಣ್ಯ ಸಂಪತ್ತಿನಲ್ಲಿ ಮಾಡಲು ಉದ್ದೇಶಿಸಿದೆ. ಮತ್ತು ಇದರಲ್ಲಿ ಅನ್ಯರು ಮಾಡದೇ ಇರುವ, ಮತ್ತು ಇದರಲ್ಲಿ ಅನ್ಯರು ಬಿಟ್ಟಿರುವ ಸಂಪತ್ತಿನಲ್ಲಿ ಮತ್ತು ಈಗಿರುವ ಉದ್ದಿಮೆಗಳಿಗೆ ಧಕ್ಕೆ ಬಾರದೇ ಇರುವ ರೀತಿಯಲ್ಲಿ ಅರಣ್ಯ ಸಂಪತ್ತುಗಳಿಂದ ಉದ್ದಿಮೆಗಳನ್ನು ಪ್ರಾರಂಭಿಸಿ ದೇಶದಲ್ಲಿರತಕ್ಕಂಥ ಕಸವನ್ನು ರಸವನ್ನಾಗಿ ಮಾಡಬೇಕೆಂಬುದು ಉದ್ದೇಶ. ಅದಕ್ಕಾಗಿ ಮುಂದೆ ಬರುವ fifth five year plan ನಲ್ಲಿ ಹೇರಳವಾದ ಹಣವನ್ನು ನಮ್ಮ ಪ್ಲಾನಿಂಗ್ ಕಮಿಷನ್ನಿನವರು ತೆಗೆದು ಇಟ್ಟಿದ್ದಾರೆ. ಆದಕ್ಕಾಗಿ ನಮ್ಮ ರಾಜ್ಯದವರು ಮೊಟ್ಟ ಮೊದಲಿಗರಾಗಿ ಈ ಕಾರ್ಪೋರೇಷನನ್ನು ಪ್ರಾರಂಭ ಮಾಡಿದ್ದಾರೆ. ಅವಕ್ಕೆ ನಮ್ಮ ಪಾಲಿಸಿ ಹಣ ಅಲ್ಲದೆ, ಅವರಿಂದ ನಮ್ಮ ಈ ಉದ್ದಿಮೆಗಳೂ ಕೂಡ ಬೆಳೆಯಲಿವೆ ಎಂದು ಈ ಸಂದರ್ಭದಲ್ಲಿ ಹೇಳವುದಕ್ಕೆ ಇಚ್ಛೆಪಡುತ್ತೇನೆ.

ಇನ್ನು ಆರಣ್ಯ ಕಾರ್ಪೋರೇಷನ್ನಿನವರು ಉದ್ದಿಮೆಗಳನ್ನು ಹಾಕಬೇಕಾದರೆ ಎಲ್ಲೆಲ್ಲಿ ಯಾವ ಯಾವ ಅರಣ್ಯ ಸಂಪತ್ತು ಸಿಗುತ್ತದೋ ಅಂಥಾ ಪ್ರದೇಶಗಳಲ್ಲಿ ಅದಕ್ಕೆ ಸಂಬಂಧಪಟ್ಟಂಥ ಉದ್ದಿಮೆಗಳನ್ನು ಹಾಕುತ್ತಾರೆಯೇ ವಿನಾ ಯಾವುದೇ ಒಂದು ಭಾಗಕ್ಕಾಗಲಿ ಮೀಸಲಾಗಿಡುವುದಿಲ್ಲ ಎಂದು ಹೇಳಲಿಕ್ಕೆ ನಾನು ಇಚ್ಛೆಪಡುತ್ತೇನೆ.

ಇನ್ನು ಎರಡನೆಯದಾಗಿ ನಾನು ವಕ್ಕಲುತನದ ವಿಷಯವಾಗಿ ಕೆಲವು ಮಾತುಗಳನ್ನು ಹೇಳಲಿಕ್ಕೆ ಇಚ್ಛೆಪಡುತ್ತೇನೆ. ನಮ್ಮ ರಾಜ್ಯದಲ್ಲಿ ಸಾಯಿಲ್ ಕನ್‌ಸರ್ವೇಷನ್‌ಗೆ ಒಟ್ಟು ಕ್ಷೇತ್ರ 104 ಲಕ್ಷ ಹೆಕ್ಟೇರ್ಸ್ ಇದೆ. ಈಗಾಗಲೇ ತಮಗೆಲ್ಲಾ ಗೊತ್ತಿರುವಂತೆ ಈ ಸಾಯಿಲ್ ಕನ್‌ಸರ್ವೇಷನ್ ಕಾರ್ಯ ಸ್ವಲ್ಪ ಪ್ರಮಾಣದಲ್ಲಿ ಸಮಾಧಾನಕರವಾಗಿ ನಡೆದಿದೆ. ಇಂದು ನಡೆದಂಥ ಕಾರ್ಯ ಸಾಕು ಎಂದು ಹೇಳುವವನು ನಾನಲ್ಲ. ಅದು ಇನ್ನೂ ಮುಂದುವರೆಯಬೇಕು. ಒಂದೊಂದು ತಾಲ್ಲೂಕಿಗೆ ಒಂದೊಂದಾದರೂ ಕೂಡ ಸಬ್ ಡಿವಿಷನ್ ಬೆಳೆಯಬೇಕು. ಇದು ಬೆಳೆಯಬೇಕಾದರೆ 2—3 ವರ್ಷದವರೆಗೆ ಕಾಯಬೇಕು. ಕೆಲವು ಪ್ರದೇಶದಲ್ಲಿ ಬದುಹಾಕುವ ಕಾರ್ಯಕ್ಕೆ ಅಲ್ಲಿಯ ಜನರ ಮನಸ್ಸು ಹೋಗುವುದಿಲ್ಲ. ಕೆಲವು ಪ್ರದೇಶಗಳಲ್ಲಿ ಈ ಬಗ್ಗೆ ಒತ್ತಾಯ ಮಾಡಬೇಕು.

ಶ್ರೀ ಕೆ. ಹೆಚ್. ಹನುಮೇಗೌಡ.—ಕಾಂಟೂರ್ ಬಂಡಿಂಗ್ ಕೆಲಸ ಹಳ್ಳ ದಿಣ್ಣೆ ಅನುಸರಿಸಿ ಬಂಡ್ ಹಾಕುತ್ತಾ ಇಲ್ಲ. ಹಳ್ಳ ದಿಣ್ಣೆ ನೋಡದೇ ಹಾಕುತ್ತಿದ್ದಾರೆ. ಇದರಿಂದ ಏನಾಗುತ್ತದೆ ಎಂದರೆ ಕೆಳಗಡೆ ಹಳ್ಳ ಇರುವಕಡೆ ನೀರು ಬಂದರೆ ಅಲ್ಲೇ ನೀರು ನಿಂತುಬಿಟ್ಟು ಪೈರೆಲ್ಲಾ ನಾಶವಾಗಿ ಹೋಗುತ್ತದೆ. ಮೇಲುಗಡೆ ಬಂಡ್ ಹಾಕಿದರೆ ಮೇಲಿನಿಂದ ಕೆಳಗಡೆಯವರೆಗೆ ನೀರೇ ಬರುವುದಿಲ್ಲ. ಆದುದರಿಂದ ನಾನು ಹೇಳುವುದು ಏನೆಂದರೆ ಅಮೇರಿಕಾದ ಸಿಸ್ಟಂ ಪ್ರಕಾರ ಈ ಕೆಲಸ ಮಾಡುವಾಗ 100 ಅಡಿಗೆ 3 ಇಂಚು ವ್ಯತ್ಯಾಸ ಬರುವ ಹಾಗೆ ಬಂಡಿಂಗ್ ಹಾಕುತ್ತಾರೆ, ಆದುದರಿಂದ ಆ ರೀತಿ ಮಾಡುವಂತೆ ವ್ಯವಸ್ಥೆ ಮಾಡುತ್ತೀರಾ ?

(ಶ್ರೀ ಕೆ. ಹೆಚ್. ಹನುಮೇಗೌಡ)

ಇನ್ನು ಸಾಯಿಲ್ ಕನ್‌ಸರ್ವೇಷನ್ ಇಲಾಖೆಯವರು ಗುಲ್ಬರ್ಗ ಮತ್ತು ಬಿಜಾಪುರದಲ್ಲಿ ಸಮರ್ಪಕವಾದಂಥ ರೇಟ್ ಕೊಡುತ್ತಾ ಇಲ್ಲ. ಇಂತಿಂಥ ಕೆಲಸಕ್ಕೆ ಇಷ್ಟು ಕೊಡಬೇಕೆಂದು ಪಬ್ಲಿಷ್ ಮಾಡಿದ್ದಾರೆ. ಅದೇ ತರಹ ಕೊಡುವಂತೆ ಮಾಡಬೇಕು.

ಶ್ರೀ ಕೆ.ಹೆಚ್. ಪಾಟೀಲ್.—ಮಾನ್ಯ ಕೆ. ಹೆಚ್. ಹನುಮೇಗೌಡರು, ಸಾಯಿಲ್ ಕನ್‌ಸರ್ವೇಷನ್ ವಿಷಯ ಮತ್ತು ಕಾಂಟೂರ್ ಬಂಡಿಂಗ್ ವಿಷಯ ಸರ್ಕಾರದ ಗಮನಕ್ಕೆ ತಂದಿದ್ದಾರೆ. ಅಮೇರಿಕಾ ಸ್ಟ್ರಿಕ್ಟ್ ಪ್ರಕಾರದ ಕಾಂಟೂರ್ ಕೆಲಸವನ್ನು ಇಲ್ಲಿ ಜಾರಿಗೊಳಿಸುವುದಕ್ಕಾಗುವುದಿಲ್ಲ ಆರೀತಿ ಸ್ಟ್ರಿಕ್ಟ್ ಕಾಂಟೂರ್ ಮಾಡಿಕೊಂಡು ಹೋಗುವುದಕ್ಕೆ ಸಾಧ್ಯ ಇಲ್ಲ. ಏಕೆಂದರೆ ಇಲ್ಲಿ ಒಂದೊಂದು ಎಕರೆ ಭೂಮಿಯಲ್ಲಿ ನೂರಾರು ತುಂಡುಗಳು ಆಗುವ ಸಂದರ್ಭ ಇದೆ. ಅದಕ್ಕಾಗಿ ನಾವು ತಜ್ಞರಿಂದ ಪರಿಶೀಲಿಸಿ ಇಲ್ಲ ಸ್ಟ್ರಿಕ್ಟ್ ಕಾಂಟೂರ್ ಮತ್ತು ಸ್ಟ್ರಿಪ್ ಕಾಂಟೂರ್ ಇವೆರಡನ್ನೂ ಅಳವಡಿಸಿಕೊಂಡು ಹೋಗಬೇಕಾಗಿದೆ. ಈ ಬಗ್ಗೆ ನಾವು ಒಂದು ಪ್ರಿನ್ಸಿಪಲ್ ಫಾಲೋ ಮಾಡಬೇಕಾಗಿದೆ. ಇದರಲ್ಲಿ ಏನಾದರೂ ಅಧಿಕಾರಿಗಳು ತಪ್ಪು ಮಾಡಿದರೆ ಅದನ್ನು ನನ್ನ ಗಮನಕ್ಕೆ ತಂದರೆ ಅದರ ಬಗ್ಗೆ ತನಿಖೆ ಮಾಡುತ್ತೇನೆ. ಬರೀ ಸ್ಟ್ರಿಕ್ಟ್ ಕಾಂಟೂರನ್ನೇ ಅಳವಡಿಸಬೇಕು ಎಂದರೆ ಅನೇಕ ರೈತರಿಗೆ ತೊಂದರೆಯಾಗುತ್ತದೆ. ಅದರಲ್ಲೂ ಸಣ್ಣ ಸಣ್ಣ ರೈತರಿಗೆ 2—3 ಎಕರೆ ಒಬ್ಬರಿಗೆ ಇದ್ದರೆ ಅದು ಇನ್ನೊಬ್ಬರಿಗೆ ಹೋಗುತ್ತದೆ. ಇದು ಆಗಬಾರದು ಎನ್ನುವ ದೃಷ್ಟಿ ಇಟ್ಟುಕೊಂಡು ಸಾಧ್ಯವಾದಷ್ಟು ಮಟ್ಟಿಗೆ ಕಾಂಟೂರ್ ಅನುಸರಿಸಿ ಕೆಲಸ ಮಾಡಿಸಬೇಕು ಎಂದು ಸರ್ಕ್ಯುಲರ್ ಮುಖಾಂತರ ತಿಳಿಸಿದ್ದೇವೆ.

ಶ್ರೀ ಹೆಚ್. ಡಿ. ದೇವೇಗೌಡ.—ಸಾಯಿಲ್ ಕನ್‌ಸರ್ವೇಷನ್‌ಗೆ ಹೋದವರು 3 ತಿಂಗಳು ಇದ್ದು 15—20 ಸಾವಿರ ರೂಪಾಯಿ ಸಂಪಾದನೆ ಮಾಡಿಕೊಂಡು, ಜಮೀನು ತೆಗೆದುಕೊಂಡು ಅವರ ಹೆಂಡತಿ ಹೆಸರಿನಲ್ಲಿ ಬರೆಸಿದ್ದಾರೆ.

ಶ್ರೀ ಕೆ. ಹೆಚ್. ಪಾಟೀಲ್.—ಇತಿಹಾಸದಲ್ಲಿ ಕೆಟ್ಟ ಜನರು ಇದ್ದಾರೆ. ತಾವು ಹೇಳಿದುದಕೆ ಬಹಳ ಸಂತೋಷ. ಮಾನ್ಯ ದೇವೇಗೌಡರು ಇಂಥ ಒಬ್ಬ ಕಳ್ಳ ಇದ್ದಾನೆ, ಅವನ ಬಗ್ಗೆ ಕಣ್ಣು ಹಾಯಿಸ್ಯಾರಿ ಎಂದು ಹೇಳಿದ್ದಾರೆ. ನೀವು ಆರೀತಿ ಸುಮ್ಮನೆ ಹೇಳುವುದಿಲ್ಲ. ನಾವು ಕೂಡ ಆರೀತಿ ಹೇಳಿದ ಮೇಲೆ ಸುಮ್ಮನೆ ಇರುವುದಕ್ಕೆ ಆಗುವುದಿಲ್ಲ. ಆ ಮನುಷ್ಯನ ಹೆಸರು ಹೇಳಿ ಎಂದು ನಾನು ಈಗಲೇ ಒತ್ತಾಯ ಮಾಡುವುದಿಲ್ಲ. ಆ ಬಗ್ಗೆ ತಾವು ನಿಧಾನವಾಗಿ ಕಾಗದ ಬರೆಯಿರಿ. ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಹೆಚ್. ಡಿ. ದೇವೇಗೌಡ.—ಫಾರೆಸ್ಟಿನಿಂದ ರೆವಿನ್ಯೂ ಬಂದಿರತಕ್ಕಂಥಾದ್ದು 1971-72 ರಲ್ಲಿ 15 ಕೋಟಿ 40 ಲಕ್ಷ 26 ಸಾವಿರ ರೂಪಾಯಿ, 1972-73ಕ್ಕೆ 16 ಕೋಟಿ 10 ಲಕ್ಷ ರೂಪಾಯಿ ಎಂದು ಕೊಟ್ಟಿದ್ದೀರಿ. ರಿವೈಸ್ಡ್ ಎಸ್ಟಿಮೇಟ್ಸ್ ಪ್ರಕಾರ 19 ಕೋಟಿ ರೂಪಾಯಿ ಇದೆ. ನೀವು 13 ಕೋಟಿಯಿಂದ 19 ಕೋಟಿ ಎಂದು ಹೇಳಿದ್ದೀರಿ, ಇಲ್ಲಿಗೆ 6 ಕೋಟಿ ರೂಪಾಯಿ ಜಾಸ್ತಿಯಾಗಿದೆ, ಅದು ಸರಿಯಲ್ಲ.

ಶ್ರೀ ಕೆ. ಹೆಚ್. ಪಾಟೀಲ್.—ನಾನು ಹೇಳಿದ್ದು 15 ರಿಂದ 19 ಕೋಟಿ ರೂಪಾಯಿ ಆಗಿದೆ ಎಂದು. 13 ಕೋಟಿ ಅಂತ ಏನಾದರೂ ಹೇಳಿದ್ದರೆ ಅದು ತಪ್ಪು. ಅದನ್ನು ನಾನು ಅನೇಕ ಸಲ ಹೇಳಿದ್ದೇನೆ. ಆದರೂ ಕೂಡ ತಾವು ಈಗ ನನ್ನ ಗಮನಕ್ಕೆ ತಂದಿದ್ದೀರಿ. ಅದಕ್ಕೆ ನಾನು ಉಪಕೃತನಾಗಿದ್ದೇನೆ.

ಫರ್ಟಿಲೈಸರ್ ವಿಷಯವಾಗಿ ಅನೇಕ ಜನರು ಮಾತನಾಡಿದರು. 1965-66ರಲ್ಲಿ ನೈಟ್ರೋಜಿನಸ್ ಫರ್ಟಿಲೈಸರ್ 2880 ಟನ್, ಫಾಸ್ಫೇಟ್ಸ್ 8020 ಟನ್ಸ್, ಪೊಟ್ಯಾಷ್ 7200 ಟನ್ ಇದ್ದುದು ಈ ಹೊತ್ತಿನ ದಿವಸ 16,800 ಟನ್ ನೈಟ್ರೋಜಿನಸ್ ಫರ್ಟಿಲೈಸರ್ಸ್, 55,787 ಟನ್ ಫಾಸ್ಫೇಟ್, 39,083 ಟನ್ ಪೊಟ್ಯಾಷ್ ಎಂದರೆ ಎಷ್ಟು ಪಟ್ಟು ಹೆಚ್ಚಾಯಿತು ಎನ್ನುವುದನ್ನು ತಾವೆಲ್ಲ ಗಮನಿಸಬೇಕು. ಹೀಗೆ ಫರ್ಟಿಲೈಸರ್ ಸಿಕ್ಕುತ್ತಿದ್ದರೂ ಅದು ನಮಗೆ ಸಾಲದು. ಒಂದು ಎಕರೆಗೆ ಎರಡೂವರೆ ಮೂಟೆ ಗೊಬ್ಬರ ಬೇಕು ಎಂದು ಲೆಕ್ಕ ಹಾಕಬೇಕಾಗುತ್ತದೆ. ಆದರೆ ಮೈಸೂರಿನಲ್ಲಿ ಒಂದು ಎಕರೆಗೆ ಒಂದು ಚೀಲವಾದರೂ ಗೊಬ್ಬರಬೇಡವೇ ? ಆ ಪ್ರಕಾರ ಲೆಕ್ಕ ಹಾಕಿದರೂ 25 ಲಕ್ಷ ಟನ್ ಗೊಬ್ಬರ ನಮಗೆ ಬೇಕು. 25 ಲಕ್ಷ ಟನ್ ಗೊಬ್ಬರ ಸಿಕ್ಕುವುದು ಸಾಧ್ಯವೇ ? ಇಲ್ಲ. ಹೀಗಾಗಿ ಯಾವ ರೀತಿ ಅದರ ವ್ಯವಸ್ಥೆ ಮಾಡಬೇಕು ? ಈ ವರ್ಷ ಹೋದ ವರ್ಷಕ್ಕಿಂತ ಹೆಚ್ಚು ಸ್ಟಾಕ್

ಪಡೆದಿದ್ದೇವೆ. ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುವಾಗ ಗವರ್ನರ್ ಆಳ್ವಿಕೆಯಲ್ಲಿ ಕೆಲವು ಅಧಿಕಾರಿಗಳ ನಿರ್ಲಕ್ಷ್ಯದಿಂದ ಫರ್ಟಿಲೈಸರ್ ಕೊರತೆಯುಂಟಾಯಿತು ಎಂದು ಹೇಳಿದ್ದಾರು. ಕೊರತೆಯಾಯಿತು ಎಂದು ಹೋದ ಸಲ ಬಿಡಲಿಲ್ಲ. ಆ ಕೊರತೆಯನ್ನು ಸರಿಪಡಿಸಿಕೊಳ್ಳಲು ನಮ್ಮ ಸರ್ವಶಕ್ತಿಯನ್ನೂ ಕೇಂದ್ರ ಸರ್ಕಾರದ ಮೇಲೆ ಉಪಯೋಗ ಮಾಡಿ ನ್ಯಾಯಬದ್ಧವಾಗಿ ಬರ ಬೇಕಾಗಿದ್ದ ಪಾಲು ಏನಿತ್ತೋ ಅದನ್ನು ಕೊಡಿರಿ ಎಂದು ಕೇಳಿ ತಂದೆವು. ನಮಗೆ ಆ ಗೊಬ್ಬರ ವನ್ನು ಕೊಟ್ಟಂಥ ಕೇಂದ್ರ ಸಚಿವರಿಗೆ ಈ ಸಂದರ್ಭದಲ್ಲಿ ಅಭಿನಂದಿಸುತ್ತೇನೆ. ಆದಕ್ಕಿಂತ ಹೆಚ್ಚು ಗೊಬ್ಬರ ಈ ಸಲ ತಂದಿದ್ದೇವೆ. ಗೊಬ್ಬರ ಕಡಿಮೆಯಾಗುತ್ತದೆ ಎನ್ನುವ ಒಂದೇ ಕಾರಣಕ್ಕಾಗಿ ಯೋಚಿಸಬೇಕಾಗಿಲ್ಲ. ಅನೇಕ ವಿಧವಾದ ಕೆಲವು ತರಹ ಗೊಬ್ಬರಗಳನ್ನು ಉಪಯೋಗ ಮಾಡಿ, ಅದರ ಮೇಲೆ ಹಿಡಿತವನ್ನು ಇಟ್ಟು ಎಲ್ಲರಿಗೂ ಸಮಾಧಾನ ಮಾಡಬೇಕು ಎನ್ನುವುದೇ ಸರ್ಕಾರದ ಉದ್ದೇಶವಾಗಿದೆ. ಈ ಬಗ್ಗೆ ತಮ್ಮೆಲ್ಲರ ಸಹಾಯ, ಸಹಕಾರವನ್ನು ನಾನು ಕೇಳುತ್ತೇನೆ. ಕೆಲವು ವೇಳೆ ಹಂಚುವಿಕೆಯಲ್ಲಿ ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ ಮೂಲಕ ಬೇಡ, ಸಹಕಾರ ಸಂಘ ಗಳಿಗೆ ಕೊಡಿರಿ ಎಂದು ಕೆಲವರೂ, ಇನ್ನು ಕೆಲವರು ಸಹಕಾರ ಸಂಘಗಳಲ್ಲಿ ದುರುಪಯೋಗವಾಗು ತ್ತದೆ, ಅವುಗಳಿಗೆ ಕೊಡಬೇಡಿರಿ ಮನೆಗೆ ಮಾರಿಯಾದಂಥ ಸಹಕಾರ ಸಂಘಗಳಿವೆ, ಅವುಗಳನ್ನು ಮುಚ್ಚಿ ಹಾಕಿರಿ ಎಂದು ಅನೇಕ ಮಾತುಗಳನ್ನು ಹೇಳಿದ್ದಾರೆ. ಮಾನ್ಯ ಸದಸ್ಯರು ಯಾರೇ ಆಗಲಿ, ಎಲ್ಲಿಯಾದರೂ ಗೊಬ್ಬರದ ವಿತರಣೆಯಲ್ಲಿ ಲೋಪದೋಷಗಳಿದ್ದು, ದುಷ್ಟಶಕ್ತಿಗಳ ಕೈವಾಡವಿರು ವುದನ್ನು ಟೆಲಿಫೋನ್ ಮೂಲಕ ಅಂಥ ಸಂಗತಿಗಳನ್ನು ನನ್ನ ಗಮನಕ್ಕೆ ತಂದರೂ ಸಹ ಸ್ವತಃ ಬಂದು ಹೇಳಿದಂತೆ ಭಾವಿಸಿ ಕೂಡಲೆ ಪರಿಶೀಲನೆ ಮಾಡಿಸಿ ಉಗ್ರವಾದ ಕ್ರಮ ತೆಗೆದುಕೊಳ್ಳುತ್ತೇನೆ ಎನ್ನುವ ಆಶ್ವಾಸನೆಯನ್ನು ಕೊಡುತ್ತೇನೆ.

ಅಗ್ರಿಕಲ್ಚರಲ್ ಪ್ರೊಡಕ್ಷನ್ ವಿಷಯವಾಗಿ ಹೇಳುವುದಾದರೆ, ಹತ್ತಿ, ಬೇಳೆ, ಕಾಳು, ಪಲ್ಸಸ್, ಸಕ್ಕರೆ, ತಂಬಾಕು, ಇವುಗಳು ಏನೂ ಬರುತ್ತಿಲ್ಲ, ಒಕ್ಕಲುತನದ ಖಾತೆಯ ಅಧಿಕಾರಿಗಳು ನಾಲಾಯಕ್ಕು ಇದ್ದಾರೆ ಎಂದು ಹೇಳಿದರು; ಏನೂ ಕೆಲಸ ಮಾಡುತ್ತಿಲ್ಲವೆಂದು ಹೇಳಿದರು. ನಾನು ಅಂಕಿ ಸಂಖ್ಯೆಗಳನ್ನು ಕೊಡುತ್ತೇನೆ. ಅದರ ಮೇಲೆ ಮಾನ್ಯ ಸದಸ್ಯರೇ ವಿಚಾರಮಾಡಲಿ ಎಂದು ಹೇಳುತ್ತೇನೆ. ಅನೇಕ ಕಡೆಗಳಲ್ಲಿ ಬರಗಾಲವಿದೆ ಎನ್ನುವುದನ್ನು ಮಾನ್ಯ ಸದಸ್ಯರು ಅರಿತಿದ್ದಾರೆ. ಆದರೂ ಹೇಳುತ್ತಿದ್ದಾರೆ. 1971-72ರಲ್ಲಿ ಹತ್ತಿ 5.65 ಲಕ್ಷ ಬೇಲ್ ಇದ್ದದ್ದು ಈ ಹೊತ್ತು 6.05 ಲಕ್ಷ ಬೇಲ್ ಆಗಿವೆ. ಆಯಿಲ್ ಸೀಡ್ಸ್ 6.83 ಲಕ್ಷ ಟನ್ ಆಗುತ್ತಿದ್ದುದು ಈ ಹೊತ್ತು ಐದು ಲಕ್ಷ ಟನ್ ಆಗಿದೆ. ಷುಗರ್ 8.5 ಲಕ್ಷ ಟನ್ ಇದ್ದುದು ಈ ಹೊತ್ತು 8.9 ಲಕ್ಷ ಟನ್ ಆಗಿದೆ; ಪಲ್ಸಸ್ 4ಲಕ್ಷ ಟನ್ ಇದ್ದುದು ಮೂರು ಲಕ್ಷ ಟನ್ ಆಗಿದೆ. ಇದರ ಮೇಲೆ ತಾವು ವಿಚಾರ ಮಾಡಿರಿ, ಇಂಥ ದುರ್ಭರ ಪ್ರಸಂಗವಿದ್ದಾಗಲೂ ಸಹ ನಾವು ನಮ್ಮ ಟಾರ್ಗೆಟ್ ಮುಟ್ಟಿದ್ದೇವೆ ಅಥವಾ ಅದನ್ನು ಮುಟ್ಟುವ ರೀತಿಯಲ್ಲಿ ಪ್ರಗತಿಯನ್ನು ಸಾಧಿಸಿದ್ದೇವೆ. ಇದು ಮಾರ್ಕೆಟ್ಟಿಗೆ ಬಂದಂಥ ವಸ್ತುಗಳ ಅಂಕಿ. ಮಾರ್ಕೆಟ್ಟಿಗೆ ಬಾರದೆ ಉಳಿದದ್ದೂ ಇರಬಹುದು.

ಶ್ರೀ ಎಚ್.ಡಿ. ದೇವೇಗೌಡ.—ಹೋದ ವರ್ಷ ಟಾರ್ಗೆಟ್ ಏನಿತ್ತು ಮತ್ತು ಪ್ರೊಡಕ್ಷನ್ ಎಷ್ಟಾಯಿತು ಎನ್ನುವ ಅಂಕಿಸಂಖ್ಯೆಗಳನ್ನು ಕೊಡುತ್ತೀರಾ ?

ಶ್ರೀ ಕೆ.ಎಚ್. ಪಾಟೀಲ್.—ಆ ಅಂಕಿಸಂಖ್ಯೆಗಳು ನನ್ನ ಹತ್ತಿರ ಇಲ್ಲ. ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಬೇಕಾದರೆ ತರಿಸಿಕೊಡುತ್ತೇನೆ.

ಸನ್‌ಫ್ಲವರ್‌ನಲ್ಲಿ 1972-73 ರಲ್ಲಿ 13 ಹೆಕ್ಟೇರ್ ಅಚೀವ್ ಮಾಡಿದ್ದೇವೆ. ಇದು ಹೊಸದಾಗಿ ಆದರೂ ಸಹ ಟಾರ್ಗೆಟ್ ಮೀರಿ ಸಾಧಿಸಿದ್ದೇವೆ. ಮುಂದಿನ ಸಲ ಹೆಚ್ಚು ಮಾಡಬೇಕೆಂಬ ಇಚ್ಛೆ ಯನ್ನು ಇಟ್ಟುಕೊಂಡಿದ್ದೇವೆ.

ಸಾಲವನ್ನು ಏನೂ ಕೊಡಲಿಲ್ಲವೆಂದು ಹೇಳಿದ್ದಾರೆ. ಸಹಕಾರ ಸಂಘಗಳ ಮುಖಾಂತರ ಕೋಟಿಗಟ್ಟಲೆ ಹಣವನ್ನು ಕೊಟ್ಟಿರುವುದು ಗೊತ್ತಿದೆ. ಸ್ಮಾಲ್ ಫಾರ್ಮರ್ಸ್ ಸಲುವಾಗಿ ಒಬ್ಬಿಬ್ಬರು ಏನೋ ಮಾತನಾಡಿದರು. ನಾನು ತಮ್ಮ ಗಮನಕ್ಕೆ ತರಬಯಸುವುದೇನೆಂದರೆ, ಹಿಂದೆ ಎಂದೂ ಇಲ್ಲದಷ್ಟು ಎಂದರೆ 6.5 ಕೋಟಿ ರೂಪಾಯಿಗಳಷ್ಟು ಹಣವನ್ನು ನಾವು ಸ್ಮಾಲ್ ಫಾರ್ಮರ್ಸ್ ಬಗ್ಗೆ ಸರ್ಕಾರದಿಂದ ಕೊಟ್ಟಿದ್ದೇವೆ. ಅದರೆ ತಾವೇ ಮಂಜೂರು ಮಾಡಿರುವ ಬಜೆಟ್ಟಿಗೆ ಒಳಪಟ್ಟು ನಾವು ಹಣವನ್ನು ಕೊಡಬೇಕಾಗುತ್ತದೆ.

ನನ್ನ ಸ್ನೇಹಿತರು ಇರಿಗೇಷನ್ ಫೆಸಿಲಿಟೀಸ್ ಬಗ್ಗೆ ಹೇಳಿದರು. ಗುಜರಾತ್, ಮಹಾರಾಷ್ಟ್ರ ರಾಜ್ಯಗಳಲ್ಲಿ ಹೆಚ್ಚಾಗಿ ತೆಗೆದುಕೊಂಡಿದ್ದಾರೆ ನಮ್ಮಲ್ಲಿ ಹೆಚ್ಚಾಗಿಲ್ಲ ಎಂದು ಹೇಳಿದರು. ಮಹಾ ರಾಷ್ಟ್ರವಾಗಲಿಲ್ಲ ಇನ್ನಿತರ ರಾಜ್ಯಗಳಾಗಲಿ, ಗುಜರಾತ್ ಆಗಲೀ ಮೈಸೂರು ರಾಜ್ಯಕ್ಕೆ ಸಂಬಂಧ

(ಶ್ರೀ ಕೆ. ಎಚ್. ಪಾಟೀಲ್)

ಪಟ್ಟಂತೆ ನೋಡಿದಾಗ ಗೊಬ್ಬರವನ್ನು ಕಡಿಮೆ ಪ್ರಮಾಣದಲ್ಲಿ ಪಡೆದಿವೆ. ನಮ್ಮ ರಾಜ್ಯಕ್ಕೆ ಸಂಬಂಧಪಟ್ಟಂತೆ ಒಂದು ಮಾತು ಹೇಳುವುದಾದರೆ, ಮಧ್ಯ ಭಾಗದಲ್ಲಿ ರಾಜ್ಯದ ಮೂರನೇ ಒಂದು ಅಂಶವನ್ನು ಕೊಟ್ಟು ಅಲ್ಲ ಉಪಯೋಗ ಮಾಡುವವರಿದ್ದೇವೆ.

3-00 P.M.

ಬೀಜವನ್ನು ಸರಿಯಾಗಿ ಕೊಡುತ್ತಿಲ್ಲ ಮತ್ತು ಯೋಗ್ಯ ರೀತಿಯಿಂದ ವಿತರಣೆಯಾಗುತ್ತಿಲ್ಲ ಮತ್ತು ಕೆಲ ಸದಸ್ಯರು ಶೇಕಡಾ ಒಂದರಷ್ಟು ಗೊಬ್ಬರ ಸರಿಯಾಗಿ ವಿತರಣೆಯಾಗಲಿಲ್ಲ, ಮತ್ತು ನಮ್ಮಲ್ಲಿ ನೀರಾವರಿ ಯೋಜನೆಗಳನ್ನು ಈಗ ಮಾಡುತ್ತಿರುವುದರಿಂದ ಇನ್ನು ನಮ್ಮಲ್ಲಿ ನೀರಾವರಿ ಹೆಚ್ಚಾಗಿಲ್ಲ. ಮೈಸೂರಿನಲ್ಲಿ ಶೇಕಡಾ 10.3ರಷ್ಟು ಇದೆ. ಆಂಧ್ರದಲ್ಲಿ ಶೇಕಡಾ 27.2ರಷ್ಟು ನೀರಾವರಿ ಪ್ರದೇಶ ಇದೆ. ಮಹಾರಾಷ್ಟ್ರದಲ್ಲಿ 8.1ರಷ್ಟು ಇದೆ, ಕೇರಳದಲ್ಲಿ 19.3ರಷ್ಟು ಇದೆ. ತಮಿಳುನಾಡಿನಲ್ಲಿ ಶೇಕಡಾ 43.2ರಷ್ಟು ನೀರಾವರಿಯನ್ನು ಹೊಂದಿದೆ, ಇದಕ್ಕಾಗಿ ನಾವು ಹೆಚ್ಚು ಹೆಚ್ಚಾಗಿ ನೀರಾವರಿ ಯೋಜನೆಗಳನ್ನು ಹಾಕಿಕೊಳ್ಳಲಾಗಿದೆ, ಮತ್ತು ಈ ಯೋಜನೆಗಳೆಲ್ಲಾ ಮುಗಿದರೆ ಆಗ ಸುಮಾರು ಶೇಕಡಾ 1 ರಷ್ಟು ಬರಬಹುದು, ನಮಗೆ ಇರುವ ನೀರಾವರಿ ಯೋಜನೆಗಳಿಗೆಲ್ಲಾ ಕೇಂದ್ರದ ಮಂಜೂರಾತಿ ಪೂರ್ತಿಯಾಗಿ ದೊರಕಿದರೆ ಮಾನ್ಯ ಶ್ರೀ ದೇವೇಗೌಡರು ಹೇಳಿದ ಹಾಗೆ ನಮ್ಮ ರಾಜ್ಯದಲ್ಲಿ ನೀರಾವರಿಯಲ್ಲಿ 27 ಪರ್ಸೆಂಟಿನಷ್ಟು ಪ್ರಗತಿ ಸಾಧನೆ ಮಾಡಬಹುದು, ಕೇಂದ್ರ ಸರಕಾರದವರು ನಮ್ಮ ಬೇಡಿಕೆಗಳನ್ನೂ ಪೂರ್ತಿಯಾಗಿ ಒಪ್ಪುತ್ತಾರೆಂಬ ಆಸೆಯೂ ಇದೆ. ಮತ್ತು ಶೇಕಡಾ 27ರಷ್ಟು ನೀರಾವರಿ ಪ್ರದೇಶವನ್ನು ಹೆಚ್ಚು ಮಾಡಲೂ ಅವಕಾಶವಾಗುತ್ತದೆ, ಮತ್ತು ಇದಕ್ಕೆ ಪ್ಲಾನಿಂಗು ಕಮಿಷನ್‌ನವರ ಒಪ್ಪಿಗೆಯೂ ಬರುವುದರಲ್ಲಿದೆ. ಮಾನ್ಯ ಶ್ರೀ ದೇವೇಗೌಡರವರು ಹೇಳಿದಂತೆ ಒಕ್ಕಲುತನ ನಮ್ಮ ದೇಶದಲ್ಲಿ ಯಶಸ್ವಿಯಾಗಬೇಕಾದರೆ ನಮಗೆ ಗೊಬ್ಬರದ ಪೂರೈಕೆ ಹೆಚ್ಚಾಗಿ ಸಿಗಬೇಕು. ನಮ್ಮ ಇಲಾಖೆಯಲ್ಲಿರುವ ಅಧಿಕಾರಿಗಳೊಡನೆ ಇತರ ಇಲಾಖೆಯ ಅಧಿಕಾರಿಗಳೂ ಸರಿಯಾಗಿ ಸಹಕಾರ ಸಿಗುತ್ತಿಲ್ಲ ಎಂದರು. ಇದಕ್ಕಾಗಿ ನಾನು ಹಾಗೂ ಸಮಾಜ ಕಲ್ಯಾಣ ಇಲಾಖೆಯ ಮಂತ್ರಿಗಳೂ ಕೂಡಿ ಇದರ ಬಗ್ಗೆ ವಿಚಾರ ವಿನಿಮಯ ಮಾಡಿದ್ದೇವೆ ಮತ್ತು ಒಕ್ಕಲುತನ ಮಾಡುವವರಿಗೆ ಯಾವ ರೀತಿಯಾದ ಸಹಾಯ ಸೌಕರ್ಯಗಳನ್ನು ಮಾಡಬೇಕೆಂದು ಯೋಚನೆ ಮಾಡುತ್ತಿದ್ದೇವೆ ಮತ್ತು ಆದಷ್ಟು ರೈತರಿಗೆ ಹೆಚ್ಚು ಉಪಯೋಗವಾಗುವಂತೆ ಕೆಲಸ ಮಾಡಲು ಪ್ರಯತ್ನ ಮಾಡುತ್ತಿದ್ದೇವೆ. ನಮಗೆ ಗೊಬ್ಬರದ ಕಾರ್ಖಾನೆ ಹೆಚ್ಚು ಸ್ಥಾಪನೆ ಮಾಡಬೇಕಾಗಿದೆ. ಮಂಗಳೂರಿನಲ್ಲಿ ಏನೋ ಒಂದು ಕಾರ್ಖಾನೆ ಇದೆ. ಇನ್ನೂ ಒಂದೆರಡು ಗೊಬ್ಬರ ಕಾರ್ಖಾನೆಗಳನ್ನು ನಮ್ಮ ರಾಜ್ಯದಲ್ಲಿ ಮಾಡಲು ಅವಕಾಶವಿದೆ, ಇದರ ಬಗ್ಗೆ ಕೇಂದ್ರಕ್ಕೂ ಒತ್ತಾಯ ಮಾಡುತ್ತಿದ್ದೇವೆ. ಪ್ಲಾನಿಂಗ್ ಕಮಿಷನ್‌ನವರೂ ಕೂಡ ಒಪ್ಪಬಹುದು ಎಂದು ಆಶಾ ಮಾಡುತ್ತಿದ್ದೇವೆ.

ಇನ್ನು ಬೀಜಗಳ ವಿತರಣೆ ಬಗ್ಗೆ ಬಹಳ ಕಟುವಾಗಿ ಹೇಳಿದರು. ಮಾನ್ಯ ಸದಸ್ಯರಾದ ಶ್ರೀ ಬಾಪೂಗೌಡರವರು ಇದರ ಬಗ್ಗೆ ಬಹಳವಾಗಿ ಹೇಳಿದರು. ಈಗ ಅವರು ಇಲ್ಲಿಲ್ಲ. ಅವರು ಗುಲ್ಬರ್ಗಾದ ಬಗ್ಗೆ ಬಹಳ ಆಸ್ಥೆವಹಿಸಿ ಹೇಳಿದ್ದಾರೆ. ಇದರ ಬಗ್ಗೆ ನಾನು ಕೂಡ ಅವರ ಊರಿಗೆ ಹೋಗಿ ಅಲ್ಲ ಬೀಜ ಕೊಡುವಾಗ ಸರಿಯಾಗಿ ವಿತರಣೆ ಮಾಡಬೇಕೆಂದು ಸೂಚನೆ ಕೊಟ್ಟಿದ್ದೇನೆ ಮತ್ತು ಪೂರ್ತಿಯಾಗಿ ವಿತರಣೆಮಾಡಲು ಇಲ್ಲಿನ ಅಧಿಕಾರಿಗಳು ತಯಾರಾಗಿದ್ದಾರೆ. ಇದೂ ಅಲ್ಲದೆ ಇಲ್ಲಿ ಎತ್ತುಗಳನ್ನು ಕಳೆದುಕೊಂಡವರಿಗೆ ಅನುಕೂಲವಾಗಲಿ ಎಂದು ಇಲ್ಲಿಗೆ ಒಂದೊಂದು ಟ್ರಾಕ್ಟರನ್ನು ಕೊಟ್ಟು ರೈತರಿಗೆ ಸಾಧ್ಯವಾದಷ್ಟು ಸಹಾಯ ಮಾಡಬೇಕೆಂದು ಪ್ರಯತ್ನ ಮಾಡುತ್ತಿದ್ದೇವೆ. ಈಗಾಗಲೇ ಕೆಲವು ಟ್ರಾಕ್ಟರುಗಳು ಇಲ್ಲಿಗೆ ಹೋಗಿವೆ ಎಂದೂ ಕೇಳುತ್ತೇನೆ. ಅವರವರ ಜಿಲ್ಲೆಗಳಿಗೆ ಟ್ರಾಕ್ಟರುಗಳನ್ನು ಕಳುಹಿಸಬೇಕೆಂದೂ ಸೂಚನ ಕೊಡಲಾಗಿದೆ. ನಮ್ಮ ರಾಜ್ಯಕ್ಕೆ ಒಟ್ಟು ಸುಮಾರು 27 ಕೋಟಿ ರೂಪಾಯಿಗಳಷ್ಟು ಬೀಜ ಬೇಕಾಗುತ್ತದೆ. ಇದಕ್ಕಾಗಿ ಒಂದು ಯೋಜನೆ ಮಾಡಿ ಇದರ ಮೂಲಕ ಎಲ್ಲ ರೈತರಿಗೂ ಬೀಜವನು ಒದಗಿಸುವ ವ್ಯವಸ್ಥೆಮಾಡಬೇಕೆಂದಿದ್ದೇವೆ. ಬೀಜಗಳನ್ನು ಕೊಂಡುಕೊಳ್ಳಲು ಸರ್ಕಾರದಲ್ಲಿ ಹಣ ಕಡಿಮೆ ಇರಬಹುದು, ನಮ್ಮಲ್ಲಿ ಎಷ್ಟು ಸಾಧ್ಯವೋ ಅಷ್ಟು ಹಣವನ್ನುಪಯೋಗಿಕೊಂಡು ಉಳಿಕೆ ಬೀಳುವ ಹಣವನ್ನು ಬ್ಯಾಂಕುಗಳಿಂದ ಹಾಗೂ ಆಗ್ರೋ ಇಂಡಸ್ಟ್ರೀಸ್ ಮೂಲಕ ಪಡೆದುಕೊಂಡು ಆದಷ್ಟು ಒಳ್ಳೆಯ ಬೀಜಗಳನ್ನು ಖರೀದಿ ಮಾಡಿಕೊಳ್ಳಬೇಕೆಂದು ಇದ್ದೇವೆ ಮತ್ತು ಇಂತಹ ಬೀಜಗಳನ್ನು ಕೊಂಡು ಕೊಳ್ಳಲು ಸ್ಟೇಟ್ ಮಾರ್ಕೆಟಿಂಗು ಕೋಅಪರೇಟೀವ್ ಸೊಸೈಟಿಯವರು ಪ್ರಯತ್ನಮಾಡಿ ಖರೀದಿ ಮಾಡಿದ್ದಾರೆ ಎಂದು ಗೊತ್ತಾಗಿದೆ. ಇದರ

ಬಗ್ಗೆ ಎಷ್ಟೇ ಕಡಿಮೆ ದುಡ್ಡು ಬಂದರೂ ಅದನ್ನು ಗಮನಕ್ಕೆ ತೆಗೆದುಕೊಳ್ಳದೆ ಆದಷ್ಟು ಒಳ್ಳೆಯ ಬೀಜ ಪಡೆಯಬೇಕೆಂದೂ ಪ್ರಯತ್ನ ಮಾಡುತ್ತಿದ್ದೇವೆ.

ಇನ್ನು ನಮ್ಮ ಡಿಪಾರ್ಟುಮೆಂಟಿನ ಅಧಿಕಾರಿಗಳ ಬಗ್ಗೆ ಅನೇಕ ಸದಸ್ಯರು ಮಾತನಾಡಿದ್ದಾರೆ. ಕೆಲವು ಕಡೆಗಳಲ್ಲಿ ಡೆಪ್ಯುಟಿ ಡೈರೆಕ್ಟರು ಎಂದು, ಸೀಡುಪ್ಲಾಂಟೇಷನ್ ಆಫೀಸರು ಎಂದು ಹೀಗೆ ಹೆಚ್ಚು ಹೆಚ್ಚು ಅಧಿಕಾರಿಗಳನ್ನು ಏಕೆ ಮಾಡುತ್ತಾರೆ ಎನ್ನುವುದು ಗೊತ್ತಾಗುವುದಿಲ್ಲ ಎಂದು ಹೇಳಿದರು, ನನಗನಿಸುವುದು ಇದು ಈಗಿರತಕ್ಕ ಸೆಟ್ ಆಪ್‌ನಲ್ಲಿ ಸರಿಯಾಗುವುದಿಲ್ಲ. ಇದನ್ನು ಬದಲಾವಣೆ ಮಾಡಬೇಕೆಂದು ಇದ್ದೇವೆ. ಇಲ್ಲಿಯವರೆಗೆ ಗ್ರಾಮ ಸೇವಕರು ಎಂದು ಇದ್ದರು, ಇವರ ಮೇಲೆ ಇನ್ನೊಬ್ಬ ಅಧಿಕಾರಿಗಳಿದ್ದರು, ಹೀಗೆ ಇದರಲ್ಲಿ ಡ್ಯುಯಲ್ ಅಡ್ಮಿನಿಸ್ಟ್ರೇಷನ್ ಇತ್ತು ಎಂದು ಇಲ್ಲಿ ಟೀಕೆ ಮಾಡಿದ್ದಾರೆ. ಇದರ ಬಗ್ಗೆ ಒಂದು ವಿಚಾರ ಇಲ್ಲಿ ಹೇಳಲು ಸಂತೋಷವಾಗುತ್ತದೆ, ಇದರ ಬಗ್ಗೆ ನಾನು ಹಾಗೂ ಸೋಷಿಯಲ್ ವೆಲ್‌ಫೇರು ಮಿನಿಸ್ಟರು ಇಬ್ಬರೂ ಕುಳಿತುಕೊಂಡು ವಿಚಾರಮಾಡಿ ಒಂದು ನಿರ್ಣಯ ತೆಗೆದುಕೊಂಡಿದ್ದೇವೆ, ಇದರಂತೆ ಇನ್ನು ಮುಂದೆ ರಾಜ್ಯದ ಎಲ್ಲ ಗ್ರಾಮ ಸೇವಕರೂ ಇನ್ನು ಮುಂದೆ ವ್ಯವಸಾಯ ಇಲಾಖೆಯ ಕಕ್ಷೆಯಲ್ಲಿ ಬರುತ್ತಾರೆ, ಇನ್ನು ಮುಂದೆ ಗ್ರಾಮ ಸೇವಕರು ಬೇರೆ ಯಾವ ಇಲಾಖೆಗೂ ಸೇರಿದಂತೆ ರಾಜಕಾರಣ ಮಾಡಲು ಆಗುವುದಿಲ್ಲ, ಇನ್ನು ನಿಜವಾಗಿಯೂ ಒಕ್ಕಲುತನ ಮಾಡುವ ರೈತರೊಂದಿಗೆ ಇವರ ಸಂಪರ್ಕ ಹೆಚ್ಚಾಗಿರಲಿ ಎಂದು ಹೀಗೆ ಮಾಡಲಾಗಿದೆ. ಹೀಗೆ ಗ್ರಾಮ ಸೇವಕರು ರೈತರ ಹಿತಾಸಕ್ತಿಗಳನ್ನು ಇನ್ನೂ ಚೆನ್ನಾಗಿ ಮಾಡಲು ಇದರಲ್ಲಿ ಅವಕಾಶವಾಗಲಿ ಎಂದು ಮಾಡಿದ್ದೇವೆ. ಆದರೆ ಇನ್ನು ಮುಂದೆ ಯಾರಾದರೂ ಗ್ರಾಮಸೇವಕರು ರೈತರಿಗೆ ವಿರೋಧವಾಗಿ ಕೆಲಸಮಾಡುವುದು ನಮ್ಮ ಗಮನಕ್ಕೆ ಬಂದರೆ ಅವರಮೇಲೆ ಉಗ್ರವಾದ ಕ್ರಮ ತೆಗೆದುಕೊಳ್ಳಲು ಪ್ರಯತ್ನ ಮಾಡುತ್ತೇನೆ. ಅದರೂ ನಾನ ಕೂಡ ಈ ಡಿಪಾರ್ಟುಮೆಂಟನ್ನು ರೀ ಆರ್ಗನೈಜ ಮಾಡಬೇಕೆಂದಿದ್ದೇನೆ, ಹಾಗೆ ಮಾಡುವಾಗ ಹಿಂದೆ ಇದ್ದ ಎಲ್ಲ ಅಧಿಕಾರಿಗಳನ್ನೂ ಮನೆಗೆ ಕಳುಹಿಸಲು ಸಾಧ್ಯವಿಲ್ಲ. ನಮ್ಮ ರಾಜ್ಯದಲ್ಲಿ ವ್ಯವಸಾಯದ ಬೆಳವಣಿಗೆಗಾಗಿ ಹೆಚ್ಚು ಹೆಚ್ಚು ಸ್ಕೀಂಗಳನ್ನು ಹೊಸದಾಗಿ ಮಾಡಬೇಕಾಗಿ ಬರುತ್ತದೆ. ಇದಕ್ಕಾಗಿ ಹೊಸ ಅಧಿಕಾರಿಗಳೂ ಬರಬೇಕಾಗುತ್ತದೆ. ಇದಕ್ಕಾಗಿ ನಾನು ತಜ್ಞರಾದವರ ಹಾಗೂ ಮಾನ್ಯ ಸದಸ್ಯರೆಲ್ಲರ ಸಹಕಾರವನ್ನು ಕೇಳುತ್ತೇನೆ. ತಾವು ತೀವ್ರವಾಗಿ ನಮ್ಮ ವ್ಯವಸಾಯ ಖಾತೆ ಯಾವ ರೀತಿ ಇರಬೇಕೆಂದು ಸೂಚನೆಗಳನ್ನು ಕೊಟ್ಟರೆ ನನಗೆ ಬಹಳ ಸಂತೋಷವಾಗುತ್ತದೆ, ಒಕ್ಕಲುತನದ ಖಾತೆಯ ಮಂತ್ರಿಗಳು ನಿಜವಾಗಿಯೂ ಒಕ್ಕಲು ಮಾಡುವವರನ್ನು ಮುಂದಕ್ಕೆ ತರಲು ಏನೇನು ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕೋ ಅವನ್ನು ಮಾಡಲು ಸಹಾಯ ವಾಗುತ್ತದೆ ಮತ್ತು ಜನರಿಗೆ ಉಪಯುಕ್ತವಾದ ಖಾತೆ ಎಂದರೆ ವ್ಯವಸಾಯ ಖಾತೆ, ಇದನ್ನು ಯಾವ ರೀತಿ ಹೊಂದಾಣಿಕೆ ಮಾಡಬೇಕೆನ್ನುವುದರಲ್ಲಿ ನಾನು ಎಲ್ಲ ಮಾನ್ಯ ಸದಸ್ಯರ ಸಹಕಾರವನ್ನೂ ಕೇಳುತ್ತೇನೆ,

ಇನ್ನು ಹತ್ತಿ ಬೀಜದ ವಿಷಯವಾಗಿ ಸರಕಾರದ ಧೋರಣೆ ಏನು ಎಂದು ಹಲವಾರು ಸದಸ್ಯರು ಕೇಳಿದರು. ಕೇಂದ್ರ ಸರಕಾರದವರು ನಮಗೆ ಕೆಲವಾರು ನಿಯಮಗಳನ್ನು ಹಾಕಿಕೊಟ್ಟಿದ್ದಾರೆ, ಅದರಂತೆ ಈಗ 60 ರೂಪಾಯಿಗಳಂತೆ ಮಾರಾಟ ಮಾಡಬೇಕೆಂದು ಹೇಳಿದ್ದಾರೆ. ಅದರಂತೆ ರೈತರಿಗಾಗಿ ಮಾರುತ್ತಿದ್ದೇವೆ. ಇನ್ನು ವ್ಯವಸಾಯ ಖಾತೆಯಲ್ಲಿರತಕ್ಕ ಫಾರಂಗಳ ವಿಷಯದಲ್ಲಿ ಹೇಳುತ್ತಾ ಈ ಫಾರಂಗಳೆಲ್ಲಾ ನಿಷ್ಪ್ರಯೋಜಕವಾದವು ಎಂದು ಹೇಳಿದರು. ಇದನ್ನು ಕೇಳಿದ ಮೇಲೆ ನಮ್ಮಲ್ಲಿ ಇರುವ ಫಾರಂಗಳು ಇರಬೇಕೋ ಬೇಡವೋ ಎನ್ನುವ ಮಟ್ಟಿಗೆ ಕೆಲವರು ಹೇಳಿದರು. ನಮ್ಮಲ್ಲಿ ಇರುವ ಒಟ್ಟು ಫಾರಂಗಳು 63. ಇದರಲ್ಲಿ—

Number of elf-supporting Farms : 14

Number of profit earning farms : 36

Number of Farms which are running at a loss : 13

Total loss incurred 1.56 lakhs.

ಇದರ ಪೂರ್ತಿ ವಿವರಣೆಯನ್ನು ಮಾನ್ಯ ಸದಸ್ಯರಿಗೆ ಒದಗಿಸಿದ್ದೇನೆ. ನಾವು ಹೆಚ್ಚು ಹೆಚ್ಚು ಫಾರಂಗಳನ್ನು ಮಾಡಿ ಅದರ ಮೂಲಕ ಹೆಚ್ಚು ಉತ್ಪತ್ತಿಮಾಡುವ ರೈತರಿಗೆ ಸಹಾಯ ಮಾಡಬೇಕೆಂದು ಇಂತಹ ಫಾರಂಗಳನ್ನು ಮಾಡುತ್ತಿದ್ದೇವೆ. ಇದರಿಂದ ಸಮಸ್ತವಾದ ರೈತರಿಗೆ ನಮ್ಮ ರಾಜ್ಯದಲ್ಲಿ ಸಹಾಯವಾಗಬೇಕೆಂದು ಈ ಉದ್ದೇಶದಿಂದ ಫಾರಂಗಳು ಕೆಲಸ ಮಾಡುತಿವೆ. ಇದನ್ನು ಈಗಲಾದರೂ ನಮ್ಮ ಮಾನ್ಯ ಸದಸ್ಯರು ಒಪ್ಪುವರೆಂದು ನನ್ನ ಭಾವನೆ.

(ಶ್ರೀ ಕೆ. ಎಚ್. ಪಾಟೀಲ್)

ಇನ್ನು ನಮ್ಮ ರಾಜ್ಯಕ್ಕೆ ರೈತರಿಗೆ ಬೇಕಾಗಿರುವ 47,385 ಟನ್ನುಗಳಷ್ಟು ಸೀಡ್ಸನ್ನು ಖರೀದಿ ಮಾಡಿ ಇದನ್ನು ಬೇರೆ ಬೇರೆ ಹಂತದಲ್ಲಿ ಹಂಚಬೇಕೆಂದು ವ್ಯವಸ್ಥೆ ಮಾಡಿದ್ದೇವೆ ಮತ್ತು ಈಗಾಗಲೇ 343.6 ಟನ್ಸ್‌ಗಳಷ್ಟು ಸೀಡುಗಳನ್ನು ಕೂಡ ಖರೀದಿಮಾಡಲಾಗಿದೆ. ನ್ಯಾಷನಲ್ ಸೀಡು ಕಾರ್ಪೊರೇಷನ್ ವಿಷಯವಾಗಿ ಮಾನ್ಯ ಶ್ರೀ ದೇವೇಗೌಡರು ಇಲ್ಲಿ ಹೇಳಿದರು. ಇದನ್ನು ಅವರು ಪಾರ್ಲಿಮೆಂಟ್ ಸದಸ್ಯರ ಮುಖೇನ ವಿಚಾರಗಳನ್ನು ತಿಳಿಯಬೇಕು. ನಾನು ಇದರ ಬಗ್ಗೆ ಉತ್ತರ ಕೊಡುವುದಕ್ಕೆ ಇಷ್ಟಪಡುವುದಿಲ್ಲ.

ಇನ್ನು ಜಿಲ್ಲಾ ಕಮಿಟಿ ಮಾಡುವ ವಿಷಯದಲ್ಲಿ ನಾನು ಆಯಾ ತಾಲ್ಲೂಕುಗಳಲ್ಲಿರುವ ನಮ್ಮ ಪಕ್ಷದ ಹಾಗೂ ಇತರ ಪಕ್ಷದವರನ್ನು ಸೇರಿಸಿ ನಮ್ಮ ಅಧಿಕಾರಿಗಳನ್ನೂ ಸೇರಿಸಿ ಇದರಲ್ಲಿ ಕೆಲಸ ಮಾಡಬೇಕೆಂದು ಮಾಡಿದ್ದೇವೆ. ಒಂದು ಜಿಲ್ಲೆಗೆ ಆಯಾ ಡೆಪ್ಯೂಟೀ ಕಮಿಷನರ್‌ರವರೇ ಚೇರ್‌ಮನ್ನರಾಗಿರಬೇಕೆಂದು ಮಾಡಲಾಗಿದೆ, ಇವರುಗಳು ಸರಿಯಾಗಿ ನೋಡಿ ಅಲಾಟುಮೆಂಟುಗಳನ್ನ ಮಾಡುತ್ತಾರೆ. ಯಾವುದಾದರೂ ತಾಲ್ಲೂಕುಗಳಲ್ಲಿ ಕೊಟ್ಟಿರುವ ಕೋಟಾಗಳು ಸರಿಯಾಗಿ ವಿತರಣೆಯಾಗಲಿಲ್ಲ ಎನ್ನುವುದನ್ನು ನನ್ನ ಗಮನಕ್ಕೆ ತಂದರೆ ಹಾಗೂ ಅನ್ಯಾಯವಾಗಿದೆ ಎಂದು ಸರಕಾರಕ್ಕೆ ತಿಳಿಸಿದರೆ ಅದರ ಬಗ್ಗೆ ಸೂಕ್ತ ಕ್ರಮ ತೆಗೆದು ಕೊಳ್ಳುತ್ತೇನೆ ಮತ್ತು ಇದಕ್ಕಾಗಿ ಸದಸ್ಯರನ್ನು ಶ್ಲಾಘಿಸುತ್ತೇನೆ. ಆದರೆ ದುರ್ದೈವದಿಂದ ಟೀಕೆಗಳು ಬಂದವೇ ಹೊರತು ಒಬ್ಬಿಬ್ಬರನ್ನು ಬಿಟ್ಟರೆ ಬೇರೆಯವರಿಂದ ಸಲಹೆಗಳು ಬರಲಿಲ್ಲ. ಕೆಲವರು ಸಲಹೆಗಳನ್ನು ಕೊಟ್ಟಿರಬಹುದು, ಕೆಲವರು ಟೀಕೆಗಳನ್ನು ಮಾಡಿರಬಹುದು; ಆದರೆ ನನಗೆ ರಚನಾತ್ಮಕವಾದ ಸಲಹೆಗಳು ಬೇಕಾಗಿತ್ತು. ವ್ಯವಸಾಯ ಇಲಾಖೆಯನ್ನು ಹೆಚ್ಚು ಪರಿಪೂರ್ಣವಾಗಿ ಮಾಡಲು ಮತ್ತು ಜನತೆಗೆ ಉಪಯುಕ್ತವಾದ ರೀತಿಯಲ್ಲಿ ಮಾಡಲು ಮಾನ್ಯ ಸದಸ್ಯರಿಂದ ನಾನು ರಚನಾತ್ಮಕವಾದ ಸಲಹೆಗಳನ್ನು ಅಪೇಕ್ಷೆ ಮಾಡಿದ್ದೆ. ಆದರೆ ಮಾನ್ಯ ಸದಸ್ಯರಿಗೆ ಸಮಯ ಸಾಕಷ್ಟು ಇಲ್ಲದಿದ್ದುದರಿಂದಲೋ ಏನೋ ಅಥವಾ ತಮಗೆ ಬೇಡವಾಗಿಯೋ ಏನೋ, ರಚನಾತ್ಮಕವಾದ ಸಲಹೆಗಳನ್ನು ಕೊಡಲಿಲ್ಲ. ಇನ್ನು ಮುಂದೆಯಾದರೂ ಸಹ ಮಾನ್ಯ ಸದಸ್ಯರು ಯೋಗ್ಯವಾದಂಥ ಸಲಹೆಗಳನ್ನು ಕೊಟ್ಟು ಈ ಇಲಾಖೆಯಲ್ಲಿ ಯೋಗ್ಯವಾದಂಥ ತಿದ್ದುಪಡಿಗಳನ್ನು ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಹಂಜಿ ಶಿವಣ್ಣ.—ಟೀಕೆಗಳನ್ನೇ ಸಲಹೆಗಳನ್ನಾಗಿ ತೆಗೆದುಕೊಳ್ಳುವುದಕ್ಕಾಗುವುದಿಲ್ಲವೇ?

ಶ್ರೀ ಕೆ. ಎಚ್. ಪಾಟೀಲ್.—ಆದರೆ ಟೀಕೆಗಳು ನೆಗೆಟೀವ್ ಆಸ್ಪೆಕ್ಟ್ಸ್ ಆಗುತ್ತವೆ ಪಾಸಿಟೀವ್ ಆಸ್ಪೆಕ್ಟ್ಸ್ ಆಗುವುದಿಲ್ಲ. ಈ ಕಾರಣದಿಂದ ಯಾವ ರೀತಿಯಿಂದ ಸುಧಾರಿಸಬಹುದಾಗಿತ್ತು ಎಂಬ ಬಗ್ಗೆ ಹೇಳಿದ್ದರೆ ಹೆಚ್ಚು ಒಳ್ಳೆಯದಾಗುತ್ತಿತ್ತು. ಮಾನ್ಯ ಎಸ್. ವೈ. ಪಾಟೀಲರು ಉತ್ಸುಕತೆಯಿಂದ ಮಾಡಿದ ಭಾಷಣವನ್ನು ನಾನು ಕೇಳಿದೆ ಅವರ ಕ್ಷೇತ್ರದ ಬಗ್ಗೆ, ಅವರ ಜಿಲ್ಲೆಯ ಬಗ್ಗೆ ಮತ್ತು ರೈತಾಪಿ ಜನರ ಬಗ್ಗೆ ಅವರು ಬಹಳ ವ್ಯಾಕುಲತೆಯಿಂದ ಮಾಡಿದ ಭಾಷಣವನ್ನು ನಾನು ಕೇಳಿದ್ದೇನೆ. ಅವರು ಮಾತನಾಡುವ ಸ್ಪಿರೀಟ್‌ನಲ್ಲಿ ಏನೇನು ಸಲಹೆಗಳನ್ನು ಮಾಡಿದ್ದಾರೆ, ಅದರಲ್ಲಿ ಯೋಗ್ಯವಾದವುಗಳನ್ನು ತೆಗೆದುಕೊಳ್ಳುತ್ತೇನೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಕಕ್ಕಿಲ್ಲಾಯ ಅವರು ಮತ್ತು ಮಾನ್ಯ ಕಬಾಡಿ ಅವರು ಕಟ್ ಮೋಷನ್‌ಗಳನ್ನು ಕಳುಹಿಸಿಕೊಟ್ಟಿದ್ದಾರೆ. ನಾನು ಈಗ ಕೊಡುವ ಉತ್ತರವೇ ಅವರ ಕಟ್ ಮೋಷನ್‌ಗಳಿಗೆ ಉತ್ತರ ಎಂದು ನಾನು ಭಾವಿಸುತ್ತೇನೆ.

ಶ್ರೀ ಬಿ. ವಿ. ಕಕ್ಕಿಲ್ಲಾಯ.—ಹೋದ ವರ್ಷದ ಮೊದಲನೆ ಬೆಳೆಗೆ ತಡವಾಗಿ ಔಷಧಗಳು ಬಂದಿದ್ದರಿಂದ ಬೆಳೆ ಕೆಟ್ಟುಹೋಯಿತು. ಈ ವರ್ಷವಾದರೂ ಜಾಗ್ರತೆ ಕಳುಹಿಸಿಕೊಡುವ ಬಗ್ಗೆ ಏನು ವ್ಯವಸ್ಥೆ ಮಾಡಿದ್ದೀರಾ?

ಶ್ರೀ ಕೆ. ಎಚ್. ಪಾಟೀಲ್.—ಮಾನ್ಯ ಸದಸ್ಯರು ಹೋದ ಸಲ ಇದನ್ನು ನನ್ನ ಗಮನಕ್ಕೆ ತಂದ ಕೂಡಲೇ ನಾನು ಕಾರ್ಯಕ್ರಮಗಳನ್ನು ತೆಗೆದುಕೊಂಡೆ. ಆದರೆ ತಜ್ಞರಲ್ಲಿ ಯಾವ ಔಷಧಗಳನ್ನು ಸಿಂಪಡಿಸಬೇಕೆಂಬ ಬಗ್ಗೆ ವಾದ ವಿವಾದ ಕಂಡುಬಂದಿದ್ದರಿಂದ ಸ್ವಲ್ಪ ತಡವಾಯಿತು ಇದು ಮಾನ್ಯ ಸದಸ್ಯರಿಗೂ ಗೊತ್ತು. ಈ ಸಲ ಆ ರೀತಿಯಾಗದಂತೆ ಅವಶ್ಯವಿರುವ ಔಷಧಗಳನ್ನು ತ್ವರಿತಗತಿಯಲ್ಲಿ ಕಳುಹಿಸಿಕೊಟ್ಟು ಆ ಹುಳಬಾಧೆಯನ್ನು ತಪ್ಪಿಸುವುದಕ್ಕೆ ವ್ಯವಸ್ಥೆ

ಮಾಡಲಾಗುತ್ತದೆಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಹೋದ ಸಲ ನಮಗೆ ಆದ ಅನುಭವವನ್ನು ಅನುಸರಿಸಿ ಮಿಲಿಬಗ್ ರೋಗವನ್ನು ತಡೆಗಟ್ಟಲು ಒಂದು ಸ್ಕೀಮನ್ನು ತಯಾರು ಮಾಡಿದ್ದೇವೆ. ಇದಕ್ಕಾಗಿ 11 ಲಕ್ಷ ರೂಪಾಯಿಗಳನ್ನು ಮಂಜೂರು ಮಾಡಿದ್ದೇವೆ. ಈ ವಿಚಾರದಲ್ಲಿ ತೀವ್ರಗತಿಯಿಂದ ಕ್ರಮ ಕೈಕೊಳ್ಳಬೇಕೆಂದು ಡೈರೆಕ್ಟರ್ ಅವರಿಗೆ ತಿಳಿಸುತ್ತಿದ್ದೇನೆ.

ಇನ್ನು ವನವಿಭಾಗದ ಬಗ್ಗೆ ಅಂದರೆ ತೋಟಗಾರಿಕೆ ಇಲಾಖೆಯ ಬಗ್ಗೆ ಟೀಕೆ ಇರಲಿಲ್ಲ ಎಂದು ಹೇಳಿದರೆ ತಪ್ಪಾಗಲಾರದು. ಇದರ ಬಗ್ಗೆ ಕೆಲವು ಸಲಹೆಗಳನ್ನು ಮಾಡಿದ್ದಾರೆ ಇದು ಇನ್ನೂ ಬೆಳೆಯಬೇಕು, ಈಗ ಬೆಳೆದಿರುವುದು ಸಾಲದು ಎಂದು ಕೆಲವರು ಹೇಳಿದ್ದಾರೆ. ಇಂದು ಪ್ರತಿ ತಾಲ್ಲೂಕಿನಲ್ಲಿಯೂ ಇದು ಬೆಳೆಯುತ್ತಿದೆ. ಮತ್ತು ಅಭಿವೃದ್ಧಿ ಕಾರ್ಯಗಳು ನಡೆಯುತ್ತಿವೆ.

ಇನ್ನು ವ್ಯವಸಾಯ ವಿಶ್ವವಿದ್ಯಾನಿಲಯದ ಬಗ್ಗೆ ಕೆಲವರು ಸಲಹೆ ಮಾಡಿದ್ದಾರೆ. ಮತ್ತೊಂದು ವಿಶ್ವವಿದ್ಯಾನಿಲಯ ಅನಾವಶ್ಯಕವಿತ್ತು ಎಂದು ಕೆಲವರು ಹೇಳಿದ್ದಾರೆ. ಕೆಲವರು ಅವಶ್ಯ ಇದೆ ಎಂದು ಹೇಳಿದ್ದಾರೆ. ಮತ್ತೆ ಕೆಲವರು ಇದು ಧಾರವಾಡದಲ್ಲಿ ಆಗಬಾರದು, ಬೇರೆ ಭಾಗಗಳಲ್ಲಿ ಆಗಬೇಕು ಎಂದು ಹೇಳಿದ್ದಾರೆ. ಈ ಅಂಶಗಳೆಲ್ಲವನ್ನೂ ಆ ಕಡೆಯ ಮತ್ತು ಈ ಕಡೆಯ ಸದಸ್ಯರುಗಳು ಹೇಳಿದ್ದಾರೆ. ನನ್ನ ಬಗ್ಗೆ ತಕರಾರು ಮಾಡುವ ಮನೋವೃತ್ತಿ ಯಾರಾದರೂ ಸದಸ್ಯರದ್ದು ಇದ್ದರೆ ನನಗೆ ಪರವಾಗಿಲ್ಲ. ಆದರೆ ನಾನು ಧಾರವಾಡದಿಂದ ಬಂದಿರುವವನು ಎಂಬ ಕಾರಣದಿಂದ ಈ ಬಗ್ಗೆ ತಕರಾರು ಬಂದಿದೆ. ಆದಕ್ಕೆ ಅಂಜಿಕೊಂಡು ಧಾರವಾಡದ ಜನರಿಗೆ ನ್ಯಾಯವಾಗಿ ದೊರಕಬೇಕಾದ ಸೌಲಭ್ಯವನ್ನು ಬಿಟ್ಟು ಕೊಡಲಾರದ ಹೇಡಿ ನಾನಲ್ಲ. ಹೆಬ್ಬಾಳ್ ಯೂನಿವರ್ಸಿಟಿ ಆರಂಭವಾಗುವುದಕ್ಕೆ ಮೊದಲು ರಾಜ್ಯದ ಎಲ್ಲಿ ಯೂನಿವರ್ಸಿಟಿ ಆರಂಭವಾಗಬೇಕೆಂದು ರಚಿಸಿದ್ದ ಕಮಿಟಿಯಲ್ಲಿ ಈ ದೇಶದ ತಜ್ಞರು ಮತ್ತು ಹೊರ ರಾಷ್ಟ್ರದಿಂದ ಬಂದ ತಜ್ಞರುಗಳು Dharwar campus is the best campus to establish a University ಎಂದು ಹೇಳಿದ್ದರು. ಆದರೆ ಹೆಬ್ಬಾಳ್ ರಾಜ್ಯದ ಕೇಂದ್ರಸ್ಥಾನವಾಗಿರುವುದರಿಂದ, ಇಲ್ಲಿಯೇ ಆರಂಭವಾಗಬೇಕೆಂದು ಆ ಕಾಲಕ್ಕೆ ಪ್ರಾರಂಭ ಮಾಡಲಾಯಿತು. ಈ ವಿಶ್ವವಿದ್ಯಾನಿಲಯದವರು ಏನೇನು ಅಭಿವೃದ್ಧಿ ಕಾರ್ಯಕ್ರಮಗಳನ್ನು ಮಾಡಿದ್ದಾರೆಂಬುದನ್ನು ಮಾನ್ಯ ಸದಸ್ಯರು ಗಮನಿಸಬೇಕು. ಮುಖ್ಯವಾಗಿ ವ್ಯವಸಾಯ ಇಲಾಖೆ ಮತ್ತು ತೋಟಗಾರಿಕೆ ಇಲಾಖೆಯನ್ನು ಡೆವೆಲಪ್ ಮಾಡುವ ಬಗ್ಗೆ ನಾವು ಆಸ್ಥೆ ವಹಿಸಬೇಕಾಗಿದೆ. ಅನೇಕ ಕಡೆಗಳಲ್ಲಿ ಸೂಕ್ತವಾದಂಥ ವ್ಯವಸಾಯ ಕಾಲೇಜುಗಳನ್ನು ತೆರೆಯುವುದಕ್ಕೆ ಪ್ರಾರಂಭ ಮಾಡಬೇಕಾಗಿದೆ. ಆದರೆ ವ್ಯವಸಾಯ ವಿಶ್ವವಿದ್ಯಾನಿಲಯದ ಉದ್ದೇಶ ಬರೀ ಕಾಲೇಜುಗಳನ್ನು ತೆಗೆಯುವುದು ಅಲ್ಲ. ಮತ್ತು ಕಾಲೇಜುಗಳನ್ನು ನಡೆಸುವುದಲ್ಲ. ಮುಖ್ಯವಾಗಿ ಇವರ ಕೆಲಸವೆಂದರೆ ರೀಸರ್ಚ್ ಮಾಡುವುದು. ಇದರಲ್ಲಿ ಮುಂದೆ ಬರಬೇಕು. ಹೆಚ್ಚು ಹೆಚ್ಚು ಫಾರಂಗಳನ್ನು ತೆರೆಯುವುದರ ಮೂಲಕ ಯಾವ ಬೆಳೆ ಬೆಳೆದರೆ ಒಂದಕ್ಕೆ ಹತ್ತು ಪಟ್ಟು ಜಾಸ್ತಿ ಬೆಳೆಯಬಹುದು ಎಂಬುದನ್ನು ಕಂಡುಹಿಡಿಯಬೇಕು. ಈ ವಿಷಯದಲ್ಲಿ ರೈತ ಹಾಗೂ ಸರ್ಕಾರದ ನಡುವೆ ಒಳ್ಳೆಯ ಸಂಬಂಧವಿರುವಂತೆ ನೋಡಿಕೊಳ್ಳಬೇಕು. ಈ ದೃಷ್ಟಿಯಿಂದ ಇನ್ನೊಂದು ವಿಶ್ವವಿದ್ಯಾನಿಲಯವಾದರೂ ಮಾನ್ಯ ಸದಸ್ಯರು ಆಶ್ಚರ್ಯ ಪಡಬೇಕಾಗಿಲ್ಲ. ಈ ರೀತಿ ಆದರೆ ಕೆಲವು ಜಿಲ್ಲೆಗಳನ್ನು ಹೊಸ ವಿಶ್ವವಿದ್ಯಾನಿಲಯಕ್ಕೂ ಕೆಲವು ಜಿಲ್ಲೆಗಳನ್ನು ಈಗಿನ ವಿಶ್ವವಿದ್ಯಾನಿಲಯಕ್ಕೆ ಎಂದು ವಿಂಗಡಣೆ ಮಾಡಬೇಕೆಂದಿದ್ದೇವೆ. ಮುಖ್ಯವಾಗಿ ಈಗ ನಮಗಿರುವ ಅರ್ಥಿಕ ಸ್ಥಿತಿಯಲ್ಲಿ ಮತ್ತು ಅನುಕೂಲತೆಯ ದೃಷ್ಟಿಯಲ್ಲಿ ಧಾರವಾಡದಲ್ಲಿ ಪ್ರಾರಂಭ ಮಾಡಲು ಯೋಗ್ಯಸ್ಥಳವಾಗಿದೆ. ಅಲ್ಲಿ ಒಳ್ಳೆಯ ಕ್ಯಾಂಪಸ್ ಇದೆ, ವ್ಯವಸಾಯದ ಕಾಲೇಜು ಇದೆ, ಸಾವಿರಾರು ಎಕರೆ ಜಮೀನು ಇದೆ, ಬೇರೆ ಬೇರೆ ಬೆಳೆಗಳನ್ನು ಬೆಳೆಯುವುದಕ್ಕೆ ಒಳ್ಳೆಯ ಅನುಕೂಲ ವಾತಾವರಣ ಇದೆ, ನೀರಾವರಿ ಮಾಡುವುದಕ್ಕೆ ಒಳ್ಳೆಯ ಕೆರೆ ಇದೆ. ಈ ದೃಷ್ಟಿಯಿಂದ ನಾವು ಧಾರವಾಡವನ್ನು ಆಯ್ಕೆ ಮಾಡಿದ್ದೇನೆ. ಇದನ್ನು ಕೆ. ಎಚ್. ಪಾಟೀಲರ ಜಿಲ್ಲೆ ಎಂದು ಆಯ್ಕೆ ಮಾಡಿಲ್ಲ. ಮತ್ತೆ ಪೂರ್ತಿಯಾಗಿ ಇದು ನನ್ನ ಸ್ವಂತ ಆಯ್ಕೆಯಲ್ಲ. ತೆರೆದ ಮನಸ್ಸಿನಿಂದ ಕೇಳುವುದಾದರೆ...

ಶ್ರೀ ಕೋಣಂದೂರು ಲಿಂಗಪ್ಪ.—ಇಷ್ಟೇ ಅನುಕೂಲವಿರುವ ಬೇರೆ ಪ್ರದೇಶಗಳು ಇರಲಿಲ್ಲವೇ ?

ಶ್ರೀ ಕೆ. ಎಚ್. ಪಾಟೀಲ್ —ಇದಕ್ಕೂ ಹೆಚ್ಚಿನ ಅನುಕೂಲವಿರುವ, ಹೆಚ್ಚು ಖರ್ಚಿಲ್ಲದ ಹೆಚ್ಚು ಸೌಕರ್ಯಗಳು ಇರುವ ಪ್ರದೇಶವನ್ನು ತೋರಿಸಿದರೆ ಅಲ್ಲಿಗೇ ಹಾಕೋಣ. ಬೇಕಾದರೆ, ಶಿವಮೊಗ್ಗಕ್ಕೆ ಹಾಕೋಣ. ಮುಖ್ಯವಾಗಿ ಹೆಚ್ಚಿನ ಸೌಕರ್ಯಗಳು ಇರಬೇಕು. ಈಗ ರಾಯಚೂರು ಇಂಜನಿಯರಿಂಗ್ ಡಿಪ್ಲೋಮೊ ಕೋರ್ಸ್‌ನ್ನು ಅಪ್-ಗ್ರೇಡ್ ಮಾಡಬೇಕೆಂದು ನನ್ನ ಉದ್ದೇಶವಿದೆ.

(ಶ್ರೀ ಕೆ. ಹೆಚ್. ಪಾಟೀಲ್)

ಅದೇನೂ ನನ್ನ ಜಿಲ್ಲೆಯಲ್ಲ, ಆದರೂ ರಾಜ್ಯದ ಹಿತದೃಷ್ಟಿಯಿಂದ ಕೆಲಸ ಮಾಡುವುದು ನನ್ನ ಕರ್ತವ್ಯವಾಗಿದೆ. ಇಂತಹ ವಿಚಾರಗಳ ಬಗ್ಗೆ ನನ್ನ ಗಮನ ಸೆಳೆಯುವುದು ಮಾನ್ಯ ಸದಸ್ಯರ ಕರ್ತವ್ಯವಾಗಿದೆ.

ಶ್ರೀ ಕೋಣಂದೂರು ಲಿಂಗಪ್ಪ.—ಇನ್ನೊಂದು ವ್ಯವಸಾಯ ವಿಶ್ವವಿದ್ಯಾನಿಲಯವನ್ನು ಎಲ್ಲಿ ಯಾದರೂ ಸ್ಥಾಪನೆ ಮಾಡಿ, ಆದರೆ ಅಲ್ಲಿ ತಯಾರಾಗತಕ್ಕಂಥ ಪದವೀಧರರಿಗೆ ನೌಕರಿ ಕೊಡುವು ದಿಲ್ಲ ಎಂದು ಹೇಳಿ, ನೋಡೋಣ !

ಶ್ರೀ ಕೆ. ಎಚ್. ಪಾಟೀಲ್.—ಮಾನ್ಯ ಸದಸ್ಯರಿಗೆ ಇರತಕ್ಕಂಥಾ ವೇದನೆಯನ್ನು ಬಿಡಿಸುವುದ ಕ್ಕಾಗಿ ಹೊಸ ಅಗ್ರಿಕಲ್ಚರಲ್ ಯೂನಿವರ್ಸಿಟಿಯನ್ನು ಸ್ಥಾಪನೆ ಮಾಡಬೇಕೆಂದಿದ್ದೇವೆ. ಹೊಸ ಅಗ್ರಿಕಲ್ಚರಲ್ ಯೂನಿವರ್ಸಿಟಿ ಆದಮೇಲೆ ಹೆಚ್ಚು ವಿದ್ಯಾರ್ಥಿಗಳು ಕಿಕ್ಕಿರಿದು ಆಗುವುದಿಲ್ಲ. ಆ ಯೂನಿವರ್ಸಿಟಿಯಲ್ಲಿ ಹೆಚ್ಚ ಹೆಚ್ಚು ರಿಸರ್ಚ್ ಮಾಡುವುದಕ್ಕೆ ಪ್ರಯತ್ನ ಮಾಡಿದ್ದೇವೆ

ಶ್ರೀಮಾನ್ ಕೋಣಂದೂರು ಲಿಂಗಪ್ಪನವರು ಕೃಷಿ ವಿಶ್ವವಿದ್ಯಾನಿಲಯದ ಪಬ್ಲಿಕೇಷನ್‌ಗಳು, ಪುಸ್ತಕಗಳು ಎಲ್ಲಾ ಕನ್ನಡದಲ್ಲಿ ಆಗಬೇಕು ಎಂದು ಹೇಳಿದ್ದಾರೆ. ನಮ್ಮಲ್ಲಿ ಅಲ್ಲಿ ಇಂಗ್ಲೀಷ್ ಭಾಷೆ ಯಲ್ಲಿ ಪರಿಣತರಾದ ಅಧಿಕಾರಿಗಳು ಇರುವುದರಿಂದ ಆ ಕೆಲಸ ಸ್ವಲ್ಪ ತೊಂದರೆಯಾಗುತ್ತಿದೆ. ಆದರೆ ಅಗ್ರಿಕಲ್ಚರಲ್ ಯೂನಿವರ್ಸಿಟಿಯಲ್ಲಿ ಕನ್ನಡ ಭಾಷೆಗೆ ಹೆಚ್ಚು ಪ್ರಾಧಾನ್ಯತೆ ಕೊಡಬೇಕೆಂದು ಏನು ಮಾನ್ಯ ಸದಸ್ಯರು ಹೇಳಿದ್ದಾರೆ ಅದನ್ನು ನಾನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ.

ನಂತರ ಅಗ್ರೋ ಇಂಡಸ್ಟ್ರೀಸ್ ಕಾರ್ಪೋರೇಷನ್ ಬಗ್ಗೆ ಮಾನ್ಯ ಸದಸ್ಯರು ಕೆಲವು ಮಾತು ಗಳನ್ನು ಹೇಳಿದ್ದಾರೆ. ಹಾಗೆ ಮಾತನಾಡುವಾಗ ಅವರು ಟ್ರಾಕ್ಟರುಗಳು, ಬುಲ್ಡೋಜರುಗಳು, ಮತ್ತು ರಿಗ್‌ಗಳು ಈ ಸಂಸ್ಥೆಗೆ ಒಳಪಡಬೇಕು ಎಂದು ಹೇಳಿದ್ದಾರೆ. ಈ ಸಂಸ್ಥೆಯನ್ನು ಪ್ರಾರಂಭ ಮಾಡಿದ ಉದ್ದೇಶ ಮತ್ತು ಬೇರೆ ಕಡೆಗಳಲ್ಲಿ ಈ ಸಂಸ್ಥೆ ಯಾವ ರೀತಿ ಕೆಲಸ ಮಾಡು ತ್ತಿದೆ ಎಂಬುದನ್ನು ನೋಡಿದರೆ ನಮ್ಮ ರಾಜ್ಯದ ಅಗ್ರೋ ಇಂಡಸ್ಟ್ರೀಸ್ ಕಾರ್ಪೋರೇಷನ್ ಅನ್ನು ಇನ್ನೂ ವಿಸ್ತೃತಗೊಳಿಸಬೇಕಾಗಿದೆ. ಈ ಸಂಸ್ಥೆಗೆ ಛೇರ್ಮನ್ ಆಗಿರತಕ್ಕ ಶ್ರೀಮಾನ್ ಲಕ್ಷ್ಮಣ ರಾವ್ ಅವರು ಹಿರಿಯ ಅಧಿಕಾರಿಗಳು. ಅವರ ಕೈಯ್ಯಲ್ಲಿ ಕೆಲವರು ಜನ ನುರಿತ ಅಧಿಕಾರಿಗಳನ್ನು ಕೊಟ್ಟರೆ ಈ ಅಗ್ರೋ ಇಂಡಸ್ಟ್ರೀಸ್ ಕಾರ್ಪೋರೇಷನ್ನಿನ ಕಾರ್ಯವನ್ನು ಮತ್ತಷ್ಟು ಮುಂದುವರಿಸಿ ರೈತರಿಗೆ ಬೇಕಾದಂತಹ ಟ್ರಾಕ್ಟರುಗಳಾಗಲೀ, ಬುಲ್ಡೋಜರುಗಳಾಗಲೀ, ಬೀಜ, ಗೊಬ್ಬರ ಮುಂತಾದ ವ್ಯವಸಾಯದ ಸಲಕರಣೆಗಳನ್ನು ರೈತರಿಗೆ ಪೂರೈಸುವುದಕ್ಕೆ ಸಾಧ್ಯವಾಗುವಂಥಾ ಕೇಂದ್ರ ಆಗಬೇಕು ಎಂಬುದು ನಮ್ಮ ಉದ್ದೇಶವಾಗಿದೆ.

ಕೆಲವರು ಮಾನ್ಯ ಸದಸ್ಯರು ಅಗ್ರೋ ಇಂಡಸ್ಟ್ರೀಸ್ ಕಾರ್ಪೋರೇಷನ್ನಿನ ಕೇಂದ್ರವನ್ನು ತಾಲ್ಲೂಕು ಮಟ್ಟದಲ್ಲಿ ಸ್ಥಾಪನೆ ಮಾಡಿ ಅವುಗಳ ಮುಖಾಂತರ ಟ್ರ್ಯಾಕ್ಟರು ಮತ್ತು ಬುಲ್ಡೋಜರು ಗಳನ್ನು ರೈತರಿಗೆ ಒದಗಿಸುವಂತೆ ಮಾಡಬೇಕು ಎಂದು ಹೇಳಿದರು. ದುರ್ದೈವದಿಂದ ಇನ್ನೂ ಆ ರೀತಿ ಪ್ರಗತಿಯನ್ನು ಸಾಧಿಸುವುದಕ್ಕೆ ಸಾಧ್ಯವಾಗಿಲ್ಲ. ಯಾರು ಅಗ್ರಿಕಲ್ಚರಲ್ ಗ್ರ್ಯಾಜುಯೇಟ್ಸ್ ನಿರುದ್ಯೋಗಿಗಳಾಗಿದ್ದಾರೆ ಅವರಿಗೆ ಟ್ರೈನಿಂಗ್ ಕೊಟ್ಟು ತಾಲ್ಲೂಕುಗಳಲ್ಲಿ ಒಂದೊಂದು ಕೇಂದ್ರ ವನ್ನು ತೆಗೆದು ಅವುಗಳ ಮುಖಾಂತರ ರೈತರಿಗೆ ಬೇಕಾದ ಸೌಲಭ್ಯಗಳನ್ನು ಪೂರೈಸುವುದೇ ಈ ಅಗ್ರೋ ಇಂಡಸ್ಟ್ರೀಸ್‌ನ ಮುಖ್ಯ ಉದ್ದೇಶ. ಮತ್ತು ಹಾಗೆಯೇ ಅಗ್ರಿಕಲ್‌ಚರಲ್ ಮಾರ್ಕೆಟ್ ಸುಧಾರಣೆ ಆಗಬೇಕು, ಈ ದೃಷ್ಟಿಯಿಂದ ಅನೇಕ ಕಾರ್ಯಕ್ರಮಗಳ ಆಗಬೇಕಾಗಿದೆ.

ಶ್ರೀಮಾನ್ ಕೋಣಂದೂರು ಲಿಂಗಪ್ಪನವರು ಎಲ್ಲೆಲ್ಲಿ ಯಾವ ಯಾವ ಬೆಳೆಯನ್ನು ಬೆಳೆಯು ತ್ತಾರೆ ಅದಕ್ಕನುಗುಣವಾಗಿ ಉದ್ದಿಮೆಗಳನ್ನು ಪ್ರಾರಂಭ ಮಾಡಬೇಕು ಎಂದು ಸಲಹೆ ಮಾಡಿ ದ್ದಾರೆ. ಇದಕ್ಕೆ ಸಂಬಂಧಪಟ್ಟ ಹಾಗೆ ಪ್ರಾಜೆಕ್ಟ್ ಆಫೀಸರನ್ನು ನೇಮಿಸಿದ್ದೇವೆ. ಈಗಾಗಲೇ ಕೆಲವು ಪ್ರಾಜೆಕ್ಟ್ ರಿಪೋರ್ಟ್ ತಯಾರಾಗಿವೆ. ಆ ಉದ್ದಿಮೆಗಳನ್ನು ಪ್ರಾರಂಭ ಮಾಡುವುದಕ್ಕೆ ಬೇರೆ ಬೇರೆ ಜಿಲ್ಲೆಗಳಲ್ಲಿ ಸಹಕಾರ ಸಂಘಗಳಾಗಲೀ, ಇಲ್ಲವೇ ಖಾಸಗೀಯವರಾಗಲೀ ಮುಂದೆ ಬಂದರೆ ಅವರಿಗೆ ಅಗ್ರೋ ಇಂಡಸ್ಟ್ರೀಸ್ ಕಾರ್ಪೋರೇಷನ್ ಮುಖಾಂತರ ಸಹಾಯ ಮಾಡಲಾಗು ತ್ತದೆ. ಜಿಲ್ಲೆಗೆ ಒಂದಾದರೂ ಕೃಷಿಕೈಗಾರಿಕೆಯನ್ನು ಸ್ಥಾಪಿಸಬೇಕೆಂಬುದೇ ನಮ್ಮ ಆಶಯ.

ಅಗ್ರೋ ಇಂಡಸ್ಟ್ರೀಸ್ ಕಾರ್ಪೋರೇಷನ್, ಕೋ ಆಪರೇಟೀವ್ ಮಾರ್ಕೆಟಿಂಗ್ ಫೆಡರೇಷನ್ ಮತ್ತು ಸಹಕಾರ ಸಂಘಗಳ ಸ್ಥಾಪನೆಯ ಬಗ್ಗೆ ಶ್ರೀಮಾನ್ ಬಾಪು ಗೌಡರಿಗೆ ಬೇರೆ ಹೇಳಬೇಕಾ ಗಿಲ್ಲ ಎಂದು ಕಾಣುತ್ತದೆ. ಸಹಕಾರ ಸಂಘಗಳಲ್ಲಿ ಅದರಲ್ಲಿರುವ ಸದಸ್ಯರಿಗೆ ಮಾತ್ರ ಮೀಸಲಾಗಿದೆ.

ಸಹಕಾರ ಸಂಘಗಳಲ್ಲಿ ಸದಸ್ಯರಾಗಿರುವವರ ಪರ್ಸೆಂಟೇಜನ್ನು ನೋಡಿದರೆ ¼ ಅಂಶಕ್ಕಿಂತ ಮೇಲ್ಪಟ್ಟು ಹೋಗಿಲ್ಲ. ಇನ್ನು ¾ ಅಂಶ ಜನತೆಗೆ ಬೇಕಾದ ಸೌಲಭ್ಯವನ್ನು ಒದಗಿಸುವುದಕ್ಕೆ ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ ಮುಂದೆ ಬರಬೇಕಾಗಿದೆ. ಅದಕ್ಕೆ ಪ್ರೋತ್ಸಾಹ ಕೊಡ ಬೇಕಾಗುತ್ತದೆ. ಇದರಲ್ಲಿ ಒಬ್ಬರಿಗೊಬ್ಬರಿಗೆ ಗಲಾಟೆ ಬರುವುದಕ್ಕೆ ಸಾಧ್ಯವಿಲ್ಲ. ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ನಿನವರು ಲಾಭ ಪಡೆದುಕೊಳ್ಳಬೇಕು ಎಂಬುದು ನಮ್ಮ ಉದ್ದೇಶ ಅಲ್ಲ.

ಶ್ರೀ ಜಿ. ರಾಮೇಗೌಡ.—ಸ್ವಾಮಿ ಒಂದು ಕ್ಲಾರಿಫಿಕೇಷನ್ ಬೇಕಾಗಿದೆ. ಸಹಕಾರಸಂಘ ಗಳಲ್ಲಿರತಕ್ಕ ಸದಸ್ಯರಿಗೆ ಅನುಕೂಲ ಸಿಕ್ಕುತ್ತದೆ. ಆದರೆ ಇದರಲ್ಲಿ ಏನಾಗಿದೆ ಎಂದರೆ ಈಗ ನಮ್ಮ ರಾಜ್ಯದಲ್ಲಿ ಗೊಬ್ಬರ ಮತ್ತು ಆಹಾರಧಾನ್ಯಗಳ ವ್ಯಾಪಾರವನ್ನು ಮಾರ್ಕೆಟಿಂಗ್ ಫೆಡರೇಷನ್ ಮಾಡುತ್ತದೆ. ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್‌ನವರೂ ಮಾಡುತ್ತಾರೆ ಈ ವ್ಯಾಪಾರ ದಲ್ಲಿ ಎರಡು ಸಂಸ್ಥೆಗಳೂ ಕಾಂಪಿಟಿಷನ್ ಮಾಡುತ್ತವೆ. ಎರಡೂ ಸಂಸ್ಥೆಗಳೂ ಮಾಡತಕ್ಕ ಉದ್ಯೋಗ ಒಂದೇ ಆಗಿದ್ದು ಯಾವುದಾದರೂ ಒಂದಕ್ಕೆ ಈ ವ್ಯಾಪಾರವನ್ನು ವಹಿಸಿದರೆ ಚೆನ್ನಾಗಿ ನಡೆಯುತ್ತದೆ, ಈ ರೀತಿ ಎರಡು ಸಂಸ್ಥೆಗಳೂ ಈ ವ್ಯಾಪಾರದಲ್ಲಿ ಪೈಪೋಟಿ ಮಾಡುವುದು ಸೂಕ್ತವಲ್ಲ.

ಶ್ರೀ ಕೆ. ಎಚ್. ಪಾಟೀಲ್.—ಆ ರೀತಿ ಎರಡು ಸಂಸ್ಥೆಗಳೂ ಪೈಪೋಟಿ ಮಾಡುವುದನ್ನು ಸರ್ಕಾರದ ಗಮನಕ್ಕೆ ತಂದರೆ ಅದನ್ನು ನಾವು ತಪ್ಪಿಸುತ್ತೇವೆ. ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ನಿನವರು ಸರ್ವೀಸ್ ದೃಷ್ಟಿಯಿಂದ ಕೆಲಸ ಮಾಡುತ್ತಾರೆಯೇ ಹೊರತು ಲಾಭದ ಕಡೆ ಅವರು ಗಮನ ಕೊಡುತ್ತಾ ಇಲ್ಲ.

ಶ್ರೀ ಬಾಪು ಗೌಡ ರಾಯಪ್ಪ.—ಫರ್ಟಿಲೈಜರ್ಸ್ ಮತ್ತು ಸೀಡ್ಸ್ ಡಿಸ್ಟ್ರಿಬ್ಯೂಷನ್ ಇವುಗಳನ್ನು ಕೋ ಆಪರೇಟಿವ್ ಮಾರ್ಕೆಟಿಂಗ್ ಫೆಡರೇಷನ್‌ಗಳು ಮಾಡುತ್ತವೆ. ಮತ್ತು ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ ಕೂಡ ಮಾಡುತ್ತದೆ. ಈ ಎರಡೂ ಸಂಸ್ಥೆಗಳು ಇದರಲ್ಲಿ ಪೈಪೋಟಿ ಮಾಡುವು ದನ್ನು ತಪ್ಪಿಸುತ್ತೀರಾ ?

ಶ್ರೀ ಕೆ. ಎಚ್. ಪಾಟೀಲ್.—ನಾನು ಆಗಲೇ ಹೇಳಿದೆ, ಪೈಪೋಟಿಗೆ ಅವಕಾಶ ಕೊಡುವು ದಿಲ್ಲವೆಂದು. ಮಾನ್ಯ ಸದಸ್ಯರು ಹೇಳಿದಂತೆ ಪೈಪೋಟಿಯನ್ನು ತಪ್ಪಿಸುವುದಕ್ಕೆ ಏನು ಮಾಡಬೇಕೋ ಅದನ್ನು ಮಾಡೋಣ. ಒಂದು ಮಾರ್ಕೆಟಿಂಗ್ ಸೊಸೈಟಿ ತಾಲ್ಲೂಕಿನಲ್ಲಿದೆ. ಅಲ್ಲಿ ಫೆಡರೇಷನ್ ಕೂಡ ಇದೆ. ಅಂದ ಮೇಲೆ ಅಂತಹವರಿಗೆ ಬಂದ್ ಮಾಡುವುದಕ್ಕಾಗುತ್ತದೆಯೇ ? ಇಂದು ಪೈಪೋಟಿ ವಿಷಯ ನನ್ನ ಗಮನಕ್ಕೆ ಬಂದಿಲ್ಲ. ಆ ರೀತಿ ಬಂದಾಗ್ಗೆ ಕೋಆಪರೇಟಿವ್ ಸೊಸೈಟಿ ಗಳನ್ನು ಮುಂದಕ್ಕೆ ಇಡುತ್ತಾರೆ, ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ನನ್ನು ಹಿಂದಕ್ಕೆ ಇಡು ತ್ತಾರೆ. ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ನಿನವರು ಮೈಸೂರು ರಾಜ್ಯದಲ್ಲಿ ಗೊಬ್ಬರ ಹಂಚು ವುದಕ್ಕೆ ಬಂದಿದ್ದರು. ಅದು ನಿಜವಾದ ಕ್ರಮವಲ್ಲ. ಆಗ್ರೋ ಬೇಸ್ಟ್ ಇಂಡಸ್ಟ್ರಿ ಡೆವಲಪ್ ಮಾಡ ಬೇಕೆಂದು ಈ ಕಾರ್ಪೊರೇಷನ್ ಮಾಡಿದೆ. ಮಾನ್ಯ ವಿರೋಧಪಕ್ಷದ ನಾಯಕರಾದಂಥ ಮಾನ್ಯ ಶ್ರೀ ದೇವೇಗೌಡರು ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ನಿನವರು ಸಾಲ ತೆಗೆದುಕೊಂಡು ಬಂದು ಬಡ್ಡಿಗೆ ಕೊಡುತ್ತಿದ್ದಾರೆಂದು ಹೇಳಿದರು. ಅಷ್ಟಾದರೂ ನನ್ನ ದೃಷ್ಟಿಯಲ್ಲಿ ಅದರಲ್ಲಿ ಬರತಕ್ಕ ಲಾಭ, ಲುಕ್ಸಾನು ದೊಡ್ಡದಲ್ಲ, ಆಗ್ರೋ ಇಂಡಸ್ಟ್ರೀಸ್ ಏಕೆ ಅದನ್ನು ಮಾಡಬೇಕೆಂದರೆ ಆದರಲ್ಲಿ ಒಂದು ಉದ್ದಿಮೆ ಬೆಳೆಯಬೇಕು, ನಮ್ಮ ರಾಜ್ಯದಲ್ಲಿ ಅದರ ಲಾಭ ಯಾರಿಗೆ ಉಳಿಯಲಿ ಅಂದರೆ ರೈತರಿಗೆ ಉಳಿಯಲಿ ಎಂದು ಹೇಳುವುದಾಗಿದೆ.

3-30 P.M.

ಶ್ರೀ ಕಾಗೋಡು ತಿಮ್ಮಪ್ಪ.—ನೀವು ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ನಿಗೆ ಶೇಕಡ 9 ರೂಪಾಯಿಗಳಂತೆ ಬಡ್ಡಿ ದರದಲ್ಲಿ ತೆಗೆದುಕೊಂಡು ಅದೇ ಹಣವನ್ನು ಸಹಕಾರ ಸಂಘಗಳಿಗೆ ಶೇಕಡ 6 ರೂಪಾಯಿಗಳಂತೆ ಸಾಲ ಕೊಡುತ್ತಿದ್ದೀರಿ.

ಶ್ರೀ ಕೆ. ಎಚ್. ಪಾಟೀಲ್.—ಆ ಒಂದು ದೃಷ್ಟಿಯಿಂದ ಆಗ್ರೋ ಇಂಡಸ್ಟ್ರೀಸ್ ಕಡೆಗೆ ವಿಶೇಷ ವಾದಂಥ ಗಮನ ಕೊಡಬೇಕಾಗಿದೆ. ಈಗ ಅದು ಹೊಸದಾದ ರೂಪರೇಷಗಳಿಂದ ತನ್ನ ಪ್ರಗತಿ ಯನ್ನು ಸಾಧಿಸುತ್ತಿದೆ. ಅದಕ್ಕೆ ನಿಮ್ಮೆಲ್ಲರ ಸಹಕಾರ ಬೇಕು. ಬೇರೆ ದೇಶಗಳಲ್ಲಿ ಆಗ್ರೋ ಇಂಡ ಸ್ಟ್ರೀಸ್ ಮತ್ತು ಫಾರೆಸ್ಟ್ ಇಂಡಸ್ಟ್ರೀಸ್ ಕಾರ್ಪೊರೇಷನ್ ಇವೆರಡೂ ಪ್ರಧಾನವಾದ ಸೇವೆಯನ್ನು ಸಲ್ಲಿಸುತ್ತಿವೆಯೆಂದು ನಾನು ಹೇಳುತ್ತೇನೆ. ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ನಿನವರು

(ಶ್ರೀ ಕೆ. ಹೆಚ್. ಪಾಟೀಲ್)

ಮಂಗಳೂರು ಕೆಮಿಕಲ್ಸ್ ಅಂಡ್ ಫರ್ಟಿಲೈಜರ್ಸ್ ಲಿಮಿಟೆಡ್‌ಗೆ 1 ಕೋಟಿ ರೂಪಾಯಿಗಳನ್ನೂ, ದಾವಣಗೆರೆ ಷುಗರ್ ಫ್ಯಾಕ್ಟರಿಗೆ 28 ಲಕ್ಷ ರೂಪಾಯಿಗಳನ್ನೂ, ಇನ್ನು 15 ಲಕ್ಷ ರೂಪಾಯಿಗಳನ್ನು ಮಾನ್ಯ ಶ್ರೀ ಕೆ. ಎಚ್. ಪಾಟೀಲ್ ಅವರ ನೇತೃತ್ವದಲ್ಲಿ ಮುಂದುವರಿಯುತ್ತಿರತಕ್ಕ ಸಹಕಾರ ಸಂಘಗಳಿಗೆ ಷೇರು ರೂಪದಲ್ಲಿ ಕೊಟ್ಟಿರು ಎಂಬುದಾಗಿ ವಿರೋಧಪಕ್ಷದ ನಾಯಕರಾದಂಥ ಮಾನ್ಯ ಶ್ರೀ ದೇವೇಗೌಡರು ಹೇಳಿದರು. ಶ್ರೀಮಾನ್ ದೇವೇಗೌಡರು ಬಹಳ ಅನುಭವಶಾಲಿಗಳು. ಅಷ್ಟೇ ಅಲ್ಲ, ಶಾಂತಿಪ್ರಿಯರು. ಅವರು ಯಾವಾಗಲೂ ಯೋಗ್ಯವಾದುದನ್ನು ಮಾತನಾಡುವರು. ಬಹುಸಂಖ್ಯಾತ ಸದಸ್ಯರ ಗಮನವನ್ನು ಸೆಳೆದು ಈ ಸದನದಲ್ಲಿ ಆಳುವ ಪಕ್ಷದವರು ಮಾಡಿದಂಥ ಪ್ರಮಾದವನ್ನು ಬಯಲಿಗೆಳೆದು ತಿದ್ದುವುದಕ್ಕೆ ಸಮರ್ಥನೀಯವಾದ ಜನರಾಗಿರುವುದರಿಂದ ಅವರು ವಿರೋಧ ಪಕ್ಷದ ನಾಯಕರಾಗಿ ಆಯ್ಕೆಯಾಗಿದ್ದಾರೆ. ಅವರ ಬಗ್ಗೆ ನನಗೆ ಆದರ, ಗೌರವ ಇದೆ. ನಾನು ಯಾವ ನುಡಿಯನ್ನು ಇಟ್ಟಿದ್ದರೂ ಸಹ ಆ ನುಡಿಯ ಬಗ್ಗೆ ಅತ್ಯಂತ ಕಳಕಳಿಯಿಂದ ಪರಿಶೀಲನೆ ಮಾಡುವ ಪ್ರವೃತ್ತಿಯನ್ನು ನಾನು ಇಟ್ಟುಕೊಂಡಿದ್ದೇನೆ. ವಿರೋಧಪಕ್ಷದ ನಾಯಕರಿಗೆ ಹೆಚ್ಚು ಪ್ರಬಲವಾದಂಥ ಮಾನ್ಯತೆಯನ್ನು ಪ್ರಜಾಪ್ರಭುತ್ವದಲ್ಲಿ ಕೊಡುವುದು ನ್ಯಾಯಬದ್ಧವಾಗಿ ಮಂತ್ರಿಗಳ ಹಾಗೂ ಶಾಸಕರ ಕರ್ತವ್ಯ. ಈ ದೃಷ್ಟಿಯಿಂದ ಅವರು ಕೊಡುವ ಪ್ರತಿಯೊಂದು ನುಡಿಯನ್ನು ಸಹ ನಾನು ಬಹಳ ಸೂಕ್ಷ್ಮವಾಗಿ ಗಮನಿಸಿದ್ದೇನೆ. ಇದು ಅವರ ತಪ್ಪು ಎಂದು ಹೇಳುವುದಿಲ್ಲ. ಅವರಿಗೆ ಬಂದಿರುವ ಮಾಹಿತಿ ತಪ್ಪು. ಆ ಮಾಹಿತಿಯನ್ನು ಏಕೆ ಅವಸರದಲ್ಲಿ ಬಳಸಿದರೋ ಗೊತ್ತಿಲ್ಲ. ನಿನ್ನೆ ಹೇಳಿದರು, 80 ರೂಪಾಯಿಗಳಿಗೆ ಟ್ರಕ್ ಬಾಡಿಗೆ ಹೋದುದನ್ನು ಇಲ್ಲ ಎಂದು ಹೇಳಿದರೆ ನಾನು ಕ್ಷಮೆ ಕೇಳಬೇಕೆಂದು ಹೇಳಿದರು. ಆದರೆ ನಾನು ಕ್ಷಮೆ ಕೇಳುವುದಕ್ಕೆ ಇಷ್ಟಪಡುವುದಿಲ್ಲ. ಅವರು ಹಿರಿಯರು. ಅವರೂ ಸಹ ಕ್ಷಮೆ ಕೇಳುವಂಥ ಸನ್ನಿವೇಶಕ್ಕೆ ಬರುವ ಹಾಗೆ ಮಾಡುವುದಿಲ್ಲ. ನನ್ನ ಸ್ನೇಹಿತರಲ್ಲಿ ಕೆಲವರು ಚಿಕ್ಕವರಾಗಿದ್ದರೂ ಅವರು ನನ್ನ ಮೇಲೆ ಟೀಕೆ ಬರಲಿ ಎಂದಿದ್ದರು. ಆದರೆ ಅವರಿಗೆ ನಿಜವಾದ ಅಂಕಿ ಅಂಶಗಳು ಕೊಟ್ಟಿದ್ದರೆ, ಆ ರೀತಿಯಾಗಿ ಮಾತನಾಡುತ್ತಿರಲಿಲ್ಲವೆಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನು ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನವರಿಗೆ 15 ಲಕ್ಷ ರೂಪಾಯಿಗಳನ್ನು ಬ್ಯಾಂಕಿನಿಂದ ಸಾಲ ತೆಗೆದುಕೊಂಡು ಬಂದು ಕೊಟ್ಟಿದ್ದೇನೆಂದು ಹೇಳಿದರು. ಸಾಲ ತೆಗೆದುಕೊಂಡು ಬಂದು ಕೊಡಲಿಲ್ಲ. ಕೊಟ್ಟಂಥ ದುಡ್ಡನ್ನು ಅಲ್ಲಿ ಉಪಯೋಗ ಮಾಡಿಕೊಳ್ಳುವುದಕ್ಕಾಗಲಿಲ್ಲ. ಅದು ತ್ವರಿತ ರೀತಿಯಲ್ಲಿಯೂ ನಡೆಯಲಿಲ್ಲ. ಕಂಟ್ರಾಕ್ಟರಿಗೆ ಸಾಕಷ್ಟು ಹಣ ಹೋಗಲಿಲ್ಲ. ನಮ್ಮಲ್ಲಿರತಕ್ಕ ಉದ್ದಿಮೆಗಳಿಂದ ಬೇಕಾದಷ್ಟು ಹಣವನ್ನು ಗಳಿಸುವುದಕ್ಕೆ ಶಕ್ಯವಿದೆ. ಹುಲಕೋಟಿ ಮಿಲ್ಲಿಗೆ ಕೊಡುವುದಕ್ಕಿಂತ ಹೆಚ್ಚು ಇವರಿಗೆ ಕೊಡೋಣ. ನಾನು ಹಿಂದೆ ಹೋಗುವುದಿಲ್ಲ. ನ್ಯಾಯವಾಗಿ ಯಾರಿಗೆ ಪುರಸ್ಕಾರ ಕೊಡಬೇಕೋ ಅದನ್ನು ಕೊಡಲೇಬೇಕು. ಬೆನ್ನು ತಟ್ಟುವುದು ವಿರೋಧಪಕ್ಷದ ನಾಯಕರ ಅಭ್ಯಾಸ ಒಂದು ಸಹಕಾರ ಸಂಘ ಒಂದೇ ಪಕ್ಷದವರ ಕೈಲಿ ಇರಬಾರದು ಅಂದಮೇಲೆ ಇನ್ನೊಂದು ಸಹಕಾರ ಸಂಘ ಇನ್ನೊಬ್ಬರ ಕೈಲಿ ಇರಬಹುದೇ ? ನಿಜವಾಗಿ ಅದರಲ್ಲಿ ಲೋಪದೋಷಗಳು ಬಂದರೆ ಅಂಥಾದ್ದನ್ನು ಸೂಪರ್‌ಸೀಡ್ ಮಾಡುತ್ತೇವೆ. ಅದು ಒಂದು ಒಳ್ಳೆಯ ಲಕ್ಷಣವೇ ಆದ್ದರಿಂದ ಆಗ್ರೋ ಇಂಡಸ್ಟ್ರೀಸನ್ನು ಟೀಕಿಸುವುದು ಯೋಗ್ಯವೇ? ದಾವಣಗೆರೆ ಹೆಚ್ಚು ಫಲಪ್ರದವಾದ ಪ್ರದೇಶದಲ್ಲ ಹಾಗೂ ಕಬ್ಬು ಬೆಳೆಯುವ ಪ್ರದೇಶದಲ್ಲಿದೆ. ಅನೇಕ ದಿವಸಗಳಿಂದಲೂ ಸರ್ಕಾರ ಅಲ್ಲಿ ಒಂದು ಯೋಜನೆಯನ್ನು ಮಾಡಬೇಕೆಂದಾಗ, ಆಗ್ರೋ ಇಂಡಸ್ಟ್ರೀಸ್‌ನವರು ಮುಂದೆ ಹೋಗಿ ಅಲ್ಲಿ ರೈತರ ಬೆಂಬಲವನ್ನು ಪಡೆದು ಅಲ್ಲಿ ಒಂದು ಸಕ್ಕರೆ ಕಾರ್ಖಾನೆಯನ್ನು ಪ್ರಾರಂಭ ಮಾಡುವುದು ಒಂದು ಅಪರಾಧವೇ? ರಾಷ್ಟ್ರದ ಹಿತದೃಷ್ಟಿಯಿಂದ ಅಲ್ಲಿ ಒಂದು ಸಕ್ಕರೆ ಕಾರ್ಖಾನೆ ಪ್ರಾರಂಭವಾದಾಗ, ಅದರಿಂದ ರೈತರಿಗೆ ಕೋಟ್ಯಾಂತರ ರೂಪಾಯಿಗಳು ದೊರಕಿದಾಗ ಆ 28 ಲಕ್ಷ ರೂಪಾಯಿಗಳಿಂದ ಅವರಿಗೆ ಎಷ್ಟು ಅನುಕೂಲವಾಗುತ್ತದೆಂಬುದನ್ನು ಮಾನ್ಯ ಸದಸ್ಯರು ಅರಿತುಕೊಳ್ಳಬೇಕೆಂದು ನಾನು ಪ್ರಾರ್ಥನೆ ಮಾಡುತ್ತೇನೆ. 15 ಲಕ್ಷ ರೂಪಾಯಿಗಳನ್ನು ಬೇಕಾದರೆ ವಾಪಸ್ಸು ಪಡೆಯಲಿ, ಅದಕ್ಕೂ ನನ್ನ ಅಭ್ಯಂತರವಿಲ್ಲ. ಇವತ್ತು ಬೇಕಾದರೆ ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ ಬೋರ್ಡ್ ಅಫ್ ಡೈರೆಕ್ಟರ್ ಅವರಲ್ಲಿ ಹೋಗಿ ಮಾನ್ಯ ಶ್ರೀ ದೇವೇಗೌಡರೇ ಅವರ ಮನವೊಲಿಸಿ ಹಣ ವಾಪಸ್ಸು ಕೊಡಿ ಎಂದು ಕೇಳಲಿ. ಏಕೆಂದರೆ ನಾನು ಕೇಳಿದರೆ ಅದು ಹಿಂದಿನೇಟು ಹಾಕುವಂತ ಕಾರ್ಯಕ್ರಮವಾಗುತ್ತದೆ. ಆಗ್ರೋ ಇಂಡಸ್ಟ್ರೀಸ್‌ನವರು ಠರಾವು ಮಾಡಿದರೆ ಸೊಸೈಟಿಯವರು ಹಣ ಕೊಡಬಹುದು. ಇವತ್ತಿನ ದಿವಸ ಅವರು ಜನತೆಯಲ್ಲಿ ಅತಿ ಪ್ರೀತಿಯಾಗಿದ್ದಾರೆ. ಹಣ ದೊಡ್ಡದಲ್ಲ. ಬೇಕಾದರೆ ಮಾನ್ಯ ಶ್ರೀ ದೇವೇಗೌಡರೇ ಒಂದು ಸಭೆಯನ್ನು ಕರೆದು ಎಲ್ಲರನ್ನು ಇನ್‌ವೈಟ್ ಮಾಡಲಿ. ಆಗ ಆಗ್ರೋ ಇಂಡಸ್ಟ್ರೀಸ್‌ನವರೂ ಕೂಡ ಬರುತ್ತಾರೆ. ಆಗ ಅವರ ಮನವನ್ನು ಒಲಿಸಲಿ.

ಶ್ರೀ ಎಚ್. ಡಿ. ದೇವೇಗೌಡ.—ಅಗ್ರೊ ಇಂಡಸ್ಟ್ರೀಸ್ ಮ್ಯಾನೇಜ್‌ಮೆಂಟಿಗೆ ಹೋಗಿ ನಾನು ಉಪದೇಶ ಮಾಡಬೇಕಾಗಿಲ್ಲ. ಅಲ್ಲಿರತಕ್ಕ ಡೈರೆಕ್ಟರ್ಸ್ ಕೆಲಸವೇನೆಂದರೆ, ಅವರು ಕಾನೂನಿನ ಚೌಕಟ್ಟಿನಲ್ಲಿಯೇ ಕರ್ತವ್ಯ ಮಾಡಬೇಕು. ಅವರದು ನಾನು ಹೋಗಿ ಹೇಳಿ, ಮಂತ್ರಿಗಳು ಹೋಗಿ ಹೇಳಿ ಮಾಡುವ ಕೆಲಸವಲ್ಲ. ಅಗ್ರೊ ಇಂಡಸ್ಟ್ರೀಸ್ ಕಾರ್ಪೊರೇಷನ್ನಿನವರು ಯಾವ್ಯಾವ ಕೆಲಸಕ್ಕೆ ತೊಡಗಬೇಕೆಂಬುದನ್ನು ದಯಮಾಡಿ ಈ ಸಭೆಗೆ ತಿಳಿಸಬೇಕು. ಅಗ್ರೊ ಬೇಸ್ಡ್ ಇಂಡಸ್ಟ್ರೀಸ್ ಅಂದರೆ ಯಾವತ್ತೂ ರೈತರಿಗೆ ಬೇಕಾದಂಥ ಉಪಕರಣಗಳನ್ನು ಮಾಡುವುದು ಅಗ್ರೊ ಇಂಡಸ್ಟ್ರೀಸ್ ಕಾರ್ಪೊರೇಷನ್ನಿನ ಮೂಲ ಕರ್ತವ್ಯ. ಇವತ್ತು ಟ್ರ್ಯಾಕ್ಟರುಗಳನ್ನೂ, ಟ್ರ್ಯಾಕ್ಟರ್‌ಗಳಿಗೆ ಸಂಬಂಧಪಟ್ಟ ಟ್ರೈಲರ್‌ಗಳನ್ನೂ ಮತ್ತು ಇನ್ನೂ ಅದಕ್ಕೆ ಸಂಬಂಧಪಟ್ಟ ಇತರ ಉಪಕರಣಗಳನ್ನು ತಯಾರು ಮಾಡುವುದೇ ಅವರ ಮೂಲೋದ್ದೇಶ. ಯಾವನೋ ಒಬ್ಬ ದಾವಣಗೆರೆಯಲ್ಲಿ ಎಣ್ಣೆ ಮಿಲ್ ತೆಗೆಯುತ್ತೇನೆಂದರೆ ಸಾಲ ಕೊಡುವುದು ಸರಿಯೇ? ತಾವು ಮಂತ್ರಿಯಾಗಿ ಇದನ್ನು ಸಮರ್ಥವೆ ಮಾಡುವ ಕಾಲದಲ್ಲಿ ಯಾವನೋ ಒಬ್ಬ ಸೆಣಬಿನ ಕಾರ್ಖಾನೆಯನ್ನು ಮಾಡುತ್ತಾನೆ. ಅದಕ್ಕೆ ಹಣ ಕೊಡುತ್ತೀರಾ? ವ್ಯವಸಾಯ ಭೂಮಿಯಲ್ಲಿ ಉತ್ಪಾದನೆ ಮಾಡತಕ್ಕ ವ್ಯಾಪ್ತಿಯಲ್ಲಿ ಬಹಳ ದೂರ ಹೋಗುತ್ತಿದ್ದೀರಿ. ಅದಕ್ಕೆ ಅರ್ಥಮಾಡಿದರೆ ಬೇಕಾದಷ್ಟು ಮಾಡಬಹುದು. ಅವರ ಕೆಲಸ ಬೀಜ ಒದಗಿಸುವುದು, ಟ್ರ್ಯಾಕ್ಟರ್ ಮತ್ತು ಅದಕ್ಕೆ ಬೇಕಾದಂಥ ಉಪಕರಣಗಳನ್ನು ಒದಗಿಸುವುದು ಅಷ್ಟೇ ಅದನ್ನು ಬಿಟ್ಟು ಟೆಕ್ಸ್‌ಟೈಲ್ ಮಿಲ್, ಎಣ್ಣೆ ಮಿಲ್ ಹಾಗೂ ರೈಸ್ ಮಿಲ್ ಮಾಡುತ್ತೇವೆಂದು ಹೇಳುತ್ತಾ ಹೋದರೆ ಅದಕ್ಕೇನಾದರೂ ಮುಂದೆ ಇತಿ ಮಿತಿ ಇದೆಯೇ ಎಂಬುದನ್ನು ತಿಳಿಸಬೇಕು. ದಾವಣಗೆರೆಯಲ್ಲಿ ಈ ದಿವಸ ಒಂದು ಸಹಕಾರಿ ಸಕ್ಕರೆ ಕಾರ್ಖಾನೆಯನ್ನು ಹೂಡುವುದಕ್ಕೆ, ಇದು ಎಲ್ಲರಿಗೂ ಗೊತ್ತಿದೆ, ಆ ಚಿತ್ರದುರ್ಗದ ಒಂದು ರಾಜಕೀಯ, ಅಲ್ಲಿ ಒಂದು ರಾಜಕೀಯ ಯುದ್ಧವೇ ನಡೆಯುತ್ತಿದೆ; ಆದರೆ ಮಾನ್ಯ ಸಚಿವರು ಉತ್ತರಕೊಡತಕ್ಕ ಧಾಟಿಯನ್ನು ನೋಡಿದರೆ ಇವನು ಆ ಚಂದ್ರಲೋಕಕ್ಕೆ ಹೋಗತಕ್ಕ ಒಂದು ದಂಥೆಯನ್ನೂ ಕೂಡ ಈ ಅಗ್ರೊ ಬೇಸ್ಡ್ ಇಂಡಸ್ಟ್ರೀಗಳಲ್ಲಿ ತರುವಂತೆ ಭಾಸವಾಗುತ್ತಿದೆ.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಸಚಿವರು ಮಾತನಾಡುತ್ತಿರುವ ಧಾಟಿಯನ್ನು ನೋಡಿದರೆ ಹಿಂದೆ ಆ ಎಡ್ಮಂಡ್ ಬರ್ಕ್ ಮಾತನಾಡುತ್ತಿದ್ದ ಶೈಲಿ ಇದ್ದಹಾಗೆ ಇದೆ. ಅಷ್ಟು ಚೆನ್ನಾಗಿ ಮಾತನಾಡುತ್ತಿದ್ದಾರೆ. ರೈತರಾದವರಿಗೆ ಬೇರೆ ಫೈನಾನ್ಷಿಯಲ್ ಇನ್‌ಸ್ಟಿಟ್ಯೂಷನ್‌ಗಳಿಂದ ಧನ ಸಹಾಯ ಸಿಕ್ಕುವುದಿಲ್ಲ ಎನ್ನುವ ಉದ್ದೇಶದಿಂದಲೂ ಮತ್ತು ಬೇರೆ ಬೇರೆ ಕೈಗಾರಿಕೆಗಳಿಗೆ ರಾಜ್ಯದಲ್ಲಿ ಬೇರೆ ಬೇರೆ ಫೈನಾನ್ಷಿಯಲ್ ಇನ್‌ಸ್ಟಿಟ್ಯೂಷನ್‌ಗಳು ಸಾಲ ಕೊಡುವುದಕ್ಕೆ ಅವಕಾಶ ಇರುವಾಗ, ಸರ್ಕಾರದವರು ಕೇವಲ ಅಗ್ರಿಕಲ್ಚರಿಸ್ಟ್‌ಗಳಿಗೆ ಸ್ಥಾಪಿತವಾದ ಅಗ್ರೊ ಇಂಡಸ್ಟ್ರಿಯಲ್ ಕಾರ್ಪೊರೇಷನ್ನಿನಿಂದ ಬೇರೆ ಕೈಗಾರಿಕೆಗಳಿಗೆ ಏಕೆ ಹಣವನ್ನು ಕೊಡಿಸಿದರು ಎಂಬುದಕ್ಕೆ ಅವರು ನೇರವಾದ ಉತ್ತರವನ್ನು ಹೇಳಬೇಕಾಗಿದೆ. ಇದರಿಂದ ವ್ಯವಸಾಯಗಾರರಿಗೆ ಅನ್ಯಾಯ ಮಾಡಿದಂತಾಗಲಿಲ್ಲವೇ?

ಶ್ರೀ ಕೆ. ಎಚ್. ಪಾಟೀಲ್.—ನಾನು ಇದರ ಬಗ್ಗೆ ಹೆಚ್ಚು ಹೇಳುವುದಕ್ಕೆ ಹೋಗದೆ ಹಿಂದೆ ಮಾನ್ಯ ದೇವೇಗೌಡರ ಸರ್ಕಾರ ಇದ್ದಾಗ ಏನೊಂದು ರೂಲ್ಸನ್ನು ಅವರು ಮಾಡಿದ್ದರೂ ಅದರ ಇತಿ ಮಿತಿಯಲ್ಲೇ ಕೆಲಸ ಮಾಡಿದ್ದೇವೆಂದು ಹೇಳುವುದಕ್ಕೆ ಆ ರೂಲ್ಸನ್ನೇ ಓದುತ್ತೇನೆ :—

> "To promote agricultural industries and for that purpose to establish new companies, associations or suitable organisations and to assist and finance any company, whether owned by individual firm or company with capital loan, credit, etc."

ಇದನ್ನು ನಮ್ಮ ದೃಷ್ಟಿಯಲ್ಲಿ ಇಟ್ಟುಕೊಂಡು ಮಾಡಿದೆ. ಕೇಂದ್ರ ಸರ್ಕಾರದವರ ಅಭಿಪ್ರಾಯದಲ್ಲೂ ಕೂಡ ಅಗ್ರೊ ಇಂಡಸ್ಟ್ರೀಸ್ ಎಂದರೆ..........

ಶ್ರೀ ಎಚ್. ಡಿ. ದೇವೇಗೌಡ.—ದಯಮಾಡಿ ಕ್ಷಮಿಸಬೇಕು—ಅಗ್ರೋಬೇಸ್ಡ್ ಇಂಡಸ್ಟ್ರೀಸ್ ಎಂದರೆ ಯಾವುದು? ಹಾಗಾದರೆ ಅಲ್ಲಿ ಆ ಸೀನಿಯರ್ ಅಫೀಸರುಗಳಿಗೇನು ಕೆಲಸ? ಅವರ ಇಚ್ಛೆಯಂತೆ ಕೆಲಸ ಮಾಡದೆ ಅವರು ಹಸ್ತಕ್ಷೇಪಕ್ಕೆ.........

ಶ್ರೀ ಕೆ. ಎಚ್. ಪಾಟೀಲ್.—ಮಾನ್ಯ ಸದಸ್ಯರು ಸ್ವರ ಹೆಚ್ಚು ಮಾಡಿ ಮಾತನಾಡಿದರೆ ಹೆಚ್ಚು ಸಮರ್ಥನೆ ಮಾಡಿದಂತಾಗಲಿಲ್ಲ. ನಾನು ಮಂತ್ರಿಯಾಗಿ ಈ ಆಗ್ರೋ ಇಂಡಸ್ಟ್ರೀಸ್ ಎಂದರೆ ಏನೆಂಬುದನ್ನು ಹೇಳುತ್ತಿದ್ದೇನೆ—ರೈತನ ಆರ್ಥಿಕ ಪರಿಸ್ಥಿತಿಯನ್ನು ಉತ್ತಮಪಡಿಸುವುದಕ್ಕೆ ಸಾಧ್ಯವಾಗತಕ್ಕ ಕೈಗಾರಿಕೆಗಳು ಮತ್ತು ರೈತನು ಬೆಳೆಯುತಕ್ಕ ಪದಾರ್ಥಗಳನ್ನು ರೂಪಾಂತರಗೊಳಿಸಿ ಅವರಿಗೆ ಹೆಚ್ಚಿನ ಲಾಭ ತರತಕ್ಕ ಕೈಗಾರಿಕೆಗಳು ಯಾವು ಯಾವುವು ಇವೆಯೋ ಅವೆಲ್ಲಾ ಇದರ ಕಕ್ಷೆಯಲ್ಲಿ ಬರುತ್ತವೆಂದು ಹೇಳುತ್ತಿದ್ದೇನೆ. ಅಷ್ಟೇ ಅಲ್ಲದೆ ತಾವು ಹೇಳುತ್ತಿರುವಂತೆ ರೈತರಿಗೆ ಬೇಕಾದ ಗೊಬ್ಬರ, ಇಂಪ್ಲಿಮೆಂಟ್ಸ್ ಮತ್ತು ಬಿತ್ತನೆ ಬೀಜ ಇಂಥವೂ ಬರುತ್ತವೆ.

ಶ್ರೀ ಕಾಗೋಡು ತಿಮ್ಮಪ್ಪ.—ಹಾಗಾದರೆ ಬತ್ತವನ್ನು ಮಿಲ್ ಮಾಡುವುದೂ ಇದರಲ್ಲಿ ಬರುತ್ತದೆಯೇ ?

ಶ್ರೀ ಕೆ. ಎಚ್. ಪಾಟೀಲ್.—ಅದು ಬರುವುದಿಲ್ಲ. ಇದರ ಕಕ್ಷೆಯಲ್ಲಿ ಯಾವ ಯಾವ ಕೈಗಾರಿಕೆಗಳು ಬರುತ್ತವೆಂಬುದಕ್ಕೆ ನ್ಯಾಷನಲ್ ಡೆವಲಪ್‌ಮೆಂಟ್ ಕಾರ್ಪೊರೇಷನ್ನಿನವರು ಒಂದು ಪಟ್ಟಿಯನ್ನೇ ಕೊಟ್ಟಿದ್ದಾರೆ. ಆ ಪಟ್ಟಿಯಲ್ಲಿರುವುದೆಲ್ಲಾ ಇದರ ಕಕ್ಷೆಯಲ್ಲಿ ಬರುತ್ತವೆ.

ಶ್ರೀ ಎಚ್. ಡಿ. ದೇವೇಗೌಡ.—ಇಲ್ಲಿ ತಾವು ಮಾನ್ಯ ಸಿದ್ದವೀರಪ್ಪನವರು ಪ್ರಭಾವಕ್ಕೆ ಒಳಗಾಗಿ ಆ ಸಕ್ಕರೆ ಕಾರ್ಖಾನೆಗೆ ಹಣವನ್ನು ಕೊಟ್ಟಿರುವುದು ಒಂದು ಹಸ್ತಕ್ಷೇಪ ಎಂತ ಹೇಳದಿದ್ದರೆ ವಿಧಿಯಿಲ್ಲ.

ಶ್ರೀ ಕೆ. ಎಚ್. ಪಾಟೀಲ್.—ಈಗಲೂ ಸಹಿತ ಅವರಿಗಿನ್ನೂ ಹಣವನ್ನು ಕೊಟ್ಟಿಲ್ಲ. ಈ ದಿವಸ ಮಾನ್ಯ ವಿರೋಧಪಕ್ಷದ ಸದಸ್ಯರು ಯಾರಾದರೂ ಸರಿ, ಆ ಪಕ್ಷದ ಲೀಡರವರಾದರೂ ಸರಿ ಆ ದಾವಣಗೆರೆಯ ಸಕ್ಕರೆ ಕಾರ್ಖಾನೆ ಇದರ ವ್ಯಾಪ್ತಿಯಲ್ಲಿ ಬರುವುದಿಲ್ಲ, ನಾವು ಮಾಡಿರುವುದು ತಪ್ಪು ಎಂದು ಅವರು ನನ್ನ ಕನ್‌ವಿನ್ಸ್ ಮಾಡಿದರೆ ನಾವು ಈ ವಿಚಾರದಲ್ಲಿ ಹದ್ದು ಮೀರಿ ವರ್ತಿಸಿದ್ದೇವೆಂದು ಹೇಳುವುದಾದರೆ ನಾಳೆಯೇ ನಾನು ಆ ಹಣವನ್ನು ಸ್ಟೇ ಮಾಡಿಸುತ್ತೇನೆ. ಆದರೆ ಅದನ್ನು ಮಾಡದೆ ವಿರೋಧಪಕ್ಷದವರು ಈ ರೀತಿ ಬೆದರಿಕೆಯಿಂದ ಬಹಿಷ್ಕಾರ ಹಾಕುವುದಕ್ಕೆ ಪ್ರಯತ್ನ ಮಾಡಿದರೆ ಅದನ್ನು ಎದುರಿಸುವುದಕ್ಕೆ ನಾವು ಇಲ್ಲಿ ಸಿದ್ಧವಾಗಿದ್ದೇವೆ.

ಶ್ರೀ ಎಚ್. ಡಿ. ದೇವೇಗೌಡ.—ರಾಜ್ಯದಲ್ಲಿರತಕ್ಕ ಎರಡೂವರೆ ಕೋಟಿ ಜನರಿಗೆ ಅನುಕೂಲ ಮಾಡಲು ಸ್ಥಾಪನೆ ಮಾಡಿದ ಸಂಸ್ಥೆ ಅದು. ಆದರೆ ಈ ದಿವಸ ಸರ್ಕಾರದವರು ಅದರ ಕಕ್ಷೆಯಲ್ಲಿ ರಾಜ್ಯದಲ್ಲಿ ಸ್ಥಾಪಿತವಾಗಿರತಕ್ಕ 14 ಸಕ್ಕರೆ ಕಾರ್ಖಾನೆಗಳನ್ನು ತರುತ್ತೇವೆಂದು ಹೇಳುವುದಾದರೆ – ಅಥವಾ ಈ ದಿವಸ ಈ ಸಭೆಯಲ್ಲಿ ಆಡಳಿತ ಪಕ್ಷಕ್ಕೆ 165 ಜನ ಸದಸ್ಯರ ಬೆಂಬಲ ಇದೆ ನಾವು ಏನು ಬೇಕಾದರೂ ಮಾಡಬಹುದೆಂದು ತಮ್ಮ ಅಭಿಪ್ರಾಯವಾಗಿದ್ದರೆ ಈ ಸಂಸ್ಥೆಯ ಮೂಲ ಉದ್ದೇಶವೇನಿತ್ತು ಅದನ್ನು ಹಾಳುಮಾಡಿದಂತೆಯೇ ಸರಿ.

ಶ್ರೀ ಎಂ. ಎಸ್. ಕೃಷ್ಣನ್.—ರಾಜ್ಯದಲ್ಲಿ ಯಾವ ಯಾವ ಕೈಗಾರಿಕೆಗಳಿಗೆ ಪ್ರಯಾರಿಟಿ ಕೊಡಬೇಕೆಂಬುದಕ್ಕೆ ಆ ಬಗ್ಗೆ ಸರ್ಕಾರದವರ ಧೋರಣೆ ಏನಿದೆ ಎಂಬುದನ್ನು ಹೇಳಿದ್ದಾರೆ. ಆ ಕೈಗಾರಿಕೆಗಳಿಗೆಲ್ಲಾ ಸಾಕಷ್ಟು ಹಣವನ್ನು ಪಡೆಯುವುದಕ್ಕೆ ಬೇರೆ ಫೈನಾನ್ಷಿಯಲ್ ಇನ್‌ಸ್ಟಿಟ್ಯೂಷನ್‌ಗಳಲ್ಲಿ ಅವಕಾಶವಿದೆ. ರೈತನಿಗೆ ಅನುಕೂಲ ಮಾಡತಕ್ಕ ಒಂದೇ ಉದ್ದೇಶದಿಂದ ಸ್ಥಾಪಿತವಾದ ಸಂಸ್ಥೆಯಿಂದ ಏಕೆ ಆ ಸಕ್ಕರೆ ಕಾರ್ಖಾನೆಗೆ ಹಣವನ್ನು ಕೊಡಿಸಿದ್ದು ಎಂಬುದಕ್ಕೆ ಒಂದು ನೇರವಾದ ಉತ್ತರ ಬೇಕಾಗಿದೆ. ಅಲ್ಲಿ ಮಾನ್ಯ ಮಂತ್ರಿಗಳು ಹೇಳುತ್ತಿರುವಂಥ ಒಂದು ಧಾಟಿಯಲ್ಲಿ ಉತ್ತರವನ್ನು ಆ ಪಾರ್ಲಿಮೆಂಟಿನಲ್ಲಾಗಲೀ ಅಥವಾ ಬೇರೆ ಯಾವ ರಾಜ್ಯದ ಶಾಸನ ಸಭೆಗಳಲ್ಲಾಗಲಿ ಹೇಳಿರುವುದಿಲ್ಲ. ಇದರ ಉದ್ದೇಶ ಟ್ರ್ಯಾಕ್ಟರುಗಳನ್ನು ತಯಾರಿಸುವುದು, ಫರ್ಟಿಲೈಜರುಗಳನ್ನು ತಯಾರಿಸುವುದು, ಪೆಸ್ಟಿಸೈಡ್ಸ್‌ಗಳನ್ನು ತಯಾರಿಸುವುದು ಇದರ ಉದ್ದೇಶವೇ ವಿನಾ ಈ ಹಣದಿಂದ ಟೆಕ್ಸ್‌ಟೈಲ್ಸ್, ಆಯಿಲ್ ಮಿಲ್ಸ್ ಮತ್ತು ಸಕ್ಕರೆ ಕಾರ್ಖಾನೆಗಳನ್ನು ತೆರೆಯುವುದಕ್ಕಲ್ಲ. ಮಂತ್ರಿಗಳು ಹೇಳುತ್ತಿರುವುದು ಕಾನೂನಿಗೆ ಸಮ್ಮತವಾದ ಉತ್ತರವಲ್ಲ.

ಶ್ರೀ ಕೆ. ಎಚ್. ಪಾಟೀಲ್.—ಮಾನ್ಯ ಸದಸ್ಯರು ಮತ್ತೆ ಮತ್ತೆ ಅದೇ ಮಾತನ್ನು ಹೇಳುತ್ತಿದ್ದಾರೆ, ಹೆಚ್ಚು ಪ್ರಗತಿಯಾಗಬೇಕೆಂಬುದೇ ನನ್ನ ಧೋರಣೆಯಾಗಿದೆ. ಈಗ ಮಾಡುವುದು ಸರಿಯಲ್ಲ, ಹೀಗೆ ಮಾಡಬೇಕು ಎಂದರೆ ವಿಚಾರ ಮಾಡಿ ಸೂಕ್ತ ಕಂಡ ರೀತಿಯಲ್ಲಿ ಮಾಡೋಣ. ವಕ್ಕಲತನಕ್ಕೆ ಅನುಕೂಲವಾಗುವಂತೆ ವಕ್ಕಲಿಗರು ಬೆಳೆದ ಮಾಲಿಗೆ ಪುರಸ್ಕಾರ ದೊರೆಯಲು ಯಾವ ಉದ್ದಿಮೆ ಮಾಡಿದರೆ ಅನುಕೂಲವಾಗುತ್ತದೆ ಎಂಬುದನ್ನು ಹೇಳಲಿ.

ಶ್ರೀ ಕಾಗೋಡು ತಿಮ್ಮಪ್ಪ.—ಅಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್‌ನವರು ಒಂದು ಲಿಸ್ಟ್ ಮಾಡಬೇಕಾಗಿತ್ತು.

ಶ್ರೀ ಕೆ. ಎಚ್. ಪಾಟೀಲ್.—ನೋಡದೆ ಅವರು ಹೇಳಿದರೆ ಏನು ಹೇಳುವುದು ? ಈಗ 16 ಇಂಡಸ್ಟ್ರೀಸ್ ಪ್ರಾಜೆಕ್ಟ್ ಮಾಡುತ್ತಿದ್ದಾರೆ, ಇನ್ನೂ ಹೆಚ್ಚು ಮಾಡುವರು. ಎಲ್ಲ ಸದಸ್ಯರನ್ನೂ ಕೇಳಿ ಪ್ರತಿಯೊಂದು ಜಿಲ್ಲೆಯಲ್ಲೂ ಮಾಡೋಣ, ಕೋಟಿಗಟ್ಟಲೆ ಹಣ ಬೇಕಾದರೂ 19 ಜಿಲ್ಲೆಗಳಲ್ಲೂ ಕ್ರಮಬದ್ಧವಾಗಿ ಮಾಡಬೇಕೆಂಬುದೇ ನಮ್ಮ ಉದ್ದೇಶ.

ಶ್ರೀ ಎಚ್. ಡಿ. ದೇವೇಗೌಡ.—ಬಡ್ಡಿ ವಿಚಾರ ಹೇಳಿ. ನಾವು ಕೆಲವು ನೇರವಾಗಿ ಅಪಾದನೆ ಮಾಡಿದ್ದೇವೆ. ಕಾಲಾವಕಾಶವಿಲ್ಲವೆಂದು ಅವಕ್ಕೆ ಉತ್ತರ ಹೇಳದಿದ್ದರೆ ನಾವು ಬಿಡುವಂತಿಲ್ಲ. ಬಡ್ಡಿ ಯಾವ ದರದಲ್ಲಿ ಕೊಡಬೇಕೆಂದು ಹೇಳಿದ್ದೀರಿ, 15 ಲಕ್ಷ ಇನ್‌ವೆಸ್ಟ್ ಮಾಡಿದ್ದೀರಿ.

ಶ್ರೀ ಕೆ. ಎಚ್. ಪಾಟೀಲ್.—ಸೌಜನ್ಯ ಮೂರ್ತಿಗಳಾಗಿದ್ದ ಶ್ರೀ ದೇವೇಗೌಡರು ಏಕೆ ಇಷ್ಟೊಂದು ಉತ್ಸುಕತೆ ಕಳೆದುಕೊಂಡು ಹೇಳುತ್ತಿದ್ದಾರೋ ತಿಳಿಯದು. ನಾನು ಒಂದೊಂದಾಗಿ ಎಲ್ಲವನ್ನೂ ಹೇಳುತ್ತೇನೆ. ಎಲ್ಲಾದರೂ ತಪ್ಪಿದ್ದರೆ ತೋರಿಸಿ, ಸರಿಪಡಿಸೋಣ. ಬಡ್ಡಿ ವಿಚಾರ ಕೇಳಿದರು. ಈ ದಿವಸ ಕೊಟ್ಟಿರುವ ಹಣ ಬಡ್ಡಿಯಿಂದ ಕೊಟ್ಟಿಲ್ಲ, ಬಡ್ಡಿಯಿಂದ ಕೊಟ್ಟಿದ್ದರೆ ಶ್ರೀ ದೇವೇಗೌಡರ ಪಕ್ಷ ಅಧಿಕಾರದಲ್ಲಿದ್ದಾಗ ಫರ್ಟಿಲೈಜರ್ ಕಾರ್ಪೊರೇಷನ್ನಿಗೆ ಕೊಟ್ಟಿದ್ದಾರೆ. ಕೆಲವು ಕಾಲಾವಧಿಗೆ ಕೊಡಲಾಗಿದೆ. ಹಲಕೋಟಿಗೆ ನಮ್ಮಲ್ಲಿರುವ ಹಣವೇ ಕೊಟ್ಟಿರುವುದು, ಬಡ್ಡಿಗೆ ತಂದು ಕೊಟ್ಟಿಲ್ಲ. ಅಗ್ರೋ ಇಂಡಸ್ಟ್ರೀಸ್‌ಗೆ ಶೇಕಡ 6 ರಿಂದ 9ರವರೆಗೆ ಬೇರೆ ಬೇರೆ ರೀತಿಯಿಂದ ಸಿಕ್ಕುವುದು. ರಿಜಿಸ್ಟ್ರಾರ್ ಮಂಜೂರು ಮಾಡಿ ಬೈಲಾ ತಿದ್ದುಪಡಿಮಾಡಿ ಕೊಡಬಹುದು ಎಂದಿದೆ. 12ರೊಳಗೆ ಇದ್ದರೆ ಕೇಳುವುದಿಲ್ಲ. ನಮ್ಮ ಹಿಡಿತದಲ್ಲಿ ಮಿಲ್ಲನ್ನಿಟ್ಟಿದ್ದೇವೆ.

ಶ್ರೀ ಎಚ್. ಡಿ. ದೇವೇಗೌಡ.—ಸಹಕಾರ ಸಂಘಗಳಲ್ಲಿ ತೊಡಗಿಸಿರುವುದಕ್ಕೆ ಸೇಕಡ ಆರೂ ಕಾಲರಂತೆ ಡಿವಿಡೆಂಡ್ ಎಷ್ಟು ಸಂಘಗಳಲ್ಲಿ ಬಂದಿದೆ ಎಂಬುದನ್ನು ತಿಳಿಸುವುದಾದರೆ ನಾನು ಅವರಿಗೆ ಶರಣುಹೋಗುತ್ತೇನೆ. ಈಗ ಸಹಕಾರ ಸಂಘಗಳು ಎಷ್ಟು ಪರ್ಸೆಂಟ್ ಡಿವಿಡೆಂಡ್ ಕೊಟ್ಟಿವೆ ಎಂಬುದನ್ನು ತಿಳಿಸಬೇಕು. 12 ಪರ್ಸೆಂಟ್ ಡಿವಿಡೆಂಡ್ ಕೊಡದಿದ್ದವರ ಮೇಲೆ ಸರ್‌ಛಾರ್ಜ ಮಾಡುತ್ತೀರಾ ? ಇದರ ಬಗ್ಗೆ ಆಶ್ವಾಸನೆ ಕೊಡುವಿರಾ ?

ಶ್ರೀ ಕೆ. ಎಚ್. ಪಾಟೀಲ್.—ಅವರಿಗೆ ರಾಜ್ಯದ ಬೊಕ್ಕಸದ ಬಗ್ಗೆ ಬಹಳ ಕಳಕಳಿಯಿದೆ. ಎಷ್ಟು ಸಹಕಾರ ಸಂಘಗಳು ಹೆಚ್ಚು ಡಿವಿಡೆಂಡ್ ಕೊಡಲು ಮುಂದೆ ಬಂದಿವೆ ಎಂದು ಕೇಳಿದ್ದಾರೆ. ಕೊಡುವುದಕ್ಕಾಗದಿದ್ದರೆ ಮುಂದಾದರೂ ಕೊಡಬೇಕು. ಸಹಕಾರ ಸಂಘಗಳನ್ನು ಬೆಳೆಸಲು ಪ್ರಯತ್ನ ನಡೆದಿದೆ. ಬರೀ ಹಣ ಹೂಡುವ ಕೆಲಸ ಮಾಡಿಲ್ಲ.

ಶ್ರೀ ಎಚ್. ಡಿ. ದೇವೇಗೌಡ.—ಇದು ಶ್ರೀ ಕೆ. ಎಚ್. ಪಾಟೀಲರ ಹಣವಲ್ಲ.

ಶ್ರೀ ಕೆ. ಎಚ್. ಪಾಟೀಲ್.—ಶ್ರೀ ದೇವೇಗೌಡರಿಗೆ ಹಣದ ವಿಚಾರದ ಬಗ್ಗೆ ಹೆಚ್ಚು ಆಸಕ್ತಿಯಿದೆ. 12 ಪರ್ಸೆಂಟ್ ಬಗ್ಗೆ ಮಿಸಲೀಡ್ ಮಾಡುವರು ಎಂಬ ಅಭಿಪ್ರಾಯ ಅವರಿಗೇಕೆ ? ಅವರು ಬೆಳವಣಿಗೆಯಾದ ಸಂಘವನ್ನು ನೋಡಿಲ್ಲ. ಸರಕಾರದ ಸಹಾಯವಿಲ್ಲದೆ ಬೆಳೆದ ಸಂಘಗಳ ಬಗ್ಗೆ ಮಾಹಿತಿ ಅವರಿಗಿಲ್ಲ. ಈ ದಿವಸ ಒತ್ತಿ ಒತ್ತಿ ಹೇಳುವುದು, ಮಂತ್ರಿಯಾಗಿ ಹೇಳುವುದು, ಸಂಘಗಳು 12 ಪರ್ಸೆಂಟ್ ಡಿವಿಡೆಂಡ್ ಕೊಡುವಂತೆ ಮಾಡಲು ಪ್ರಯತ್ನ ಮಾಡುತ್ತಿದ್ದೇನೆ, ಕೊಡಬೇಕು ಅಷ್ಟು, ಎಲ್ಲಾ ಕಡೆ ಆಸ್ತೆ ವಹಿಸುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ.—ಅಷ್ಟು ಕೊಡದಿದ್ದರೆ ಸರ್‌ಛಾರ್ಜ ಮಾಡುತ್ತೇವೆಂದು ಹೇಳಿ.

ಶ್ರೀ ಕೆ. ಎಚ್. ಪಾಟೀಲ್.—ಈ ದಿವಸ ಕೂಡ ಸರ್‌ಛಾರ್ಜ್ ಮಾಡುತ್ತೇವೆ, ಕಾಯಿದೆ ಕಾನೂನು ನೋಡಿ. ಬಲ್ಲವರಿಂದ ಕೇಳಿ ತಿಳಿದು ತಪ್ಪು ಮಾಡಿದ್ದರೆ ಈ ದಿವಸವೇ ಸರ್‌ಛಾರ್ಜ್ ಮಾಡುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ.—12 ಪರ್ಸೆಂಟ್ ಡಿವಿಡೆಂಡ್ ಕೊಡಿಸುವಿರಾ ?

ಶ್ರೀ ಕೆ. ಎಚ್. ಪಾಟೀಲ್.—ಕೊಡಿಸುತ್ತೇನೆ. ಬಡವರು ಹಣ ಇಟ್ಟಿದ್ದಾರೆ. ಈಗ ನಡೆದಿರುವ ಪ್ರಗತಿ ನೋಡಿ ಸಮಾಧಾನವಾಗಿದೆ.

ಶ್ರೀ ಬಾಪೂಗೌಡ ರಾಯಪ್ಪ.—ಗದಗ ಕಾಟನ್ ಸೊಸೈಟಿ ಎಷ್ಟು ಡಿವಿಡೆಂಡ್ ಕೊಟ್ಟಿದೆ ?

ಶ್ರೀ ಕೆ. ಎಚ್. ಪಾಟೀಲ್.—ಆರೂಕಾಲು ರೂಪಾಯಿ ಕೊಟ್ಟಿದೆ. ಹೆಚ್ಚು ಕೇಳುವುದಕ್ಕೆ ಹೋಗಿಲ್ಲ, ಜನ ಅಲ್ಲಿ ತ್ಯಾಗಮಾಡುತ್ತಿದ್ದಾರೆ, ನಮ್ಮ ತೀರ್ಮಾನ ಕೇಳಿ. ಅದೊಂದು ಮಾದರಿ ಸಂಸ್ಥೆ. ಬರೀ ಡಿವಿಡೆಂಡ್ ಕೊಟ್ಟಿಲ್ಲ, ಲಾಭ ಪ್ರತಿಯೊಂದರ ಮೇಲೂ ಬರುವಂತೆ ಮಾಡಿದ್ದಾರೆ. ನನ್ನ ಸಂಘವನ್ನು ಹಿಂದಿನವರು ಸೂಪರಸೀಡ್ ಮಾಡಿದರು. ನಂತರ ಅದು ರದ್ದಾಯಿತು, ವಿತ್‌ಡ್ರಾ ಮಾಡಿಕೊಂಡರು ಆಮೇಲೆ.

ಶ್ರೀ ದೇವೇಗೌಡರು ಇನ್ನೊಂದು ವಿಚಾರವನ್ನು ದೀರ್ಘವಾಗಿ ಹೇಳಿದ್ದಾರೆ. ಆಗ್ರೋ ಇಂಡಸ್ಟ್ರೀಸ್ ಕಾರ್ಪೋರೇಷನ್ ಲಿಕ್ವಿಡೇಟ್ ಆಗಿದೆ, ಪ್ರಾರಂಭದಿಂದ ಅಲ್ಲಿರುವುದನ್ನೆಲ್ಲಾ ತೆಗೆದುಕೊಂಡು ಹೋಗಿದ್ದಾರೆ ಎಂದು ಹೇಳಿದ್ದಾರೆ. ಇಷ್ಟು ದೀರ್ಘವಾಗಿ ಇತರರು ಹೇಳಿದ್ದರೆ ನಾನು ಅಷ್ಟು ವಿಚಾರ ಮಾಡುತ್ತಿರಲಿಲ್ಲ. ಆದರೆ ವಿರೋಧ ಪಕ್ಷದ ನಾಯಕರು ಹೇಳುವ ಮಾತಿಗೆ ಮನ್ನಣೆ ಕೊಡುತ್ತೇನೆ.

4-00 P.M.

ಇವರ ಮಾತನ್ನು ನಂಬಿ ಮೂರು ಕೋಟಿ ಜನಾಂಗ ನನ್ನ ಬಗ್ಗೆ ಏನು ಅಭಿಪ್ರಾಯವನ್ನು ತಾಳಿಯಾರು ? ಮಾನ್ಯ ದೇವೇಗೌಡರು ಗವರ್ನಮೆಂಟ್ ಆರ್ಡರು ನಂಬರ್ ಕೊಟ್ಟೇ ಕೊಡುತ್ತೇನೆಂದು ಹೇಳಿದರು. ಆಗ್ರೋ ಇಂಡಸ್ಟ್ರೀಸ್ ಕಾರ್ಪೋರೇಷನ್ ಕೈಯೊಳಗಿಂತ, ಕೋ-ಅಪರೇಟಿವ್ ಮಿಲ್‌ಗೆ ಕಬ್ಬಿಣ ಅಲಾಟ್ ಆಗಿದೆ. ಮಿಲ್ಲಿನಲ್ಲಿ ಬಲ್ಲವರು ಇದ್ದಾರೆ, ತಜ್ಞರು ಇದ್ದಾರೆ, ಕಬ್ಬಿಣವನ್ನು ಎಲ್ಲಿಂದ ತೆಗೆದುಕೊಳ್ಳಬೇಕು ಎನ್ನುವುದು ಅವರಿಗೆ ಗೊತ್ತಿಲ್ಲವೇ ? ಆಗ್ರೋ ಇಂಡಸ್ಟ್ರೀಸ್‌ಗೆ ಬೇಕಾಗುವ ಕಬ್ಬಿಣ್ಣ ದೊಡ್ಡ ದೊಡ್ಡ 75-75, 6 ಇಂಚಿನ ಚಾನಲ್ಸ್ 65-65 ಇಂಚಿನ ಆಂಗಲ್ಸ್ ಬೇಕಾಗುತ್ತದೆ. ಎಲ್ಲಾ ಕಡೆಗೆ ಪರ್ಮಿಟ್ ಕೊಟ್ಟರೂ ಸಹಿತ, ಮದ್ರಾಸ್, ಕಲ್ಕತ್ತ, ಅಲಹಾಬಾದ್‌ಗೆ ಕೊಟ್ಟಿದ್ದಾರೆ, ಬೊಂಬಾಯಿಗೆ ಕೊಟ್ಟಿದ್ದಾರೆ, ಬೆಂಗಳೂರಿಗೆ ಕೊಟ್ಟಿದ್ದಾರೆ, ಸರಿಯಾಗಿ ಕಬ್ಬಿಣ ಸಿಕ್ಕುವುದಿಲ್ಲ, ಟ್ರಾನ್ಸಿಟ್‌ನಲ್ಲಿ ಇದೆಯೆಂದು ಚೇರ್ಮನ್ ಬರೆಯುತ್ತಾರೆ. ಇಷ್ಟಾದರೂ ಸಹಿತ, ಇಂಥ ತಪ್ಪು ವರದಿ ಯಾರು ಕೊಟ್ಟಿದ್ದಾರೋ ಅವರಿಗೆ ಶಿಕ್ಷೆ ಮಾಡುತ್ತೇನೆ, ಮತ್ತು ಇಂಥ ತಪ್ಪು ವರದಿಯನ್ನು ಕೊಡಬಾರದು ಎಂದು ಹೇಳುತ್ತೇನೆ. ಕ್ಯಾಬಿನೇಟ್‌ನಲ್ಲಿಯೂ ಸಹಿತ ಈ ವಿಷಯವನ್ನು ತಂದಿದ್ದೇವೆ. ಆದ್ದರಿಂದ ನಾನು ಈ ಸದನದ ಸಮಯವನ್ನು ಪೋಲು ಮಾಡುವುದಕ್ಕೆ ಇಚ್ಛೆಪಡುವುದಿಲ್ಲ. 6 ಟನ್ ಎರಡು ಇಂಚಿನ ಚಾನಲ್ಸ್ ಆಗ್ರೋ ಇಂಡಸ್ಟ್ರೀಸ್ ಕಾರ್ಪೋರೇಷನ್‌ಗೆ ನಾವು ಕೊಡುತ್ತೇವೆ. ಬಹಳ ದಿವಸದಿಂದ ಇದು ಹಾಗೆಯೇ ಉಳಿದಿತ್ತು. ಅವರಿಗೆ ಬೇಕಾಗಿರುವುದು 90 ಟನ್, ಇದನ್ನು ಬೇರೆ ಬೇರೆ ಭಾಗಗಳಿಂದ ಪಡೆದು ಟ್ರಸಸ್ ಮಾಡುತ್ತೇವೆ. ಟ್ರಸಸ್ ಮಾಡುವಾಗ 400-500 ರೂಪಾಯಿಗಳು ಆಗುತ್ತದೆಂದು ಮಾನ್ಯ ದೇವೇಗೌಡರು ಹೇಳಿದರು. ಆದರೆ ನಾವು 250 ರೂಪಾಯಿಗಳಿಗೆ ಟ್ರಸಸ್ ಕಂಟ್ರ್ಯಾಕ್ಟ್ ಮಾಡಿದ್ದೇವೆ. ಟ್ರಸಸ್ ಮಾಡಲಿಕ್ಕೆ ಕಂಟ್ರಾಕ್ಟ್ ಮಾಡಿದವರು ಯಾರು ? ಕೊಟ್ಟವರು ಯಾರು ? 250 ರೂಪಾಯಿಗಳಿಗೆ ಕೊಟ್ಟದ್ದು ನಿಜವೇ ? 50 ರೂಪಾಯಿಗಳಿಗೆ ಕಡಿಮೆ ಕೊಡಿ ಎಂದು ಕೇಳಿದವರು ಯಾರು ? ಇವರು ಸೊಸೈಟಿಯವರು. 225 ರೂಪಾಯಿಗಳಿಗೆ ಮಾಡಿಕೊಡುತ್ತೇವೆಂದು ಹೇಳಿದವರು, ಕಂಟ್ರಾಕ್ಟರ್ ನೀವಿಯವರು, ಹುಬ್ಬಳ್ಳಿಯವರು, ಗದಗಿನ ಶೆಟ್ಟರ್ ಅವರು. ಮಾನ್ಯ ದೇವೇಗೌಡರು ಬೇಡ ಎಂದರೂ ಸೊಸೈಟಿಯವರು ಮಾಡುವುದರಿಂದ ಅವರಿಗೆ ಕೊಡಿ ಎಂದು ಹೇಳಿದೆ. ಈಗ ಅವರು ಮಾಡುವುದು 20-30 ಟ್ರಸಸ್. ಅವರು ಎಫಿಷಿಯಂಟ್ ಆಗಿ ಮಾಡದೆ ಹೋದರೆ, ಬೇರೆ ಉದ್ಯಮಿಗಳಿಗೆ ಕೊಡಬಹುದು. ಮಾನ್ಯ ದೇವೇಗೌಡರು ಇವುಗಳನ್ನು ಬಂದ್ ಮಾಡಿ ಎಂದರೆ ಆಜ್ಞೆ ಮಾಡುತ್ತೇನೆ. ಸೊಸೈಟಿಗೆ ಕೊಟ್ಟಂಥ ಕಂಟ್ರ್ಯಾಕ್ಟಿನಿಂದ ಆಗ್ರೋ ಇಂಡಸ್ಟ್ರೀಸ್‌ಗೆ ಲುಕ್ಸಾನು ಆಗುತ್ತದೆ ಎನ್ನುವ ಭಾವನೆಯನ್ನು ದಯವಿಟ್ಟು ತೆಗೆದುಹಾಕಬೇಕು ಎಂದು ಹೇಳುತ್ತೇನೆ.

ಇನ್ನೊಂದು ದೊಡ್ಡ ಮಾತನ್ನು ಹೇಳಿದರು. ಕೆ. ಎಚ್. ಪಾಟೀಲ್, ಮಂತ್ರಿಯವರು ಒಂದು ಟ್ರಕ್ಕಿಗೆ 80 ರೂಪಾಯಿನಂತೆ ಟ್ರಸಸ್ ಕಳುಹಿಸಲಿಕ್ಕೆ ಹೇಳಿದರು ಎಂದು. ಈ ರೀತಿ ಆದರೆ ಅದು ತಪ್ಪು ಆಗುತ್ತದೆಂದು ಎಂದು ನಾನು ಹೇಳಿದೆ. ಮಾನ್ಯ ದೇವೇಗೌಡರು ತಪ್ಪು ಹೇಳಿರಲಾರರು. ನಾನು ತಪ್ಪು ಹೇಳಿದ್ದರೆ, ಆಗಲೇ ಕ್ಷಮೆಯಾಚನೆ ಮಾಡುತ್ತಿದ್ದೆ. 80 ರೂಪಾಯಿಗೆ ಟ್ರಕ್ ಅನ್ನು ಕಳುಹಿಸಿದ್ದರೆ ಅಧಿಕಾರಿಯಾಗಲೀ, ಕ್ಲರ್ಕ್ ಆಗಲೀ ಅಲ್ಲಿ ಹುದ್ದೆಯನ್ನು ಇಟ್ಟುಕೊಂಡಿರುವುದಕ್ಕೆ ನಾಲಾಯಕ್ ಆಗುತ್ತಾನೆ. 10-20 ರೂಪಾಯಿಗಳನ್ನು ಕಡಿಮೆ ಮಾಡಿದ್ದರೆ ನಾನು ಒಪ್ಪಬಹುದು. 80 ರೂಪಾಯಿಗೆ ಟ್ರಕ್ ಕಳುಹಿಸುತ್ತಾರೆಂದರೆ, ಪೆಟ್ರೋಲ್ ಖರ್ಚು ಎಷ್ಟು ಬರುತ್ತದೆ ? ಅದಕ್ಕೆ ಬೇಕಾದಂಥ ಡ್ರೈವರ್ ಖರ್ಚು ಎಷ್ಟಾಗುತ್ತದೆ ? ಹರುಕು-ಮುರುಕು ಟೈರ್ ಹಾಕಿಕೊಂಡಂಥ

ಸಂಸ್ಥೆಯವರೇ ಇಂಥಾದ್ದಕ್ಕೆ ಹಣವನ್ನು ಹೇರಳವಾಗಿ ಖರ್ಚು ಮಾಡಬೇಕಾದರೆ, 80 ರೂಪಾಯಿಗಳಿಗೆ ಟ್ರಕ್ಕನ್ನು ಕಳುಹಿಸುವಾರೆಯೇ ? ಅವರು ಕೊಟ್ಟಂಥ ಮಾಹಿತಿ ತಪ್ಪು. ಈ ಹೇಳಿಕೆಯನ್ನು ಬರೆದುಕೊಳ್ಳುವಾಗ ಪರ್ ಟ್ರಕ್ ಎಂದು ಬರೆದುಕೊಂಡಿದ್ದಾರೆ. 10 ಟ್ರನಸ್ ಅನ್ನು ಉತ್ತವ ಟ್ರಕ್ ಒಯ್ಯಬೇಕಾದರೆ ಧಾರವಾಡ ಒಂದು ಟ್ರಕ್‌ಗೆ 80 ರೂಪಾಯಿ ಹಾಕಿದ್ದರೆ, ಸೊಸೈಟಿಯವರು ಒಪ್ಪಲಿಲ್ಲ ಎಂದರೆ ಕಡಿಮೆ ಮಾಡಿ, 60-65 ರೂಪಾಯಿ ಮಾಡಿ ಎಂದು ಹೇಳುತ್ತಿದ್ದೆ.

ಶ್ರೀ ಎಚ್. ಡಿ. ದೇವೇಗೌಡ.—ನಾನು ಇದರ ಬಗ್ಗೆ ಸಮರ್ಥನೆ ಮಾಡಿಕೊಳ್ಳುವುದಕ್ಕೆ ಹೊರಟಿದ್ದೇನೆ. ಇದಕ್ಕೆ ಸಂಬಂಧಪಟ್ಟ ಫೈಲನ್ನು ಸಭೆಯ ಮುಂದೆ ಇಡಿ, ಇನ್ನು ಏನೂ ಮಾಡಬೇಡಿ. ಟ್ರನಸ್ ವ್ಯವಹಾರದಲ್ಲಿ ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್‌ನಿಂದ ಉಪಯೋಗಿಸಿಕೊಂಡಿರತಕ್ಕ ಸ್ಟೀಲ್ ಏನು ಇದೆ, ಅವರ ಹತ್ತಿರ ಎಲ್ಲಾ ಸೋರ್ಸ್‌ನ ಅಕೌಂಟ್ ಇದೆ, ಅದನ್ನು ಸಭೆಯ ಮುಂದೆ ಪರಿಶೀಲನೆ ಮಾಡುವುದಕ್ಕೆ ಇಡಿ. ತಾವು ಅದನ್ನು ಪರಿಶೀಲನೆ ಮಾಡಿ, ನಾನು ಹೇಳುವುದರಲ್ಲಿ ಉತ್ಪ್ರೇಕ್ಷೆ ಇದ್ದರೆ, ನಾನು ಕ್ಷಮೆ ಕೇಳಲಿಕ್ಕೆ ತಯಾರಿದ್ದೇನೆ. I don't want the Hon. Minister to consume more time. I want that the file be put before the House.

ಶ್ರೀ ಕೆ. ಎಚ್. ಪಾಟೀಲ್.—ಮಾನ್ಯ ವಿರೋಧ ಪಕ್ಷದ ನಾಯಕರು, ಫೈಲ್ ಕೊಡಬೇಕು ಎಂದು ಹೇಳಿದ್ದಾರೆ. ಫೈಲ್ ನನ್ನದು ಯಾವುದೂ ಇಲ್ಲ, ಕಂಪನಿಗೆ ಸಂಬಂಧಪಟ್ಟ ಫೈಲ್ ಕೊಡಬೇಕಾದರೆ ರಿಪೋರ್ಟ್ ಕಾಲ್‌ಫಾರ್ ಮಾಡಿ ಕೊಡಬೇಕು. ಮಾನ್ಯ ದೇವೇಗೌಡರು ಸ್ವತಃ ಪಬ್ಲಿಕ್ ಅಕೌಂಟ್ಸ್ ಕಮಿಟಿಯ ಸದಸ್ಯರಾಗಿರುವುದರಿಂದ ಅವರಿಗೆ ಅದನ್ನು ನೋಡುವುದಕ್ಕೆ ಅಧಿಕಾರವಿದೆ.

ಶ್ರೀ ಕೋಣಂದೂರು ಲಿಂಗಪ್ಪ.—ಫೈಲನ್ನು ತರಿಸಬಹುದಲ್ಲ.

ಶ್ರೀ ಎಚ್. ಡಿ. ದೇವೇಗೌಡ.—ವಿರೋಧ ಪಕ್ಷದ ನಾಯಕರು ಮನಸ್ಸಿಗೆ ಬಂದಹಾಗೆ ವಿಷಯ ತಿಳಿಯದೆ ಹೇಳುತ್ತಾರೆ ಎಂದಲ್ಲ. ಮಂತ್ರಿಗಳಿಗೆ ಪ್ರಿವಿಲೇಜ್ ಇದೆ, ರಕ್ಷಣೆ ಇದೆ. ಎರಡು ವಿಷಯದಲ್ಲಿ ನಿಮ್ಮ ಮೇಲೆ ಪ್ರಿವಿಲೇಜ್ ಮೋಷನ್ ಬರುತ್ತದೆ. ಈ ರೀತಿ ಸಭೆಯಲ್ಲಿ ಭಾಷಣ ಮಾಡಿ ಸಭೆಯನ್ನು ತಪ್ಪು ಕಲ್ಪನೆಯಲ್ಲಿ ಏತಕ್ಕೆ ತೆಗೆದುಕೊಂಡು ಹೋಗುತ್ತಿದ್ದೀರಿ ? ಅದಕ್ಕೇ ನಾನು ಫೈಲು ತರಬೇಕು ಎಂದು ಹೇಳುವುದು, ಫೈಲ್ ಇಡಬೇಕು ಎಂದು ಹೇಳುವ ಉದ್ದೇಶ, ಕೃಷ್ಣ ಡೈರಿಗೆ ಸಂಬಂಧಪಟ್ಟಂತೆ ತಾವು ಉತ್ತರ ಹೇಳಿದ್ದೀರಿ. ಸಭೆಗೆ ಮಿಸ್‌ಲೀಡಿಂಗ್ ಸ್ಟೇಟ್‌ಮೆಂಟ್ ಹೇಗೆ ಬರುತ್ತದೆ ಎಂದರೆ ಕೃಷ್ಣ ಡೈರಿಯಲ್ಲಿ ನನ್ನವರು ಯಾರೂ ಇಲ್ಲ ಎಂದು ಕೆ. ಎಚ್. ಪಾಟೀಲರು ಹೇಳುವುದು ಇದೆ, ಅವರ ಅಸೆಟ್ಸ್ ಲಯಬಿಲಿಟೀಸ್ ಕೊಟ್ಟಿದ್ದಾರೆ. ಕೃಷ್ಣ ಡೈರಿಯಲ್ಲಿ ಇವರಿಗೆ ಸಂಬಂಧಪಟ್ಟವರು ಯಾರು ಯಾರು ಇದಾರೆ ಎಂದು ವಿಧಾನಪರಿಷತ್ತಿನಲ್ಲಿ ಇವರು ಕೊಟ್ಟಿದ್ದ ಸ್ಟೇಟ್‌ಮೆಂಟ್ ಇದೆ. ಮಾತನಾಡತಕ್ಕ ಕಾಲದಲ್ಲಿ ಸಭೆಯನ್ನು ತಪ್ಪುದಾರಿಗೆ ತಗೆದುಕೊಂಡು ಹೋಗುವುದು ಬೇಡ. ವೆರಿಫೈ ಮಾಡಿ, ಅಸತ್ಯ ಇದ್ದರೆ, ನೀವು ಕೊಡತಕ್ಕ ಶಿಕ್ಷೆಗೆ ನಾನು ಗುರಿಯಾಗುತ್ತೇನೆ.

ಶ್ರೀ ಕೆ. ಎಚ್. ಪಾಟೀಲ್.—ನನ್ನ ಮೇಲೆ ಮಾನ್ಯ ವಿರೋಧಪಕ್ಷದ ನಾಯಕರು ಪ್ರಿವಿಲೇಜ್ ಮೋಷನ್ ಬರುತ್ತಿದೆ ಎಂದು ಹೇಳುತ್ತಿದ್ದಾರೆ. ಪ್ರಿವಿಲೇಜ್ ಮೋಷನ್ ಏತಕ್ಕೆ ಬರುತ್ತದೆ ? ಕೃಷ್ಣ ಡೈರಿಯಲ್ಲಿ ಕೆ. ಎಚ್. ಪಾಟೀಲರ ಸಂಬಂಧೀಕರು ಇದ್ದಾರೆ ಎಂದು ದೇವೇಗೌಡರು ಹೇಳಿದರು. ಮೇಲಿನ ಸಭೆಯಲ್ಲಿ ಇತರ ಪಕ್ಷದವರೇ ಹೇಳಿದ್ದಾರೆ. ಅಂದೂ ಹೇಳುತ್ತೇನೆ, ಇಂದೂ ಹೇಳುತ್ತೇನೆ. ತಾವು ಬರೆದದ್ದು ಪ್ರಿವಿಲೇಜ್ ಆಗುವುದಿಲ್ಲ ಎಂದು. ಒಂದು ಟ್ರಕ್‌ಗೆ 80 ರೂಪಾಯಿ ಕೊಡುವುದು ಪ್ರಿವಿಲೇಜ್ ಮೋಷನ್ ಆಗುತ್ತದೆಯೇ ? ಅದಕ್ಕೆ ಅನುಮತಿ ಕೊಡುವುದು, ಬಿಡುವುದು ಮಾನ್ಯ ಸ್ಪೀಕರ್ ಅವರಿಗೆ ಬಿಟ್ಟದ್ದು. ಅವರಿಗೆ ಅಧಿಕಾರ ಇರುತ್ತವೆ. ಈಗಗಾಲೇ ಹೇಳಿದ್ದೇನೆ, ಎಷ್ಟೇ ದೊಡ್ಡ ಹುದ್ದೆಯಲ್ಲಿ ಇರಲಿ ಸ್ಥಾನಮಾನ ಇರಲಿ ದೇವೇಗೌಡರು ಜವಾಬ್ದಾರಿಯುತವಾಗಿ ಟೀಕೆ ಮಾಡುವುದನ್ನು ಕಲಿಯಬೇಕು. 80 ರೂಪಾಯಿ ಟ್ರಕ್ ಕಳುಹಿಸಿದ್ದಾರೆ, ಇದರಲ್ಲಿ ಮಂತ್ರಿಗಳ ಹಸ್ತಕ್ಷೇಪ ಇರುತ್ತದೆ ಎಂದು ಹೇಳಿದರೆ ಇದು ನಿಜವಾಗಿ ಪ್ರಿವಿಲೇಜ್ ಆಗುತ್ತದೆಯೇ ? ಇಂಥಾದ್ದನ್ನು ಮಾನ್ಯ ಸಭಾಪತಿಗಳಿಗೆ ಬರೆದುಕೊಡುವ ಅವಶ್ಯಕತೆ ಇಲ್ಲ. ಆದ್ದರಿಂದ ತ್ವರಿತವಾಗಿ ಮುಂದಿನ ಕಾರ್ಯಕ್ರಮಗಳನ್ನು ನಡೆಸಬೇಕು.

ಶ್ರೀ ಎಚ್. ಡಿ. ದೇವೇಗೌಡ.—80 ರೂಪಾಯಿ ಒಂದು ಟ್ರಕ್ಕಿನಲ್ಲಿ 10 ಟ್ರಸ್ಸುಗಳನ್ನು ತೆಗೆದುಕೊಂಡು ಹೋಗಬಹುದು. ಒಂದೊಂದು ಟ್ರಸ್ಸಿಗೆ 80ರೂಪಾಯಿ ಫಿಕ್ಸ್ ಮಾಡಿದ್ದಾರೆ ಇವೊತ್ತು ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ ಟ್ರಕ್ಕಿಗೆ ಪರ್ ಮೈಲ್ 6ರೂಪಾಯಿ hire charges ನಿಬಂಧನೆ ಹಾಕಿದ್ದಾರೆ. ಅದರ ಪ್ರಕಾರ 300 ಚಿಲ್ಲರೆ ಮೈಲು ಹೋಗುವುದಕ್ಕೆ ಸುಮಾರು 2 ಸಾವಿರ ರೂಪಾಯಿ ಹಾಕುವುದಕ್ಕೆ ಬದಲು ಒಂದೊಂದು ಟ್ರಸ್ಸಿಗೆ 80 ರೂಪಾಯಿ ನಿಗಧಿಮಾಡಿದ್ದು ಹಸ್ತಕ್ಷೇಪವಲ್ಲವೇ ?

ಶ್ರೀ ಕೆ. ಎಚ್. ಪಾಟೀಲ್.—2000 ರೂಪಾಯಿಯಲ್ಲಿ ಒಂದು ಬಿಲ್ಲೆ ಕಡಿಮೆ ಮಾಡಿದರೂ ಅದನ್ನು ನಮ್ಮ ಗಮನಕ್ಕೆ ತರಬೇಕು.

ಶ್ರೀ ಎಚ್. ಡಿ. ದೇವೇಗೌಡ.—ಸಭೆ ಗಮನಕ್ಕೆ ತರಬೇಕು ಎಂದರೆ ತಾವು ಫೈಲ್ ತರಿಸ ಬೇಕು. ಇವೊತ್ತು ನಾನು ಹೇಳುತ್ತೇನೆ ಇಂಥ ಬೇಸ್‌ಲೆಸ್ ಅಲಗೇಷನ್ ನಾನು ಮಾಡಿದರೆ I want I will be unifit to represent this house that file to be summoned and persued by the Hon. Speaker. I have got a right to represent in this House as the Leader of the Opposition. I want that file to be perused by the Hon. Speaker and then a ruling given by the Speaker. I do not want anything beyond this. ಫೈಲನ್ನು ಒಂದು ಗಂಟೆಯೊಳಗೆ ತರಿಸಬೇಕು.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಮಂತ್ರಿಗಳು ಮಾತನಾಡುತ್ತಾ ಫೈಲಿನ ಬಗ್ಗೆ ಹೇಳಿದ್ದಾರೆ. ಅದು ಬೇರೆ ಸಂಸ್ಥೆಗೆ ಸೇರಿದ್ದು ಅದನ್ನು ನಾವು ಹೇಗೆ ತರಿಸುವುದಕ್ಕೆ ಸಾಧ್ಯ ಎಂದು ಹೇಳಿದರು.

ಶ್ರೀ ಕೆ. ಎಚ್. ಪಾಟೀಲ್.—ನನ್ನ ಹತ್ತಿರ ಫೈಲ್ ಹಾಜರು ಮಾಡಲಿಕ್ಕೆ, ಬಿಡಲಿಕ್ಕೆ ಹೇಳುವ ಅಧಿಕಾರ ಇದೆ. ಕಾರ್ಪೊರೇಷನ್‌ನಲ್ಲಿರುವ ಫೈಲ್ ಬಗ್ಗೆ ಅದನ್ನು ಹಾಜರಿ ಮಾಡಲಿಕ್ಕೆ ಬಿಡಲಿಕ್ಕೆ ಅದನ್ನು ತರಿಸುವುದಕ್ಕೆ ವಿಚಾರವಾಡಿ ನೋಡಿಕೊಂಡು, ಖಾತರಿ ಮಾಡಿಕೊಂಡು ಹೇಳಬೇಕಾಗುತ್ತದೆ. ಅದು ಮಂತ್ರಿ ಕೆಲಸ ಮಾಡುವವರ ಹೊಣೆ.

ಶ್ರೀ ಎಚ್. ಡಿ. ದೇವೇಗೌಡ.—ಫೋನಿನಲ್ಲಿ ಹೇಳಿ, ಕೆಲಸ ಮಾಡುವುದಲ್ಲ, I want that file, he has charged that I am saying something irrelevant ನಾನು ಈ ಜಾಗದಲ್ಲಿ ಕೂತಿರುವುದು ಇಂಥಾ ಪರಿಸ್ಥಿತಿ ಬಂದಾಗ ನಮ್ಮ ಹಕ್ಕನ್ನು ಕಾಪಾಡಿಕೊಳ್ಳುವುದು ನಮ್ಮ ಧರ್ಮ. ಒಂದೊಂದು ಸಾರಿ ಮುಸ್ಸಾಂಜೆ ವೇಳೆ ಅರಳಿ ಕಟ್ಟೆ ಸುತ್ತುತ್ತಾರೆ, ಕೊನೆಗೆ ಅರಿಸಿನ ಹಚ್ಚಿಕೊಂಡು ಕುಂಕುಮ ಹಾಕಿಕೊಂಡು ಸುತ್ತುತ್ತಾರೆ, ಅದು ಯಾವ ವರ್ಗದ ಜನ ? ಸಭಾಧ್ಯಕ್ಷರೇ, ಪಾತಿವ್ರತ್ಯ ಧರ್ಮ ಹೇಳತಕ್ಕ ಕಾಲದಲ್ಲಿ ಇದನ್ನೆಲ್ಲಾ ಅನುಸರಿಸಬೇಕಾಗುತ್ತದೆ, ಆದ್ದರಿಂದ ಈ ಎಲ್ಲಾ ವಿಷಯದ ಬಗ್ಗೆ ಸಮರ್ಥನೆ ಮಾಡತಕ್ಕ ಕಾಲದಲ್ಲಿ ಸಭಾಧ್ಯಕ್ಷಣಿಯವರೇ, ಸಂಬಂಧಪಟ್ಟ ಫೈಲ್ ಬರಲಿ, ತಾವು ವೆರಿಫೈ ಮಾಡಿ. ಪಾತಿವ್ರತ್ಯ ಧರ್ಮವನ್ನು ಕೇಳಿಕೊಂಡು ನಾವು ಮುಂದಕ್ಕೆ ಹೋಗುವುದಕ್ಕೆ ತಯಾರಿಲ್ಲ. Let it come through the mouth of the speaker. ಯಾವುದು ಬೇಸ್‌ಲೆಸ್ ?

ಶ್ರೀ ಕೆ. ಎಚ್. ಪಾಟೀಲ್.—ಶ್ರೀಮಾನ್ ದೇವೇಗೌಡರು ನನ್ನ ಪಾತಿವ್ರತ್ಯನೋಡಿ ಮನ ಕರಗಬೇಕಾಗಿಲ್ಲ, ಯಾರಿಗೂ ಪಾತಿವ್ರತ್ಯ ತೋರಿಸಬೇಕಿಲ್ಲ, ಅವರ ಪಾತಿವ್ರತ್ಯ ಅವರಪಕ್ಕಕ್ಕೆ ಇಟ್ಟುಕೊಂಡಿದ್ದರೆ ಮಹಾಸಾಧನೆ ಮಾಡಿದರು ಎಂದು ಹೇಳುತ್ತೇನೆ. ಪಂಚೆ ಕಚ್ಚೆ ಶುದ್ಧವಿದೆ ಎಂದು ಹೇಳುವುದಕ್ಕೆ. ಅದು ನಿಜ ಎಂದು ಹೇಳುವುದಕ್ಕೆ...

ಶ್ರೀ ಎಚ್. ಡಿ. ದೇವೇಗೌಡ.—ಫೈಲ್ ಬರಲಿ ? ಮಾನ್ಯ ಸಭಾಪತಿಗಳೇ ಅವರಿಗೆ ಯಾವ ಫೈಲ್ ಕೇಳಿದ್ದೇನೆ ಅದರ ಬಗ್ಗೆ ಬರೀ ವ್ಯಾಖ್ಯೆ ಬೇಡ ; ಸಭೆ ಕಾಲವನ್ನು ಹರಣ ಮಾಡುವುದು ಬೇಡ. ಫೈಲ್ ತರಿಸುತ್ತೇನೆ ನೋಡುತ್ತೇನೆ ಎಂದು ಹೇಳಿದರೆ ಒಂದು ಹೆಜ್ಜೆ ಮುಂದೆ ಹೋಗುವುದಕ್ಕೆ ಸಮಾಧಾನ ಆಗುತ್ತದೆ.

ಶ್ರೀ ಕೆ. ಎಚ್. ಪಾಟೀಲ್.—ಫೈಲ್ ತರಿಸಲಿಕ್ಕೇ ಬೇಕಾಗುತ್ತದೆ. ಪ್ರಿವಿಲೇಜ್ ಮೋಷನ್ ಮೂವ್ ಮಾಡುತ್ತೇನೆ ಎಂದಮೇಲೆ ಫೈಲ್ ನೋಡಲಿಕ್ಕೆ ಫೈಲ್ ಅಗತ್ಯ.

ಶ್ರೀ ಎಚ್. ಡಿ. ದೇವೇಗೌಡ.—ಪ್ರಿವಿಲೇಜ್ ಮೋಷನ್ ಬೇರೆ ಇದೆ. ಫೈಲ್ ತರಿಸಬೇಕು ಎಂದು ಅವರಿಗೆ ಹೇಳುತ್ತೇನೆ.

ಅಧ್ಯಕ್ಷರು.—ನಾನು ಇಲ್ಲಿ ಕೂತುಕೊಂಡು ವಿಚಾರ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ ಇಬ್ಬರ ಸ್ಟೇಟ್‌ಮೆಂಟ್ ಇದೆ, ಸಭೆ ನೋಡುತ್ತಿದೆ, ಜನ ನೋಡುತ್ತಿದ್ದಾರೆ.

ಶ್ರೀ ಕಾಗೋಡು ತಿಮ್ಮಪ್ಪ.—ಶ್ರೀಮಾನ್ ದೇವೇಗೌಡರು ಪ್ರಬಲವಾದ ಆಪಾದನೆ ಮಾಡಿದ್ದಾರೆ, ಆ ಮಾತನ್ನು ಅವರು ಅಲ್ಲಗಳೆಯುತ್ತಿದ್ದಾರೆ.

ಅಧ್ಯಕ್ಷರು.—ಫೈಲ್ ತರಿಸಿ ಎಂದು ಹೇಳುತ್ತೇನೆ, ಆದರೆ ಅದನ್ನು ಪರಿಶೀಲಿಸುವುದಕ್ಕೆ ಸಾಧ್ಯವಾಗುವುದಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ.—ನಾನು ಹೇಳಿದ ಅಪಾದನೆ ಸುಳ್ಳು ಆದರೆ ಆದಕ್ಕೆ ವಿಷಾದ ವ್ಯಕ್ತಪಡಿಸುತ್ತೇನೆ ಎಂದು ಅವರು ಸಿದ್ಧವಾಗಿದ್ದಾರೆ ಆದ್ದರಿಂದ ಸಂಬಂಧಪಟ್ಟ ಫೈಲನ್ನು ಪರೀಶಿಲನೆ ಮಾಡಿದರೆ ಮಾತ್ರ ಪರೀಕ್ಷೆ ಮಾಡುವುದಕ್ಕೆ ಸಾಧ್ಯವಾಗುತ್ತದೆ. ವಿರೋಧಪಕ್ಷದ ನಾಯಕರು ಹೇಳಿದ್ದು ತಪ್ಪು ಇದ್ದ ಪಕ್ಷದಲ್ಲಿ ನಾವು ಎಲ್ಲರೂ ವಿಷಾದ ಪಡುತ್ತೇವೆ.

Sri H. M. CHANNABASAPPA (Minister for Public Works and Electricity).—Members have exercised their minds on some of the issues. It is open to the hon. members on the other side to make any charge they feel to be against any member of this House and and particularly against the Government. Government would cetainly make all efforts present to this House whatever information they wnnt so that they may satisfy for themselves about the merits or demerits of the case or truth or otherwise of it. But one need not get so mnch exercised over the matter. I would request the hon. members on both the sides to exercise a little bit of restraint on themselves. I have no objection to plead for an information. Government would be pleased to place any information they want. They have a right to demand and we have an obligation to place before you the facts. But there are certain procedures and also some 'sampradayams' in regard to placing of files and things of that kind. The Chair may kindly exeamine those healthy conventions and call for any informatin and we are glad to furnish it. With that, I think, we can rest that, and the Hon. Minister may be permitted to proceed with his reply,

ಶ್ರೀ ಎಂ. ಎಸ್. ಕೃಷ್ಣನ್.—ನಾನು ಆಗಲೇ ಪಾಯಿಂಟ್ ಆಫ್ ಆರ್ಡರ್ ಎತ್ತಿದೆ. ಶ್ರೀ ದೇವೇಗೌಡರು ಫೈಲ್ ತರಿಸಿ ಎಂದು ಹೇಳುತ್ತಾರೆ. ಈ ದಿನ ನಮಗೆ ಬೇಕಾಗಿರತಕ್ಕದ್ದು ಸದನದಲ್ಲಿ ಫೈಲುಗಳನ್ನು ತರಿಸುವುದಕ್ಕೆ ಮುಂಚೆ ಈಗ ಲೇಟೆಸ್ಟ್ ಪೊಸಿಷನ್ ಏನು ಇದೆ, ಇವೊತ್ತಿನ ದಿವಸ ಕನ್‌ವೆನ್‌ಷನ್ ಏನು ಎಂಬುದನ್ನು ತೆಗೆದುನೋಡಿ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಫೈಲುಗಳನ್ನು ಸಭೆ ಮುಂದಾಗಲಿ, ಸ್ಪೀಕರ್ ಕಡೆಗೆ ಆಗಲಿ ತರಿಸತಕ್ಕದ್ದು ಕೊಡತಕ್ಕದ್ದು ಈ ಬಗ್ಗೆ ಸತ್‌ಸಂಪ್ರದಾಯಗಳು ಇವೆ. ಆ ಸತ್‌ಸಂಪ್ರದಾಯಗಳು ಏನು ಎನ್ನುವುದನ್ನು...

ಶ್ರೀ ಎಚ್. ಡಿ. ದೇವೇಗೌಡ.—ದೇಶದಲ್ಲಿ ಸತ್‌ಸಂಪ್ರದಾಯಗಳನ್ನು ನುಂಗಿ ನೀರು ಕುಡಿದು ಬಿಟ್ಟಿದ್ದಾರೆ. ತಾವು ಇಳಿ ವಯಸ್ಸಿನಲ್ಲಿ ಪಾಪದ ಹೊರೆ ತೆಗೆದುಕೊಂಡು ಹೋಗುವುದಕ್ಕೆ ತಯಾರಿದ್ದೀರಾ ? ಎಲ್ಲಿದೆ ಸತ್‌ಸಂಪ್ರದಾಯಗಳು ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅಧ್ಯಕ್ಷರೇ ಏನು ಇದ್ದರು ಸತ್‌ಸಂಪ್ರದಾಯಗಳು ಏನಿದೆ ಅವುಗಳನು ನೋಡಿ, ಅದಕ್ಕೆ ಅನುಗುಣವಾಗಿ ಏನು ಕಾಯಿದೆ ಇದೆ ಆ ಪ್ರಕಾರ ಆ ಫೈಲು ತರಿಸಿಕೊಳ್ಳತಕ್ಕ ಹಕು ಉಳ್ಳವರು ಆಗಿದ್ದಾರೆ. ಆ ವಿಷಯಕ್ಕೆ ನಾವು ನೀವು ಏತಕ್ಕೆ ಹೋಗಬೇಕು ?

ಶ್ರೀ ಎಂ. ಎಸ್. ಕೃಷ್ಣನ್.—ಸಂಬಂಧಪಟ್ಟ ಫೈಲನ್ನು ತರಿಸಿ ಇಡಿ. ಅದು ಸಂಪ್ರದಾಯದ ಪ್ರಶ್ನೆ ಅಲ್ಲ. ಏತಕ್ಕೆಂದರೆ ಈ ಮನೆಯ ಸದಸ್ಯರಿಗೆ ಕೆಲವು ವಿಷಯಗಳನ್ನು ತಿಳಿದುಕೊಳ್ಳುವುದಕ್ಕೆ ಕೆಲವು ಹಕ್ಕುಗಳು ಇವೆ. ಈವೊತ್ತು ಇದರ ಬಗ್ಗೆ ವಾಸ್ತವಿಕವಾದ ಚರ್ಚೆ ಇದೆ. ಒಂದು ಕಡೆ ಗುರುತರವಾದ ಆಪಾದನೆ ಇದೆ. ಇನ್ನೊಂದು ಕಡೆ ಸರಿಕೆ ಉತ್ತರಗಳನ್ನು ಕೊಡುತ್ತಿದ್ದಾರೆ. ಇದನ್ನು ತೀರ್ಮಾನ ಮಾಡಬೇಕಾದರೆ ಫೈಲನ್ನು ತರಿಸಬೇಕು. ಈವೊತ್ತಿನ ದಿವಸ ದೇವೇಗೌಡರಿಗೆ ಉತ್ತರ ಕೊಟ್ಟರೆ ನಾವು ಬಾಯಿ ಮುಚ್ಚಿಕೊಂಡು ಇರುವುದಕ್ಕಾಗುವುದಿಲ್ಲ. ದೇವೇಗೌಡರಿಗೆ ಕನ್‌ವಿನ್ಸ್ ಮಾಡಬಹುದು. ನನಗೆ ಕನ್‌ವಿನ್ಸ್ ಮಾಡುವುದು ಕಷ್ಟ. ನಮಗೆ ಹಕ್ಕನ್ನು ಚಲಾಯಿಸುವುದಕ್ಕೆ ಹಕ್ಕು ಇವೆ. ಆದುದರಿಂದ ತಾವು ನೇರವಾಗಿ ಹೇಳಬೇಕು. ಆ ಫೈಲನ್ನು ಆದಷ್ಟು ಜಾಗ್ರತ ತರಿಸಬೇಕು.

ಶ್ರೀ ಹೆಚ್. ಡಿ. ದೇವೇಗೌಡ.—ಟ್ರಕ್‌ನ್ನು ಉಪಯೋಗಿಸಬೇಕಾದರೆ ಒಂದು ಮೈಲಿಗೆ 6 ರೂಪಾಯಿ ಕೊಡಬೇಕು ಎಂದು ಮಾಡಿದ್ದೀರಿ. ಆದರೆ ಒಂದು ಟ್ರಿಪ್‌ಗೆ 80 ರೂಪಾಯಿ ಛಾರ್ಜ್ ಮಾಡಿದ್ದಾರೆ ಎಂದು ಹೇಳಿದ್ದಾರೆ. ಆದುದರಿಂದ ಇವರಲ್ಲಿ ಅಧಿಕಾರ ದುರುಪಯೋಗವಾಗಿದೆ ಎಂದು ಹೇಳುತ್ತೇನೆ ಈ ಟ್ರಕ್ ಎರಡು ಸಾರಿ ಹೋಗಿ ಬಂದಿದೆ. ದಯವಿಟ್ಟು ಈ ಫೈಲನ್ನು ಈ ಸಂಜೆ ಒಳಗೆ ತರಿಸುವಂತೆ ಮಾನ್ಯ ಸ್ಪೀಕರ್‌ರವರು ಆರ್ಡರ್ ಮಾಡಬೇಕು ಎಂದು ಹೇಳುತ್ತೇನೆ. ಇದರ ಬಗ್ಗೆ ಬಾಕಿ ಇತರ ಮಾಹಿತಿಗಳನ್ನು ಸಹ ಕೊಡುವುದಕ್ಕೆ ನಾನು ತಯಾರಾಗಿದ್ದೇನೆ. ಅವರು ಒಂದು ಟ್ರಿಪ್‌ಗೆ 80 ರೂಪಾಯಿ ಕೊಟ್ಟರೆ 10 ಟ್ರಿಪ್ಸ್‌ಗೆ 800 ರೂಪಾಯಿ ಆಗುತ್ತದೆ. ಆದುದರಿಂದ ಈ ಬಗ್ಗೆ ಎಷ್ಟು ಖರ್ಚಾಗಿದೆ ಎನ್ನುವ ವರದಿ ಬೇಕು, ಮತ್ತು ಒಂದು ಮೈಲಿಗೆ 6 ರೂಪಾಯಿ ಆದರೆ ಎಷ್ಟು ಖರ್ಚಾಗುತ್ತದೆ ಎನ್ನುವ ಬಗ್ಗೆಯೂ ವರದಿ ಬೇಕು, ಈವನ್ ಫೆಬ್ರಿಕೇಷನ ಛಾರ್ಜಸ್ 200 ರೂಪಾಯಿ ಎಂದು ಕೊಟ್ಟಿದ್ದಾರೆ, ಅದರ ಬಗ್ಗೆಯೂ ನಿಖರವಾಗಿ ತಿಳಿಸಬೇಕು. ಅದಕ್ಕೆ ದಯವಿಟ್ಟು ಫೈಲ್ ತರಿಸಿ. You must help me, Whatever charges. I have made whether it is on the basis of certain facts or not they are there. To that extent I pray your protection. I want you to send for the file and give a ruling on this point.

ಶ್ರೀ ಎಸ್. ಬಂಗಾರಪ್ಪ.—ಈ ಸಂದರ್ಭದಲ್ಲಿ ಈಗಾಗಲೇ ಕನ್‌ವೆನ್‌ಷನ್ ಆಗಿಹೋಗಿದೆ. ಹಿಂದೆ ಒಂದು ಸಾರಿ ಫೈಲು ತರಿಸಿ ನೋಡಿದ್ದು ಆಗಿದೆ. ಇದು ತಮಗೂ ಗೊತ್ತಿದೆ, ಆದುದರಿಂದ ಫೈಲು ತರಿಸಿ ನೋಡಿದರೆ ಸಾಕು. ಆ ಫೈಲು ನೋಡಿ ಈ ಸದನಕ್ಕೆ ತಿಳಿಸಬೇಕು ಎಂದು ಹೇಳುತ್ತೇನೆ. ಜೊತೆಗೆ ಮಾನ್ಯ ಡೆಪ್ಯೂಟಿ ಲೀಡರ್ ಆದ ಶ್ರೀಮಾನ್ ಚನ್ನಬಸಪ್ಪನವರನ್ನು ಕೇಳಿಕೊಳ್ಳುತ್ತೇನೆ. ಈ ರೀತಿ ಸೀರಿಯಸ್ ಛಾರ್ಜಸ್ ಇದ್ದಾಗ, ನ್ಯಾಯ, ಅನ್ಯಾಯದ ದೃಷ್ಟಿ ಇದ್ದಾಗ ಆ ಫೈಲನ್ನು ತರಿಸಿಕೊಡುತ್ತೇನೆ ಎಂದು ಧೈರ್ಯವಾಗಿ ಅವರು ಉತ್ತರ ಕೊಡಬೇಕು ಎಂದು ಹೇಳುತ್ತೇನೆ.

Sri H. M. CHANNABASAPPA.—I do not want Sri Deve Gowda to beg for anything. The Hon. Speaker is the custodian of all rules and procedure and we will leave it to her and be done with it.

ಅಧ್ಯಕ್ಷರು.—ಶ್ರೀಮಾನ್ ಬಂಗಾರಪ್ಪನವರು ಹೇಳಿದ ಹಾಗೆ ಕಾರ್ಪೋರೇಷನ್ ನಡವಳಿಕೆಗಳ ಬಗ್ಗೆ ಒಂದು ಸಾರಿ ಟೇಪ್ ರಿಕಾರ್ಡನ್ನು ತರಿಸಿದ್ದೇನೆ. ಈ ಹೌಸ್‌ಗೆ ಸಂಬಂಧಪಟ್ಟಂತೆ ಪಿ. ಯು. ಸಿ. ಕಮಿಟಿ ಇದೆ. ಸ್ಪೆಸಿಫಿಕ್ ಛಾರ್ಜಸ್ ಇದ್ದರೆ ಅವರು ಏನಾದರೂ ನೋಡಿಕೊಂಡು ಬಂದು ಹೇಳಬಹುದು. ಈವೊತ್ತು ಆ ಫೈಲು ತರಿಸಿ ಎಂದು ಹೇಳುತ್ತೀರಿ, ನಾಳೆ ದಿವಸ ಮತ್ತೊಂದು ಫೈಲು ತರಿಸಿ ಎಂದು ಹೇಳುತ್ತೀರಿ, ಹೀಗೆ ಹೇಳುತ್ತಾ ಹೋದರೆ ಕಷ್ಟವಾಗುತ್ತದೆ. ಆದುದರಿಂದ ಇಲ್ಲಿ ಕುಳಿತುಕೊಂಡು ಆ ರೀತಿ ಚರ್ಚೆ ಮಾಡುವುದು ಸರಿಯಲ್ಲ.

ಶ್ರೀ ಎಚ್. ಡಿ. ದೇವೇಗೌಡ.—ನಿಮ್ಮ ರೂಲಿಂಗನ್ನು ನಾನು ಪ್ರಶ್ನೆ ಮಾಡುವುದಿಲ್ಲ. ಪಿ. ಯು. ಸಿ. ಯವರು ಕೆಲಸ ಮಾಡುವುದಕ್ಕೆ ಕೆಲವು ವಿಧಿ, ನಿಯಮಾವಳಿಗಳು ಇವೆ. ಪಿ.ಯು.ಸಿ ಕಮಿಟಿಯವರು ನಾಳೆ ಹೋಗಿ ಸಂಬಂಧಪಟ್ಟ ರಿಕಾರ್ಡನ್ನು ಪರಿಶೀಲನೆ ಮಾಡಿ ಈ ಸಭೆಗೆ ಒಂದು ವರದಿ ಕೊಡುವಂತೆ ಸೂಚಿಸುತ್ತೀರಾ ?

MADAM SPEAKER.—Yes. I shall request them to do it. ಪಿ.ಯು ಸಿ. ಕಮಿಟಿಗೆ ಅದನ್ನು ನೋಡುವ ಹಾಗೆ ಹೇಳುತ್ತೇನೆ.

ಶ್ರೀ ಕೆ. ಎಚ್. ಪಾಟೀಲ್.—ಈ ಮಾನ್ಯ ಸಭೆ ವಾಸ್ತವಿಕ ನಿಯಮಾವಳಿಗಳನ್ನು ಒಪ್ಪಿ ಹಾಗೆ ಮಾಡಿದರೆ ಸಂತೋಷ. ಮಾನ್ಯ ದೇವೇಗೌಡರು ಪಿ. ಎ. ಸಿ. ಕಮಿಟಿಯ ಛೇರ್ಮನ್ ಆಗಿದ್ದಾರೆ. ಅವರು ಕೇವಲ ಆಡಿಟ್ ಅಬ್ಜೆಕ್ಷನ್ ನೋಡುವುದು ಒಂದೇ ಅಲ್ಲ, ಬೇಕಾದರೆ ಅವರೂ ಹೋಗಿ ನೋಡಿ ವಿಚಾರಗಳನ್ನು ಪರಿಶೀಲಿಸಬಹುದು.

Sri H. D. DEVE GOWDA.—I want the Chair to direct me to verify this as Chairman of the Public Accounts Committee. This Committee also consists of 6 or 7 members of the Ruling Party. Let the Committee sit in Judgement tommorrow. Please authorise me to verify the records. I am prepared to go through the file and place a report before the House.

ಶ್ರೀ ಕೆ. ಎಚ್. ಪಾಟೀಲ್.—ಮಾನ್ಯ ಸಭಾಧ್ಯಕ್ಷರೇ ನಾನು ಈ ವಿಷಯದಲ್ಲಿ ಅಡ್ಡ ಬರುವುದಿಲ್ಲ. ಅವರು ಸರಿಯಾದ ರೀತಿಯಲ್ಲಿ ಕ್ರಮಬದ್ಧವಾದ ಕಾರ್ಯಕ್ರಮ ತೆಗೆದುಕೊಳ್ಳಬೇಕು. ಮಾನ್ಯ ವಿರೋಧಪಕ್ಷದ ನಾಯಕರು 16 ಲಕ್ಷ ರೂಪಾಯಿಗಳನ್ನು ಗದಗ್ ಸೇಲ್ಸ್ ಸೊಸೈಟಿಗೆ ಕೊಟ್ಟಿದ್ದಾರೆ ಅದರ ಫೈಲು ಲೆಕ್ಕ ಕೊಡಿರಿ ಎಂದು ಕೇಳಿದರು. ಆ ಫೈಲನ್ನು ತರಿಸಿ ನೋಡಬಹುದು.

4–30 P.M.

ಅವರು 12 ಲಕ್ಷ ರೂಪಾಯಿ ವಿಚಾರ ಹೇಳಿರಬಹುದು ಎಂದು ನಾನು ಭಾವನೆ ಮಾಡಿದಿದ್ದೆ. ಆದರೆ ಮತ್ತೆ ಅವರು 16 ಲಕ್ಷ ಎಂದೇ ಹೇಳುತ್ತಿದ್ದಾರೆ. ಆ 16 ಲಕ್ಷ ರೂಪಾಯಿಗಳ ಪೈಕಿ 4,27,282 ರೂಪಾಯಿ ಅನ್‌ಕ್ಲೇಮ್ಡ್ ಇದೆ. 12 ಲಕ್ಷ ರೂಪಾಯಿ ಕೊಟ್ಟಿದೆ. ಏತರ ಸಲುವಾಗಿ ಕೊಟ್ಟಿದೆ ಎನ್ನುವುದನ್ನು ಹೇಳುತ್ತೇನೆ. ಐ. ಸಿ. ಡಿ. ಸಿ. ಸ್ಕೀಮಿನಲ್ಲಿ ಹತ್ತಿ ಬೆಳೆಯುವ ರೈತರಿಗೆ ಎಕರೆವಾರು ಗೊಬ್ಬರ, ಪೆಸ್ಟಿಸೈಡ್ಸ್ ಕೊಡಬೇಕಾಗುತ್ತದೆ. ಆಗ್ರೋ ಇಂಡಸ್ಟ್ರೀಸ್ ಕಾರ್ಪೋರೇಷನ್‌ನವರು ಇದನ್ನೆಲ್ಲ ಹಂಚಬೇಕಾಗುತ್ತದೆ. ಹಳ್ಳಿ ಹಳ್ಳಿಗೂ ಹೋಗಿ ಹಂಚುವ ಬದಲು ಸೊಸೈಟಿ ಮುಖಾಂತರ ವಿತರಣೆ ಮಾಡುವ ಕಾರ್ಯಕ್ರಮ ಹೋದ ಸಲ ತೆಗೆದುಕೊಂಡಿದ್ದೇವೆ. ಅದರ ಪ್ರಕಾರ ವಿವರಗಳನ್ನು ಸಭೆಗೆ ತಿಳಿಸುತ್ತೇನೆ. ಅದು ಈ ರೀತಿ ಇದೆ :—

1	Gadag Co-operative Cotton Sales Society, Gadag.	...	2,14,959
2	Siruguppi Grama Seva Sahakara Sangha, Siruguppi	...	13,341
3	Doddapramanada Pattina Prathamika Vyavasaya Sangha, Kerasur.	...	6,384
4	Doddapramanada Pattina Prathamika Vyavasaya Sangha, Byahatti	...	4,157
5	Grama Seva Sahakara Sangha, Bidnal	...	4,823
6	do Nagasettykoppa	...	3,500
7	do Ingalahalli	...	5,180
8	Doddapramanada Prathamika Pattina Vyavasaya Sangha Ltd., Hebsur	...	3,882
9	DoddapOamanada Prathamika Pattina Vyavasaya Sangha Ltd., Haliyal	...	10,668
10	Doddapramanada Prathamika Pattina Vyavasaya Sangha Ltd., Hombal	...	16,743
11	Doddapramanada Prathamika Pattina Vyavasaya Sangha Ltd., Jakkalli	...	3,522

(ಶ್ರೀ ಕೆ. ಹೆಚ್. ಪಾಟೀಲ್)

12	TAPCMS, Kundagol	...	33,497
13	Annigeri Agricultural Produce Sales/Processing Co-operative Society, Ltd., Annigeri.	...	1,02,064
14	Doddapramanada Pathina Prathamika Vyavasaya Prathamika Sangha Ltd., Neregal	...	493
15	Doddapramanada Pathina Prathamika Vyavasaya Prathamika Sangha Ltd., Narana Basari	...	117
16	Doddapramanada Pathina Prathamika Vyavasaya Prathamika Sangha Ltd., Kusgal	...	3,747
17	Doddapramanada Pathina Prathamika Vyavasaya Prathamika Sangha Ltd., Mantur	...	9,911
18	Doddapramanada Pathina Prathamika Vyavasaya Prathamika Sangha Ltd., Nadugundi	...	307
19	T. A. P. C. M. S. Ltd., Ron	...	1,00,119
20	Democran purchased from Director of Agriculture and issued to Societies–details not available as the Certification on the back of the Bill does not mention to which society it has been issued.	...	2,31,854
21	Amount directly adjusted on certificate at full cost.	...	4,96,211
22	Provision made for Gadag Society which has less chance.	...	230
23	Balance still to be claimed.	...	4,27,282

ಇದರೊಳಗೆ ಯಾವ ಸಂಘಕ್ಕೂ ಕೊಡುವುದಿಲ್ಲ, ಸಂಘದ ಮುಖಾಂತರ ಅದರ ಸದಸ್ಯರಿಗೆ ಕೊಟ್ಟು ಪಾವತಿ ಪಡೆದು ಕಳಿಸಿದ ಮೇಲೆ ಅದನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಬೇಕಾಗುತ್ತದೆ. ಇದು ಈಗಿನ ಯೋಜನೆ ಅಲ್ಲ. ಇದು ಮೂರನೆ ವರ್ಷ. ಆದ್ದರಿಂದ ಮಾನ್ಯ ವಿರೋಧ ಪಕ್ಷದ ನಾಯಕರಂಥವರು ಈ ರೀತಿ ಅಪಾದನೆ ಮಾಡಬಾರದು ಎನ್ನುವುದೇ ನನ್ನ ಉದ್ದೇಶ.

ಮಾನ್ಯ ಅಧ್ಯಕ್ಷರೇ, ಶ್ರೀ ದೇವೇ ಗೌಡರು ಬಹಳ ಕನಿಕರಪಟ್ಟು ನನ್ನ ಆಸ್ತಿಪಾಸ್ತಿ ಬಗ್ಗೆ ಮಾತನಾಡಿದ್ದಾರೆ. ಕೆ. ಎಚ್. ಪಾಟೀಲರು 80 ರೂಪಾಯಿ ಮೇಲೆ ನೌಕರಿ ಪ್ರಾರಂಭ ಮಾಡಿದರು, ಈ ಹೊತ್ತು 8 ಲಕ್ಷ ರೂಪಾಯಿ ಆಸ್ತಿ ಪಡೆದಿದ್ದಾರೆ, ಹೇಗೆ ಮಾಡಿದರು, ಇದಕ್ಕೆ ತನಿಖೆಯಾಗಬೇಕು, ವಿಚಾರಣೆಯಾಗಬೇಕು ಎಂದು ಹೇಳಿದರು. ಮಾನ್ಯ ವಿರೋಧಪಕ್ಷದ ನಾಯಕರಿಗೆ ಯಾವುದಕ್ಕೆ ತನಿಖೆಯಾಗಬೇಕು ಎನ್ನುವುದಾದರೂ ಗೊತ್ತಿರಬೇಕು ಎಂದು ನಾನು ಹೇಳುತ್ತೇನೆ. ಮಂತ್ರಿಯಾದ ಮೇಲೆ, ಇರುವ ಆಸ್ತಿ ಹೆಚ್ಚುಕಡಮೆಯಾದರೆ ಮಾನ್ಯ ಸದಸ್ಯರು ಬೇಕಾದಷ್ಟು ರೀತಿಯಲ್ಲಿ ಕೇಳಬಹುದು. ಅವರು ನನ್ನ ವಿಷಯದಲ್ಲಿ ಹಿಂದಿನದನ್ನು ಕೇಳಿದರು. ಅದಕ್ಕೆ ತಕರಾರು ಇಲ್ಲ. ನನ್ನ ವಿಚಾರ ಹೇಳುತ್ತೇನೆ. ಉಳಿದ ಜನತೆಯ ವಿಚಾರ ಬೇಡ

ಶ್ರೀ ಎಚ್. ಡಿ. ದೇವೇ ಗೌಡ.– 80 ರೂಪಾಯಿ ನೌಕರಿಯಲ್ಲಿದ್ದರು, ಈಗ 8 ಲಕ್ಷ ರೂಪಾಯಿ ಆಸ್ತಿ ಇದೆ. ಎಲ್ಲ ಎಂ. ಎಲ್. ಎ ಗಳ ಆಸ್ತಿಪಾಸ್ತಿ ಬಗ್ಗೆ ವಿಚಾರಣೆಯಾಗಬೇಕು, ಲೋಕಪಾಲ, ಲೋಕ ಅಯುಕ್ತ ಮಾಡುವುದಾಗಿ ಹೇಳುತ್ತಿದ್ದಾರಲ್ಲ, ಅವರಿಂದ ವಿಚಾರಣೆಯಾಗಬೇಕು ಎಂದು ಹೇಳಿದೆ.

ಶ್ರೀ ಕೆ. ಎಚ್. ಪಾಟೀಲ್.—ಆ ಪ್ರಕಾರ ಮಾಡಲಿ ಎಂದು ವಿನಂತಿ ಮಾಡಿಕೊಳ್ಳುತ್ತೇನೆ. ದೇವೇ ಗೌಡರು ಅಲ್ಲಿಯವರೆಗೆ ಕಾಯಬೇಕಾಗಿಲ್ಲ. ಅವರೇ ಸ್ವತಃ ಹೋಗಿ ವಿಚಾರಿಸಲಿ. ಈ ಹೊತ್ತು ಬಂದಂಥ ಆಸ್ತಿಯೆಲ್ಲಿ ನಮ್ಮ ಅಪ್ಪ, ಅಜ್ಜನ ಕಾಲದಿಂದ ಬಂದದ್ದು. ಲಕ್ಷಾವಧಿ

ದುಡ್ಡನ್ನು ಸೂಟು ಬಿಟ್ಟ ಮನೆತನವಾಗಿದೆ ನಮ್ಮದು. ಈ ಹೊತ್ತು ಸಹಿತ ನಮ್ಮ ಗ್ರಾಮದಲ್ಲಿ ಸಾರ್ವಜನಿಕ ಕೆಲಸಗಳೆಲ್ಲ ನಮ್ಮ ಮನೆತನದ ಹೆಸರಿನಲ್ಲಿವೆ, ಹಫ್ತೆ ಕೊಟ್ಟಿದ್ದಾರೆ. ಈ ರೀತಿ ಹೇಳಿದರೆ ಜನ ತಪ್ಪು ತಿಳಿದುಕೊಳ್ಳಬಾರದು. ನಮ್ಮ ತಂದೆಯವರಾಗಲಿ ನಮ್ಮ ದೊಡ್ಡಪ್ಪನವರಾಗಲೀ ಸಾರ್ವಜನಿಕ ಜೀವನದಲ್ಲಿ ಬಹಳ ಹಣ ಹಾಳು ಮಾಡಿದ್ದಾರೆ. 1942ನೇ ಇಸವಿಯಲ್ಲಿ ನಮ್ಮ ದೊಡ್ಡಪ್ಪನವರಿಗೆ ದತ್ತು ಆದಾಗ ನಮ್ಮ ತಂದೆ ಕಳೆದ ಆಸ್ತಿ ಎಲ್ಲ ಪುನಃ ಬಂತು. 195 ನೇ ಇಸವಿಯಲ್ಲಿ ಇದ್ದ ಜಮೀನೆಲ್ಲ ನನ್ನ ಕೈಗೆ ಬಂತು. ಈ ಹೊತ್ತಿಗೂ ಸಹ ನಾನು ಕಷ್ಟಪಟ್ಟು ದುಡಿದಿದ್ದೇನೆ, ಹೊಲಗಳನ್ನು ಸುಧಾರಣೆ ಮಾಡಿದ್ದೇನೆ. ನನ್ನ ಹೊಲವನ್ನು ದೇವೇಗೌಡರು ನೋಡಿದರೆ ಮೈಸೂರಿನಲ್ಲಿ ಎಲ್ಲಿಯೂ ಆ ರೀತಿಯಲ್ಲಿ ಇಲ್ಲ ಎಂದು ಹೇಳುತ್ತಾರೆ. ಆ ಹೊಲದಲ್ಲಿನ ಹಿಂದಿನ ಉತ್ಪನ್ನ ಇಂದು ಇಲ್ಲ. ಈಗ ನನ್ನ ಹೊಲ ನಿರ್ಲಕ್ಷ್ಯವಾಗಿದೆ. ಶ್ರೀ ದೇವೇಗೌಡರು ಅದನ್ನು ಪರಿಶೀಲನೆ ಮಾಡಬಹುದು. ಈ ಹೊತ್ತಿನ ದಿವಸ ನನ್ನ ಮಗನ ಹೆಸರಿನಲ್ಲಿ ಬೇರೆ ಕಡೆ ಆಸ್ತಿಯನ್ನು ಕೊಟ್ಟಿದ್ದೇನೆ. ನನಗೂ ಅವನಿಗೂ ವಾಟಣಿಯಾಗಿದೆ.

ವಿಶಾಲ ಕರ್ನಾಟಕ ಎನ್ನುವಂಥ ಪತ್ರಿಕೆಯ ಸಂಸ್ಥೆಯನ್ನು ನಾನು ಕಟ್ಟಿದ್ದು ಯಾರನ್ನೂ ಹೋಗಿ ಬಿಕ್ಷೆ ಬೇಡಿಯಲ್ಲ, ಯಾರನ್ನೂ ಹೋಗಿ ದಾನ ಮಾಡಿರಿ ಎನ್ನಲಿಲ್ಲ. ಯಾವಾಗ ದೇವೇಗೌಡರ ಪಕ್ಷದ ಸರ್ಕಾರ ಅಸ್ತಿತ್ವದಲ್ಲಿತ್ತು, ಆಗ ಕಟ್ಟಿದ ಸಂಸ್ಥೆ ಅದು. ನಾನು ಆಗ ಪಡುತ್ತಿದ್ದ ತೊಂದರೆಗಳನ್ನು ಮನಗಂಡು ನನಗೆ ಸಂಬಂಧಿಸಿದ ಜನ ರಾಜ್ಯದಲ್ಲಿ ಯಾರಿದ್ದಾರೆ ಅವರು, ಹೊರಗಡೆಯವರಲ್ಲ, ಗೆಳೆಯರಲ್ಲ, ನನ್ನ ರಕ್ತ ಸಂಬಂಧಿಗಳು ಆ ಸಂಸ್ಥೆಯನ್ನು ಕಟ್ಟಲಿಕ್ಕೆ ಬಡ್ಡಿ ರಹಿತ ಠೇವಣಿ ಇಟ್ಟಿದ್ದಾರೆ, ಅದನ್ನು ನಮ್ಮಿಬ್ಬರಲ್ಲೇ ಇಟ್ಟುಕೊಂಡಿಲ್ಲ. ಇನ್‌ಕಂ ಟ್ಯಾಕ್ಸ್ ಅಧಿಕಾರಿಗಳಿಗೆ ತಿಳಿಯಪಡಿಸಿ, ವೆಲ್ತ್ ಟ್ಯಾಕ್ಸ್ ಕೊಟ್ಟು ವಿಶಾಲ ಕರ್ನಾಟಕ ಪತ್ರಿಕೆಯ ಸಂಸ್ಥೆಯನ್ನು ಕಟ್ಟಲಾಯಿತು. ಶ್ರೀ ದೇವೇಗೌಡರ ಹಿರಿಯರಾದ ನಿಜಲಿಂಗಪ್ಪನವರು ವಾಸ್ತವವಾಗಿ ಮುನಿಸಿಪಲ್ ಕಾರ್ಪೊರೇಷನ್ ಕೊಟ್ಟಂಥ ಪರ್ಮಿಷನ್ ಸಹಿತ ಕ್ಯಾನ್ಸಲ್ ಮಾಡುವುದಕ್ಕೆ ಪ್ರಯತ್ನ ಮಾಡಿದರು. ಅದು ಆಗಲಿಲ್ಲವೆಂದು ಶ್ರೀ ದೇವೇಗೌಡರ ಮುಖಾಂತರ ನನ್ನ ಕೀರ್ತಿಗೆ ಕಳಂಕ ತರುವ ಪ್ರಯತ್ನ ಮಾಡುತ್ತಿದ್ದಾರೆ. ಅದಕ್ಕೆ ನನಗೆ ವ್ಯಸನವಾಗುತ್ತದೆ.

ಎಂಭತ್ತು ರೂಪಾಯಿಗಳನ್ನು ನನಗೆ ಕೊಟ್ಟ ಬಗ್ಗೆ ಹೇಳಿದರು, ನಮ್ಮಲ್ಲಿ ಶ್ರೀಮಾನ್ ಹುಲಕೋಟಿಯವರು ಒಂದು ಬ್ಯಾಂಕಿಗೆ ಚೇರ್ಮನ್ನರಾಗಿದ್ದರು. ಅವರು ಚೇರ್ಮನ್ನರಾಗಿದ್ದಾಗ ಅವರಿಗೆ ನಿಜವಾಗಿ ನನ್ನ ಬೆಂಬಲ ಬೇಕಾಗಿತ್ತು. ಅಷ್ಟೇ ಅಲ್ಲದೆ ಅವರು ತಮಗೆ ಬೇಕಾದ ಮ್ಯಾನೇಜರು, ಅಸಿಸ್ಟೆಂಟ್ ಮ್ಯಾನೇಜರು ಇಂತಹವರುಗಳನ್ನೆಲ್ಲಾ ನೇಮಕ ಮಾಡಬೇಕಾಗಿತ್ತು, ಆಗ ನಾನು ಕೇವಲ ಐದು ವರ್ಷಗಳು ಮಾತ್ರ ಇಲ್ಲಿ ಚೆನ್ನಾಗಿ ಕೆಲಸ ಮಾಡಿದ್ದಕ್ಕೆ ಅವರು ನನಗೆ ಪ್ರಶಸ್ತಿ ಕೊಡುವ ಕೆಲಸ ಮಾಡಿದರು. ಅವರಿಗೆ ಬೇಕಾಗುವ ಕೆಲಸಗಳನ್ನೆಲ್ಲಾ ಅವರಿಗೆ ಸಮರ್ಪಕವಾಗುವಂತೆ ಮಾಡಿಕೊಟ್ಟಿದ್ದೇನೆ. ಇದರಲ್ಲಿ ಅವರು ನನಗೆ ಎಷ್ಟು ಕೊಟ್ಟಿದ್ದಾರೋ ಅದು ನನಗೆ ಗೊತ್ತಿಲ್ಲ. ಆದರೆ ನನ್ನ ಖರ್ಚಿಗೆ ಎಷ್ಟು ಬೇಕಾಗಿತ್ತೋ ಅಷ್ಟನ್ನೂ ಅವರು ನನಗೆ ಕೊಟ್ಟರು. ಇದು ನನ್ನ ಸಮಾಜಕ್ಕೆ ಹಿತವಾದ ಬ್ಯಾಂಕು ಇದೆ. ಮತ್ತು ನಮ್ಮ ಸಮಾಜದ ಹಿತಾಸಕ್ತಿಗಳಲ್ಲಿ ಆಸಕ್ತಿ ಇರುವವರನ್ನೇ ಇಲ್ಲಿ ಡೈರೆಕ್ಟರುಗಳು ಹಾಗೂ ಮ್ಯಾನೇಜಿಂಗ್ ಡೈರೆಕ್ಟರುಗಳನ್ನಾಗಿ ಮಾಡಲಾಗಿದೆ. ಮತ್ತು ನಾನು ಹೀಗೆ ಬ್ಯಾಂಕಿನ ಹಿತರಕ್ಷಣೆಯನ್ನು ಮಾಡಿ ನಾನು ಇರುವವರೆಗೆ ಈ ಬ್ಯಾಂಕಿನ ನಲವತ್ತು ಬ್ರಾಂಚುಗಳು ಆಗುವಂತೆ ವ್ಯವಸ್ಥೆ ಮಾಡಲಾಗಿದೆ, ಅವು ಇಂದು ಚೆನ್ನಾಗಿ ನಡೆಯುತ್ತಿರುವ ಬ್ಯಾಂಕುಗಳು. ಇದು ನಮ್ಮ ಮಾನ್ಯ ಶ್ರೀ ದೇವೇಗೌಡರವರ ಗಮನಕ್ಕೆ ಬಂದಂತೆ ಕಾಣಲಿಲ್ಲವೇನೋ. ಶ್ರೀ ಕೆ. ಎಚ್. ಪಾಟೀಲರವರೇನೋ ಇದರಲ್ಲಿ ಬಹಳ ಪ್ರಮಾದ ಮಾಡಿದ್ದಾರೆಂದು ಹೇಳಿದರು. ಅದೇನು ಮಾಡಿದ್ದೇನೋ ನನಗೆ ಗೊತ್ತಿಲ್ಲ. ಇಂದು ಇರುವ ಕೋಅಪರೇಟೀವ್ ಸೊಸೈಟಿಗಳಲ್ಲಿ ಡೈರೆಕ್ಟರುಗಳಾಗಿ ಶ್ರೀ ಕೆ. ಹೆಚ್. ಪಾಟೀಲರವರ ಬಳಗದವರು ಇದ್ದಾರೆ ಹಾಗೂ ಇವರೂ ಡೈರೆಕ್ಟರಾಗಿದ್ದಾರೆ ಎಂದರು. ನಾನು ಈ ಮಂತ್ರಿಮಂಡಲಕ್ಕೆ ಬರುವುದಕ್ಕೆ ಮುಂಚೆ ಸರಕಾರದ ಇಲಾಖೆಯಲ್ಲಿರಲಿಲ್ಲ. ನನ್ನ ಕ್ಷೇತ್ರದಲ್ಲಿ ನನ್ನನ್ನು ಯಾರೂ ರಕ್ಷಣೆ ಮಾಡುತ್ತಿರಲಿಲ್ಲ, ಗದಗ್ ತಾಲ್ಲೂಕು ಬ್ಯಾಂಕಿನಲ್ಲಿ ನನ್ನ ಷೇರುಗಳಿದ್ದವು. ನನ್ನ ತಾಲ್ಲೂಕಿನಲ್ಲಿ ಹಾಗೂ ಧಾರವಾಡದ ಜಿಲ್ಲೆಯಲ್ಲಿ ಇಂದು ಪ್ರಾಥಮಿಕ ಸಹಕಾರ ಸಂಘಗಳು ಯಾವ ರೀತಿ ಕೆಲಸ ಮಾಡುತ್ತಿವೆ ಎನ್ನುವುದು ಎಲ್ಲರಿಗೂ ಗೊತ್ತಿದೆ. ಇದನ್ನೇನೂ ನನ್ನ ಮನೆಯವಾಗಿ ಮಾಡಲಿಲ್ಲ. ಇಡೀ ಪ್ರದೇಶದ ಜನರಿಗೆ ಸಹಾಯವಾಗಲಿ ಎಂದು ಸಹಕಾರ ಸಂಘಗಳನ್ನು ಮಾಡಲಾಯಿತು, ಇದನ್ನು ಮಾನ್ಯ ಸದಸ್ಯರು ಗಮನಕ್ಕೆ ತೆಗೆದುಕೊಂಡು ಇಂದು ಸಹಕಾರ ಸಂಘಗಳನ್ನು ಬೆಳೆಸಬೇಕೋ ಇಲ್ಲವೇ ಅಳಿಸಬೇಕೋ ಎಂಬುದನ್ನು ಅವರೂ ಗಮನಿಸಬೇಕು. ಎಲ್ಲ ಸಹಕಾರ ಸಂಘಗಳಲ್ಲೂ ನಾನು ಪಾಲುಗಾರನಾಗಿದ್ದೇನೆಂದು ಭಾವಿಸಬಾರದು. ನಮ್ಮ ವಿರೋಧಪಕ್ಷದ

(ಶ್ರೀ ಕೆ. ಎಚ್. ಪಾಟೀಲ್)

ನಾಯಕರಾದ ಶ್ರೀಮಾನ್ ದೇವೇಗೌಡರವರ ಪಕ್ಷದಲ್ಲಿ ಯಾರು ಮುಖಂಡರಾಗಿದ್ದಾರೋ ಅವರು ಇರುವ ಸಹಕಾರದ ಬ್ಯಾಂಕಿನಲ್ಲೂ ನಾನು ಪಾಲುದಾರನಾಗಿದ್ದೇನೆ. ಇದರಿಂದೇನು ಪ್ರಮಾದ ವಾಗಿದೆ ಎನ್ನುವುದನ್ನು ಮಾನ್ಯ ದೇವೇಗೌಡರೇ ಹೇಳಬೇಕು, ಇದರಲ್ಲೇನಾದರೂ ತಪ್ಪಾಗಿದ್ದರೆ ಮಾನ್ಯ ಸದಸ್ಯರ ಕ್ಷಮೆ ಕೇಳುತ್ತೇನೆ. ಇವರಲ್ಲಿದ್ದದ್ದು ಐವತ್ತು ಸಾವಿರ ರೂಪಾಯಿಗಳ ಷೇರು ಗಳು. ಇವರಲ್ಲಿ ಹತ್ತನೇ ಒಂದಂಶವನ್ನು ವಾರಂಟ ಮಾಡಿದ್ದೇನೆ. ಇದನ್ನು ನಾನು ಮಂತ್ರಿ ಯಾಗುವ ಪೂರ್ವದಲ್ಲೇ ಮಾರಿದ್ದೇನೆ. ಇದರಲ್ಲಿ ತಪ್ಪಿಸಿಕೊಳ್ಳುವುದೇನೂ ಇಲ್ಲ. ನನ್ನಲ್ಲಿ ಇದರ ಎಲ್ಲ ಲೆಕ್ಕಪತ್ರಗಳೂ ಇವೆ. ನಾನು ವೆಲ್ತ್ ಟ್ಯಾಕ್ಸ್ ಕೊಡುತ್ತಿದ್ದೇನೆ, ಇನ್‌ಕಂ ಟ್ಯಾಕ್ಸ್ ಕೊಡುತ್ತಿದ್ದೇನೆ. ಪ್ರತ್ಯಕ್ಷವಾಗಿ ಎಲ್ಲ ಹಣದ ವ್ಯವಹಾರವನ್ನೂ ಕಾಯಿದೆ ಬದ್ಧವಾಗಿ ಪ್ರಾಮಾಣಿಕ ವಾಗಿ ಮಾಡುತ್ತಿದ್ದೇನೆ, ಇದರ ಬಗ್ಗೆ ಈ ರೀತಿ ತಿಳಿಸಬಾರದು, ಆದ್ದರಿಂದ ಇದರಲ್ಲೇನು ಅಪರಾಧ ವಾಗಿದೆ ಎನ್ನುವುದನ್ನೂ ಅವರೇ ತಿಳಿಸಬೇಕು. ಇನ್ನು ಇದರ ಬಗ್ಗೆ ಯಾರ ಮೇಲೂ ಅಪಾದನೆ ಮಾಡುವುದಕ್ಕೆ ನಾನು ಇಷ್ಟಪಡುವುದಿಲ್ಲ, ಒಂದೇ ಮಾತಿನಲ್ಲಿ ಹೇಳುವುದಾದರೆ ಇಷ್ಟೊಂದು ದೀರ್ಘ ವಾಗಿ ಮಾತನಾಡಿ ನಾನು ಯಾವ ಪ್ರಶಸ್ತಿ ಪಡೆಯಬೇಕೆಂದು ಮಾಡುತ್ತಿಲ್ಲ, ನಿಜವಾಗಿಯೂ ನಮ್ಮ ಮಾನ್ಯ ಸದಸ್ಯರು ಟೀಕೆ ಮಾಡಿದರು, ಅವರು ನನಗೆ ಬಹಳ ಉಪಕಾರ ಮಾಡಿದ್ದಾರೆ. ಇದರಿಂದ ನಮಗೆ ಎಷ್ಟೋ ವಿಷಯಗಳಲ್ಲಿ ತಿದ್ದಿಕೊಳ್ಳಲು ಸಹಾಯಕವಾಗಿದೆ. ಮಾನ್ಯ ಸದಸ್ಯರು ಏನೇನು, ಸಲಹೆಗಳನ್ನು ಕೊಟ್ಟಿದ್ದಾರೋ ಅವನ್ನೆಲ್ಲಾ ಗಮನದಲ್ಲಿಟ್ಟುಕೊಂಡು ಅದರ ಬಗ್ಗೆ ಕಾರ್ಯಗತ ಮಾಡಲು ಪ್ರಯತ್ನ ಮಾಡುತ್ತೇನೆ. ನನಗೆ ತಿಳಿದಂತೆ ಸರಿಯಾದ ಎಲ್ಲ ವಿಷಯಗಳನ್ನೂ ತಿಳಿಸಿದ್ದೇನೆ ನಾನು ಹೇಳುವಾಗ ಕೆಲವು ಮಾತುಗಳನ್ನು ಬಿರುಸಾಗಿ ಹೇಳಿದರೆ ಅದಕ್ಕಾಗಿ ತಮ್ಮ ಕ್ಷಮೆ ಕೇಳು ತ್ತೇನೆ. ನನಗೆ ತಿಳಿದಮಟ್ಟಿಗೆ ಎಲ್ಲ ವಿವರಗಳನ್ನೂ ಕೊಟ್ಟಿದ್ದೇನೆ. ನೀತಿಯುತವಾದ ಭಾಷೆಯನ್ನೇ ಬಳಸಿ ಆದಷ್ಟು ಸಮರ್ಪಕವಾಗಿ ನಮ್ಮ ಖಾತೆಯಲ್ಲಿ ಕೆಲಸ ಮಾಡುತ್ತಿದ್ದೇನೆ ಎಂದು ಹೇಳುತ್ತೇನೆ. ಇದರ ಬಗ್ಗೆ ಯಾರೂ ಹೆಚ್ಚು ವಿರೋಧ ಮಾಡಿದಂತೆ ಕಾಣಲಿಲ್ಲ, ನಾನು ಉತ್ತರ ಕೊಡುವಾಗ ಎಲ್ಲರೂ ಸಹಿಷ್ಣುತೆಯಿಂದ ಕೇಳಿ ನನಗೆ ಸಹಾಯ ಮಾಡಿದ್ದಾರೆ. ಇದರಲ್ಲಿ ನಮ್ಮ ಅಧಿಕಾರಿಗಳು ಎಲ್ಲಿಯಾದರೂ ತಕ್ಕ ಕ್ರಮ ತೆಗೆದುಕೊಳ್ಳುತ್ತಿಲ್ಲ ಎಂದು ನನ್ನ ಗಮನಕ್ಕೆ ತಂದರೆ ಅಂತಹ ಅಧಿಕಾರಿ ಗಳ ಮೇಲೆ ಉಗ್ರ ಕಾರ್ಯಕ್ರಮ ತೆಗೆದುಕೊಳ್ಳುತ್ತೇನೆ. ಇನ್ನು ಇದರ ಬಗ್ಗೆ ಹೇಳಲು ಇಷ್ಟಪಡುವುದಿಲ್ಲ.

ಟ್ರ್ಯಾಕ್ಟರುಗಳ ಹಾಗೂ ಬುಲ್‌ಡೋಜರುಗಳ ಬಗ್ಗೆ ರಾಜ್ಯದಲ್ಲಿ ಯಾರೋ ಕೆಲವರು ಕಡಿಮೆ ದರಗಳಲ್ಲಿ ಕೊಡುತ್ತಿದ್ದಾರೆಂದರು, ಇಂತಹ ಅವ್ಯವಹಾರಗಳು ಎಲ್ಲಿಯಾದರೂ ಆಗಿದೆ ಎಂದು ಸರಕಾರದ ಗಮನಕ್ಕೆ ತಂದರೆ ನಿಜವಾಗಿಯೂ ಅಂತಹವರ ಮೇಲೆ ಉಗ್ರ ಕ್ರಮ ತೆಗೆದುಕೊಳ್ಳು ತ್ತೇವೆ, ಇದರಲ್ಲಿ ನಾನ್‌ಅಗ್ರಿಕಲ್ಚರಲ್ ಪರ್ಪಸ್ ಬಗ್ಗೆ ಹೇಳುತ್ತಾ ಹಾರ್ಟಿಕಲ್ಚರು ನಮ್ಮ ಇಲಾಖೆಗೆ ಸೇರಿದ್ದೆ ಅಲ್ಲವೇ ಎಂದು ಕೇಳಿದರು, ಇದು ನಮ್ಮ ಖಾತೆಗೆ ಸೇರಿದಂತಿದೆ. ಇದರಲ್ಲಿ ನಾನ್‌ಅಗ್ರಿಕಲ್ಚರಲ್ ಪರ್ಪಸ್‌ಗಾಗಿ ಹೆಚ್ಚು ರೇಟಿನಲ್ಲಿ ಟ್ರ್ಯಾಕ್ಟರನ್ನು ಪಡೆದಿದ್ದಾರೆಂದು ತಿಳಿಸಿ ದರು. ಎಲ್ಲಿಯಾದರೂ ಅಂತಹ ನಾನ್‌ಅಗ್ರಿಕಲ್ಚರಲ್ ಪರ್ಪಸಸ್‌ಗಳಿಗಾಗಿ ತೆಗೆದುಕೊಂಡಿರು ವುದನ್ನು ನನ್ನ ಗಮನಕ್ಕೆ ತಂದರೆ ಆ ರೀತಿ ಕೊಟ್ಟಿರತಕ್ಕ ಸೂಚನೆಗಳನ್ನು ಕೂಡಲೇ ರದ್ದು ಮಾಡು ತ್ತೇನೆ. ಅಗ್ರಿಕಲ್‌ಚರಲ್ ಪರ್ಪಸಸ್‌ಗಾಗಲಿ, ಇಲ್ಲವೇ ನಾನ್‌ಅಗ್ರಿಕಲ್ಚರಲ್ ಪರ್ಪಸಸ್‌ಗಾಗಲಿ ರೇಟು ಒಂದೇ ಇದೆ. ಟ್ರ್ಯಾಕ್ಟರನ್ನು ಯಾವ ಅಧಿಕಾರಿಗಳೂ ಕೊಡಲು ಬರುವುದಿಲ್ಲ. ಹಾಗೇನಾದರೂ ಟ್ರ್ಯಾಕ್ಟರನ್ನು ನಾನ್ ಅಗ್ರಿಕಲ್ಚರಲ್ ಪರ್ಪಸಸ್‌ಗಾಗಿ ಹೆಚ್ಚು ರೇಟಿನಲ್ಲಿ ಕೊಟ್ಟಿದ್ದರೆ ಅದರ ಬಗ್ಗೆ ತುರ್ತು ಕ್ರಮ ತೆಗೆದುಕೊಳ್ಳುತ್ತೇನೆ. ಕೋಲಾರ ಜಿಲ್ಲೆಯಲ್ಲಿ ಇಂತಹ ಒಂದು ನಿರ್ಣಯವನ್ನು ತೆಗೆದುಕೊಂಡಿದ್ದಾರೆಂದು ಅಲ್ಲಿರುವ ಒಂದು ಸಂಸ್ಥೆಯ ಚೇರ್ಮನ್ನರು ಹೇಳಿದರು ಎಂದೂ ತಿಳಿಸಿ ದರು. ಇದು ಸರಿಯಲ್ಲ. ತಪ್ಪು ಅಭಿಪ್ರಾಯದಿಂದ ಇಂತಹ ವಾಕ್ಯ ಮಾಡುವುದು ಸರಿಯಲ್ಲ. ನಾನ್‌ಅಗ್ರಿಕಲ್ಚರು ಬಗ್ಗೆ ಒಂದು ರೀತಿ ನಿಯಮಗಳಿವೆ, ಅಗ್ರಿಕಲ್ಚರ್ ಬಗ್ಗೆ ನಿಯಮಗಳಿವೆ. ಇದನ್ನು ಟ್ರ್ಯಾಕ್ಟರು ಕೊಡುವಾಗ ಆಯಾ ಪ್ರದೇಶದ ಅಗ್ರಿಕಲ್ಚರಿಸ್ಟ್ಸ್ ಯಾರು ಎನ್ನುವುದನ್ನು ನೋಡಿಕೊಂಡು ಅಂತಹವರಿಗೆ ಇದನ್ನು ಉಪಯೋಗಮಾಡಲು ಒಂದೇ ರೇಟಿನಲ್ಲಿ ಕೊಡುತ್ತಾರೆ. ಇನ್ನೇನು ಹೆಚ್ಚು ಹೇಳಬಯಸುವುದಿಲ್ಲ. ಮಾನ್ಯ ಸದಸ್ಯರು ಕೇಳಿದ ಪ್ರಶ್ನೆಗಳಿಗೆಲ್ಲ ಉತ್ತರಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ಕೊಟ್ಟಿದ್ದೇನೆ.

ಇಂದು 11 ಕೋಟಿ ರೂಪಾಯಿಗಳ ಬೇಡಿಕೆಯನ್ನು ಮಂಡಿಸಿರುವುದು ಸಾಲದು ಎಂದು ಕೆಲವು ಮಾನ್ಯ ಸದಸ್ಯರು ಹೇಳಿದ್ದಾರೆ. ಇದಕ್ಕೆ 140 ಕೋಟಿ ರೂಪಾಯಿಗಳನ್ನು ಕೊಟ್ಟರೂ ಸಹ

ತೀರದು. ಇದು ಸಮುದ್ರದೋಪಾದಿಯಲ್ಲಿ ಇದೆ. ಹೆಚ್ಚು ಹಣ ಬೇಕು ನಿಜ. ಆದರೆ ಇವೊತ್ತು ಕೊಟ್ಟ 14 ಕೋಟಿ ರೂಪಾಯಿಗಳನ್ನೇ ಸದುಪಯೋಗ ಮಾಡಿಕೊಳ್ಳೋಣ. ಮತ್ತು ಕೇಂದ್ರ ಸರ್ಕಾರದಿಂದ ಹೆಚ್ಚಿನ ಹಣ ಪಡೆದು ಅವನ್ನು ಸಹ ಸದುಪಯೋಗ ಮಾಡಿಕೊಳ್ಳೋಣ. ಮತ್ತು ಕೇಂದ್ರದಿಂದ ಮಂಜೂರಾತಿಯನ್ನು ಪಡೆಯುವುದರ ಮೂಲಕ ನಮ್ಮ ರಾಜ್ಯದ ಪ್ರತಿ ಜಿಲ್ಲೆಗಳಲ್ಲಿಯೂ ಒಂದೊಂದು ಸ್ಕೀಮ್‌ಗಳನ್ನು ತೆರೆಯೋಣ ಎಂದು ಹೇಳಿ, ನನ್ನ ಬೇಡಿಕೆಗಳಿಗೆ ಎಲ್ಲರೂ ಒಪ್ಪಿಕೊಂಡು ಮಂಜೂರು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ.—ನಾನು ನಾನ್‌ಅಗ್ರಿಕಲ್ಚರಲ್ ಪರ್ಪಸಸ್‌ಗೆ ಟ್ರ್ಯಾಕ್ಟರನ್ನು ಕೊಟ್ಟ ಬಗ್ಗೆ ಆರೋಪ ಮಾಡಿದ್ದೇನೆ. ಗದಗಿನ ಟೆಕ್ಸ್‌ಟೈಲ್ ಸೊಸೈಟಿಯ ಒಂದು ಕಾರ್ಯಕ್ರಮದಲ್ಲಿ ಕೇಂದ್ರದ ಮಂತ್ರಿಗಳು ಬಂದು ಗುದ್ದಲಿ ಪೂಜೆ ಮಾಡುವ ಸಂದರ್ಭದಲ್ಲಿ ನೆಲವನ್ನು ಸರಿ ಮಾಡುವುದಕ್ಕಾಗಿ.........

ಶ್ರೀ ಕೆ. ಎಚ್. ಪಾಟೀಲ್.—ಕೇಂದ್ರದ ಮಂತ್ರಿಗಳನ್ನು ಇಲ್ಲಿ ಏತಕ್ಕೆ ತರುತ್ತೀರಾ ? ಅಲ್ಲಿ ನೆಲ ಸಮ ಮಾಡಿರುವುದೇ ಬೇರೆ ಕಡೆ, ಕೇಂದ್ರದ ಮಂತ್ರಿಗಳು ಗುದ್ದಲಿ ಪೂಜೆ ಮಾಡಿರುವುದೇ ಬೇರೆ ಕಡೆ.

ಶ್ರೀ ಎಚ್. ಡಿ. ದೇವೇಗೌಡ.—ನಾನು ಹಿಂದೆ ಒಂದು ಸಲ ವ್ಯವಸಾಯಕ್ಕಾಗಿ ಬುಲ್ಡೋಜರನ್ನು ಉಪಯೋಗ ಮಾಡಿದರೆ ಗಂಟೆಗೆ 60 ರೂಪಾಯಿಗಳಂತೆ ಚಾರ್ಜ್ ಮಾಡಿದರೆ ಅದು ಜಾಸ್ತಿಯಾಗುವುದರಿಂದ ಸಬ್ಸಿಡೈಸ್ ಮಾಡಬೇಕೆಂದು ಹೇಳಿದ್ದೆ. ಆದರೆ ನಾನ್‌ಅಗ್ರಿಕಲ್ಚರಲ್ ಪರ್ಪಸಸ್‌ಗೆ ಬುಲ್ಡೋಜರನ್ನು ಉಪಯೋಗ ಮಾಡಿದ ಬಗ್ಗೆ 22 ಸಾವಿರ ರೂಪಾಯಿಗಳನ್ನು ಒಂದು ಸೊಸೈಟಿಗೆ ಸಂಬಂಧಪಟ್ಟಂತೆ ಸಂಬಂಧಪಟ್ಟ ಅಧಿಕಾರಿಗಳು ಚಾರ್ಜ್ ಮಾಡಿದ್ದರು. ಇಂದು ವ್ಯವಸಾಯದ ಪರ್ಪಸಸ್‌ಗೆ ಉಪಯೋಗ ಮಾಡಿದರೆ ಗಂಟೆಗೆ 60 ರೂಪಾಯಿಗಳಂತೆ, ನಾನ್-ಅಗ್ರಿಕಲ್ಚರಲ್ ಪರ್ಪಸಸ್‌ಗೆ ಉಪಯೋಗ ಮಾಡಿದರೆ ಗಂಟೆಗೆ 90 ರೂಪಾಯಿಗಳಂತೆ ಚಾರ್ಜ್ ಮಾಡುವ ನಿಯಮದ. ಈ ನಿಯಮದ ಪ್ರಕಾರ ಒಂದು ಸೊಸೈಟಿಗೆ ಸೇರಿದ ಜಾಗವನ್ನು ಸಮ ಮಾಡಲು 200 ಗಂಟೆಗಳವರೆಗೆ ಬುಲ್ಡೋಜರನ್ನು ಉಪಯೋಗ ಮಾಡಿದ್ದಕ್ಕೆ 22 ಸಾವಿರ ರೂಪಾಯಿಗಳನ್ನು ಚಾರ್ಜ್ ಮಾಡಲಾಗಿತ್ತು. ಆದರೆ ಇಂದು ಬುಲ್ಡೋಜರನ್ನು ಅಗ್ರಿಕಲ್ಚರಲ್ ಪರ್ಪಸಸ್‌ಗೆ ಮತ್ತು ನಾನ್-ಅಗ್ರಿಕಲ್ಚರಲ್ ಪರ್ಪಸಸ್‌ಗೆ ಉಪಯೋಗ ಮಾಡಿದರೆ, ಎರಡಕ್ಕೂ ಸಹ ಒಂದು ಗಂಟೆಗೆ 80 ರೂಪಾಯಿಗಳಂತೆ ಚಾರ್ಜ್ ಮಾಡಬೇಕೆಂದು ಹುಕುಂ ಮಾಡಿದ್ದಾರೆ. ಈ ಹುಕುಂಅನ್ನು ಯಾವಾಗ ಮಾಡಲಾಯಿತು ಎಂಬುದನ್ನು ತಿಳಿಸಬೇಕು ? ಈ ರೀತಿ ಹುಕುಂ ಮಾಡಿರುವುದು ಆ ಸೊಸೈಟಿಗೆ ಚಾರ್ಜ್ ಮಾಡಿದ್ದ 22 ಸಾವಿರ ರೂಪಾಯಿಗಳ ರೇಟನ್ನು ಕಡಿಮೆ ಮಾಡುವ ಉದ್ದೇಶದಿಂದ ಅಲ್ಲವೇ ?

ಶ್ರೀ ಕೆ. ಎಚ್. ಪಾಟೀಲ್.—ನಾನು ಇದ್ದ ಸಂಗತಿಯನ್ನು ತಿಳಿಸಿದ್ದೇನೆ. ಮಂತ್ರಿಗಳು ಏನಾದರೂ ತಮ್ಮ ಸ್ವಂತ ಲಾಭಕ್ಕಾಗಿ ಅಧಿಕಾರವನ್ನು ದುರುಪಯೋಗ ಮಾಡಿಕೊಂಡಿದ್ದರೆ ಅಪಾದನೆ ಮಾಡಬಹುದು. ಆದರೆ ಇಲ್ಲಿ ಬುಲ್ಡೋಜರನ್ನು ಸಹಕಾರಿ ಸಂಸ್ಥೆಯ ಉಪಯೋಗಕ್ಕಾಗಿ ಕೊಟ್ಟಿರುವುದು. ಸಹಕಾರಿ ಸಂಸ್ಥೆಯೊಂದಕ್ಕೆ ಬುಲ್ಡೋಜರನ್ನು ಪುಕ್ಕಟೆಯಾಗಿ ಕೊಡಬೇಕೆಂದು ನಾನು ಆಜ್ಞೆ ಮಾಡಿದರೂ ಸಹ ಆ ಬಗ್ಗೆ ಮಾನ್ಯ ಸದಸ್ಯರಿಗೆ ಅಪಾದನೆ ಮಾಡುವುದಕ್ಕೆ ಬರುವುದಿಲ್ಲ. ಸಹಕಾರಿ ಸಂಸ್ಥೆಯ ಸೇವೆಗಾಗಿ ಇಲ್ಲಿ ಕೊಡಲಾಗಿದೆ. ಪುಕ್ಕಟೆಯಾಗಿ ಕೊಟ್ಟಿಲ್ಲ. ಚಾರ್ಜ್ ಮಾಡಿದೆ ಆದರೆ ಈ ಬಗ್ಗೆ ಚಾರ್ಜ್ ಮಾಡುವುದರಲ್ಲಿ ಅರ್ಥವಿಲ್ಲ, ಮತ್ತು ಹುರುಳಿಲ್ಲ. ಯಾರಾದರೂ ಅಧಿಕಾರಿಗಳು ನಾನ್-ಅಗ್ರಿಕಲ್ಚರಲ್ ಪರ್ಪಸಸ್‌ಗೆ ಜಾಸ್ತಿ ಮಾಡಿದ್ದರೆ ತಿಳಿಸಲಿ, ಅವರ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ.—ಪುಕ್ಕಟೆಯಾಗಿ ಒದಗಿಸಬೇಕೆಂದು ಹುಕುಂ ಮಾಡಿದರೂ ಸಹ ಅದನ್ನು ನಾವು ಕೇಳುವ ಹಾಗಿಲ್ಲ ಎಂದು ಮಾನ್ಯ ಮಂತ್ರಿಗಳು ಹೇಳಿದರು. ಆದರೆ ಇಲ್ಲಿ ನಾನ್-ಅಗ್ರಿಕಲ್ಚರಲ್ ಪರ್ಪಸಸ್‌ಗಾಗಿ ಬುಲ್ಡೋಜರನ್ನು ಉಪಯೋಗ ಮಾಡಿದ್ದಕ್ಕೆ 22 ಸಾವಿರ ರೂಪಾಯಿಗಳನ್ನು ಏನು ಚಾರ್ಜ್ ಮಾಡಲಾಗಿತ್ತು, ಅದಕ್ಕೆ ರಿಯಾಯಿತಿ ಕೊಡುವ ಸಲುವಾಗಿ ಈ ರೀತಿ ಹೊಸ ಹುಕುಂನ್ನು ಮಾಡಿ 16 ಸಾವಿರ ರೂಪಾಯಿಗಳಿಗೆ ಅದನ್ನು ಇಳಿಸಿದ್ದಾರೆ.

ಶ್ರೀ ಕೆ. ಎಚ್. ಪಾಟೀಲ್.—ರಿಯಾಯಿತಿ ಯಾರಿಗೂ ಕೊಟ್ಟಿಲ್ಲ. The Hon. Member is thoroughly mistaken. If a clerk puts a figure wrongly, can it not be corrected ?

ಶ್ರೀ ಎಚ್. ಡಿ. ದೇವೇಗೌಡ.—ಮೊದಲು ನಾನ್-ಅಗ್ರಿಕಲ್ಚರಲ್ ಪರ್ಪಸಸ್‌ಗೆ ಎಂದು ಕೊಟ್ಟು ನಂತರ ಅದನ್ನು ಅಗ್ರಿಕಲ್ಚರಲ್ ಪರ್ಪಸಸ್‌ಗೆ ಎಂದು ಪರಿವರ್ತನೆಮಾಡಿ ಹೊಸ ಹುಕುಂನ್ನು ಮಾಡಿದ್ದಾರೆ. ಮುಖ್ಯವಾಗಿ ನಾನ್-ಅಗ್ರಿಕಲ್ಚರಲ್ ಪರ್ಪಸಸ್‌ಗೆ ಉಪಯೋಗ ಮಾಡಿದರೂ ಸಹ ಅಗ್ರಿಕಲ್ಚರಲ್ ಪರ್ಪಸಸ್‌ಗೆ ಉಪಯೋಗ ಮಾಡಿದರೆ ಎಷ್ಟು ಚಾರ್ಜ್ ಮಾಡಲಾಗುತ್ತದೋ ಅಷ್ಟೇ ಚಾರ್ಜ್ ಮಾಡಬೇಕೆಂದು ಯಾವಾಗ ಹುಕುಂ ಮಾಡಲಾಯಿತು ಎಂಬುದನ್ನು ತಿಳಿಸಬೇಕು. ಇದೇ ಮಾನ್ಯ ಮಂತ್ರಿಗಳು ಹಿಂದೆ 80 ರೂಪಾಯಿಗಳ ಸಂಬಳಕ್ಕೆ ಇದ್ದು ಇಂದು 8 ಲಕ್ಷ ರೂಪಾಯಿಗಳ ಆಸ್ತಿ ಮಾಡಿದ್ದಾರೆಂದು ನಾನು ನನ್ನ ಭಾಷಣದಲ್ಲಿ ಹೇಳಿದ್ದಕ್ಕೆ ಮಾನ್ಯ ಮಂತ್ರಿಗಳು ಉತ್ತರ ಕೊಡುತ್ತಾ, ನಾನು ದೊಡ್ಡ ವಂಶದವನು, ದುಡಿದು ಹಣ ಸಂಪಾದನೆ ಮಾಡಿದ್ದೇನೆ, ಆದರೆ ಇಂದು ನನ್ನ ಕೀರ್ತಿಗೆ ಕಳಂಕ ತರಲು ಪ್ರಯತ್ನ ಮಾಡುತ್ತಿದ್ದಾರೆಂದು ಹೇಳಿದರು. ಆದರೆ ನಾನು ಅಂತಹ ಪಾಪದ ಕೆಲಸ ಮಾಡುವುದಕ್ಕೆ ಹೋಗುವುದಿಲ್ಲ. ಇಂದು ಆಸ್ತಿ ಜಾಸ್ತಿ ಇದ್ದರೆ ಅದು ನನ್ನ ಹೆಂಡತಿ ಮಕ್ಕಳಿಗೆ ಸೇರಿದ್ದು ಎಂದು ಹೇಳಿಕೊಳ್ಳುವುದು ಇಂದಿನ ಸಂಪ್ರದಾಯವಾಗಿಬಿಟ್ಟಿದೆ. ನೀತಿವಂತ ಮತ್ತು ಕೀರ್ತಿವಂತ ರಾಜಕಾರಿಣಿಯು ಬಗ್ಗೆ ಅಗೌರವದ ಮಾತನ್ನು ಆಡುವುದು ಯಾವ ರಾಜಕಾರಿಣಿಗೂ ಒಳ್ಳೆಯದಲ್ಲ, ಅಂತಹ ಪಾಪದ ಕೆಲಸ ಮಾಡುವುದು ನನಗೆ ಯೋಗ್ಯವೂ ಅಲ್ಲ. ಆದರೆ ಇಂದು ಮಂತ್ರಿಗಳು ತಮ್ಮ ಆಸ್ತಿಯ ವಿವರಗಳನ್ನು ಕೊಟ್ಟಿರುವಂತೆ, ಅದನ್ನು ಶಾಸಕರಿಗೂ ಸಹ ಅನ್ವಯ ಮಾಡಬೇಕು ಮತ್ತು ಈಗ ಮಂತ್ರಿಗಳು ಕೊಟ್ಟಿರುವ ಆಸ್ತಿಯ ವಿವರ ಏನಿದೆ ಅದರ ಬಗ್ಗೆ ವಿಚಾರಣೆ ಯಾಗಬೇಕಾಗಿದೆ. ಯೋಗ್ಯತೆ ಇಲ್ಲದವರು ಇದರ ಬಗ್ಗೆ ಅಪಾದನೆ ಮಾಡುವುದು ಯುಕ್ತವಲ್ಲ ಎಂದ ಮೇಲೆ ಬೇರೆಯವರ ಮೂಲಕವಾದರೂ ವಿಚಾರಣೆಯಾಗಲಿ. ಏಕೆಂದರೆ ಶ್ರೀಮಾನ್ ಬದರಿನಾರಾಯಣ್ ಅವರು ತಮ್ಮಲ್ಲಿ 5 ಸಾವಿರ ರೂಪಾಯಿಗಳ ಒಡವೆ ಇದೆ ಎಂದು ಲೆಕ್ಕ ಕೊಟ್ಟಿದ್ದಾರೆ. ಅದು ಸರಿಯೇ ತಪ್ಪೇ ಎಂದು ಗೊತ್ತಾಗಬೇಕಾಗಿದೆ. ವಜ್ರದ ಓಲೆ ಮಾಡಿಸಿದರೆ ಅದರ ಬೆಲೆ ಐದರಿಂದ ಹತ್ತು ಲಕ್ಷ ರೂಪಾಯಿ ಆಗುತ್ತದೆಂದು ಹೇಳುತ್ತಾರೆ. ಮಾನ್ಯ ಮಂತ್ರಿಗಳು ಅಯ್ಯಂಗಾರ್. ಅವರ ಮನೆಯಲ್ಲಿ ವಜ್ರದ ಒಡವೆಗಳು ಸಾಮಾನ್ಯವಾಗಿ ಇರುತ್ತವೆ.

ಶ್ರೀ ಎ. ಆರ್. ಬದರೀನಾರಾಯಣ (ವಿದ್ಯಾಶಾಖೆಯ ಮಂತ್ರಿಗಳು).—ಮಾರ್ಕೆಟ್ ರೇಟನ್ನು ಹೇಳಬೇಕೋ ಅಥವಾ ಹಿಂದೆ ನಾನು ಕೊಂಡ ರೇಟನ್ನು ಹೇಳಬೇಕೋ ?

ಶ್ರೀ ಎಚ್. ಡಿ. ದೇವೇಗೌಡ.—ಇಂದು ಅಯ್ಯಂಗಾರ್ ಅವರ ಮನೆಗಳಲ್ಲಿ ವಜ್ರದ ಉಂಗುರ ಮತ್ತು ವಜ್ರದ ಓಲೆ ಇರುವುದು ಪ್ರತೀತಿ. ನಮ್ಮದು ಶ್ರೀಮಂತರ ಪಾರ್ಟಿ ಎಂದು ಎಲ್ಲರೂ ಹೇಳುತ್ತಾರೆ. ನಾನು ನನ್ನ ಲೆಕ್ಕವನ್ನು ಮುಚ್ಚುವುದಕ್ಕೆ ಹೊರಟಿದ್ದೇನೆಂದು ಮಾನ್ಯ ಮಂತ್ರಿಗಳು ಉತ್ತರ ಕೊಡುವಾಗ ಹೇಳಿದರು.

ಅಧ್ಯಕ್ಷರು.—ಅವರು ಆರೀತಿಹೇಳಲಿಲ್ಲ. ನನ್ನದು ಮುಚ್ಚಿಟ್ಟ ಲೆಕ್ಕವಲ್ಲ ಎಂದು ಅವರುಹೇಳಿದರು.

ಶ್ರೀ ಎಚ್. ಡಿ. ದೇವೇಗೌಡ.—ಅವರನ್ನು ಮುಚ್ಚಿಟ್ಟ ಲೆಕ್ಕವಲ್ಲ, ತೆರೆದ ಲೆಕ್ಕವೇ ಆಗಿದೆ.

ಶ್ರೀ ಎಂ. ಎಸ್. ಕೃಷ್ಣನ್.—ನನ್ನದು ನಿಮ್ಮ ಹಾಗೆ ಮುಚ್ಚಿಟ್ಟ ಲೆಕ್ಕವಲ್ಲ ಎಂದು ಮಾನ್ಯ ಮಂತ್ರಿಗಳು ಶ್ರೀ ದೇವೇಗೌಡರಿಗೆ ಹೇಳಿದ್ದು.

ಶ್ರೀ ಎಚ್. ಡಿ. ದೇವೇಗೌಡ.—ನನ್ನದು ಮುಚ್ಚಿಟ್ಟ ಲೆಕ್ಕವಾಗಿದ್ದರೆ ಅದು ತನಿಖೆಯಾಗಲಿ. ಸರ್ಕಾರದವರ ಹತ್ತಿರ ಸಿ.ಐ.ಡಿ. ಇಲಾಖೆ ಇದೆ, ಅವರಿಂದ ತನಿಖೆ ಮಾಡಿಸಲಿ. ನಾನೇನಾದರು ಒಂದೂವರೆ ಲಕ್ಷ ರೂಪಾಯಿಗಳ ಆಸ್ತಿಯನ್ನು 20 ಸಾವಿರ ರೂಪಾಯಿಗಳಿಗೆ ಬರೆಸಿಕೊಂಡಿದ್ದರೆ ಆ ಬಗ್ಗೆ ತನಿಖೆ ಮಾಡಿಸಲಿ.

ಶ್ರೀ ವಾಟಾಳ್ ನಾಗರಾಜ್.—ಇದರ ಬಗ್ಗೆ ನ್ಯಾಯಾಂಗ ತನಿಖೆಯಾಗಲೇಬೇಕು. ಈಗ ಮಂತ್ರಿ ಮಂಡಲದವರು ತಮ್ಮ ಆಸ್ತಿಯ ಬಗ್ಗೆ ಏನು ಅಂಕಿಅಂಶಗಳನ್ನು ಕೊಟ್ಟಿದ್ದಾರೆ, ಅವರ ಬಗ್ಗೆ ಒಂದೆರಡು ದಿವಸಗಳವರೆಗೆ ಚರ್ಚೆ ಮಾಡಲು ಅವಕಾಶ ಮಾಡಿಕೊಡಬೇಕು. ಶ್ರೀಮಾನ್ ಕೆ. ಎಚ್. ಪಾಟೀಲ್ ಅವರು ತಮ್ಮ ಹತ್ತಿರ 8 ಲಕ್ಷ ರೂಪಾಯಿಗಳ ಆಸ್ತಿ ಇವೆ ಎಂದು ಹೇಳಿದ್ದಾರೆ ಇದನ್ನು ಬಿಟ್ಟು ಇನ್ನೇನು ಆಸ್ತಿ ಇದೆ ಎಂಬ ಬಗ್ಗೆ ನಿವೃತ್ತ ಹೈಕೋರ್ಟ್ ನ್ಯಾಯಾಧೀಶರಿಂದ ತನಿಖೆ ಮಾಡಿಸಬೇಕು. ಇಂದು ಮಂತ್ರಿಗಳು ತಮ್ಮ ಆಸ್ತಿಯ ಬಗ್ಗೆ ವಿವರಗಳನ್ನು ಸತ್ಯವನ್ನು ಮರೆಮಾಚಿ ಕೊಟ್ಟಿದ್ದಾರೆ. ಆದ್ದರಿಂದ ಈ ಬಗ್ಗೆ ನ್ಯಾಯಾಂಗ ತನಿಖೆಯಾಗಲೇಬೇಕು.

ಅಧ್ಯಕ್ಷರು.—ತಾವು ದಯಮಾಡಿ ಕುಳಿತುಕೊಳ್ಳಬೇಕು. ನಮ್ಮ ಡೆಪ್ಯೂಟಿ ಲೀಡರ್ ಅವರು ಹೇಳಿದ ಹಾಗೆ ಇದಕ್ಕೆಲ್ಲಾ ವಿಧಿನಿಯಮಗಳಿವೆ.

ಶ್ರೀ ವಾಟಾಳ್ ನಾಗರಾಜ್.—ವಿಧಿನಿಯಮಗಳ ಪ್ರಕಾರ ಅವರು ತಮ್ಮ ಆಸ್ತಿಯ ಬಗ್ಗೆ ವಿವರಗಳನ್ನು ಕೊಟ್ಟಿಲ್ಲ. ಅವರು ಕೊಟ್ಟಿರುವ ವಿವರಗಳು ಸತ್ಯಕ್ಕೆ ದೂರವಾಗಿದೆ. 1947ರ ಹಿಂದೆ ಯಾವ ಯಾವ ಮಂತ್ರಿಗಳಿಗೆ ಎಷ್ಟೆಷ್ಟು ಆಸ್ತಿ ಇತ್ತು, ಇಂದು ಎಷ್ಟು ಇದೆ ಎಂಬ ಬಗ್ಗೆ ತನಿಖೆ ಯಾಗಲೇಬೇಕು. ಮತ್ತು ಅವರ ಬಗ್ಗೆ ಇಲ್ಲಿ ಚರ್ಚೆ ಮಾಡುವುದಕ್ಕೆ ಒಂದು ದಿನದ ಅವಕಾಶ ಮಾಡಿ ಕೊಡಬೇಕು. ಹಿಂದೆ 12 ಆಣೆ ಬನೀನೂ ಸಹ ಇಲ್ಲದವರು ಇಂದು ಮಂತ್ರಿಗಳಾಗಿದ್ದಾರೆ. ಮತ್ತು ಶ್ರೀಮಂತ ಮಂತ್ರಿಗಳಾಗಿಬಿಟ್ಟಿದ್ದಾರೆ. ಇವರು ಯಾವರೀತಿ ಆಸ್ತಿ ಮಾಡಿದ್ದಾರೆಂಬುದು ದೇಶದ ಜನರಿಗೆ ಗೊತ್ತಾಗಬೇಕು. ಆದ್ದರಿಂದ.........***

ಅಧ್ಯಕ್ಷರು.—ಅದನ್ನು ರೆಕಾರ್ಡ್ ಮಾಡಬೇಡಿ.

5-00 P.M.

Sri K. H. PATIL.—Madam Speaker, the hon. member has the right to condemn or criticise or charge sheet ministers. But how can he go back to my history, my father's history or grand father's history? What right has he? Let him bring a resolution.

Sri H. D. DEVE GOWDA.—If a judicial enquiry is to be conducted......

ಅಧ್ಯಕ್ಷರು.—ಒಂದು ಮೋಷನ್ ತೆಗೆದುಕೊಂಡು ಬನ್ನಿ.

Sri K. H. PATIL.—If he wants to charge sheet me as Minister, he is welcome and rules provide for it.

Sri M. S. KRISHNAN.—Why should the hon. Minister get so much upset? He did say that "so far as my property is concerned I am prepared to allow Sri Deve gowda to enquire into it". When he has permitted Sri Deve gowda why not have a judicial probe into it not only in regard to this minister but all ministers?

Sri H. M. CHANNABASAPPA.—I rise a point of order. It would be in the fitness of things and within the scope of the rules to discuss any matter that comes within the purview of the omissions and commissions of Government and members of the Government. But it would not be in the fitness of things to discuss anything which is outside the scope of the Government or members of the Government. There are other forums for them to utilise for that purpose. I submit that any act of omission or commission of a member of the Government is a matter which is for discussion and it is open to the members to comment. But I have been seeing that some of the hon. members are discussing things which do not come within the purview of omissions and commissions of a member of the Government and it would not be in order to allow such things.

Sri M. S. KRISHNAN.—Madam Speaker, we are not discussing things which are irrelevant. Actually the discussion started when the Leader of the Opposition made certain serious allegations and mentioned about the property of the hon. minister Sri K. H. Patil, It has been answered also. Under the circumstances, we are within the scope to say how he is trying to save the ill-gotten wealth, etc., and there is doubt about that and when he accepts some probe why not have a judicial probe., etc. It is not irrelevant.

***Matter not recorded as ordered by the Chair.

MADAM SPEAKER.—I have heard the hon. Minister's point of order. What he has said is correct. If the hon. Members are keen they can bring in a resolution and discuss things. Let me put the Demands to the Vote of the House. The question is :

"That respective sums not exceeding the amounts mentioned in Demand Nos. 20, 38 and 51, inclusive of the sum granted 'on account' be granted to Government to defray the changes which will come in course of payment during the financial year ending 31st day of March 1974."

The Motion was adopted and demands were voted

As directed by the Chair the motion for Demands for Grants, adopted by the House, are reproduced below:

DEMAND NO. 20.—AGRICULTURE AND HORTICULTURE (EXCLUDING FISHERIES)

31. Agriculture

"That a sum not exceeding Rs. 14,93,52,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1974, in respect of 'Agriculture and Horticulture (excluding Fisheries)'."

DEMAND NO. 38.—FOREST

70. Forest.

"That a sum not exceeding Rs. 10,50,97,000, inclusive of the sum granted 'on account' be granted to the Government to Defray the charges which will come in course of payment during the financial year ending 31st day of March 1974, in respect of 'Forests'."

DEMAND NO. 51.—CAPITAL OUTLAY ON FORESTS

119. Capital Outlay on Forests.

"That a sum not exceeding Rs. 22,00,000, inclusive of the sum granted 'on account' be granted to the Government to defray the charges which will come in course of payment during the financial year ending 31st day of March 1974, in respect of 'Capital "Outlay on Forests'."

Demand Nos. 20A and 22

Sri K. T. RATHOD (Minister of State for Fisheries).—Madam Speaker, on the recommendation of the Governor, I beg to move:—

"That a sum not exceeding Rs. 1,15,31,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1974, in respect of Demand No. 20A 'Fisheries'."

Sri N. CHIKKE GOWDA (Minister of State for Animal Husbandry).—Madam Speaker, on the recommendation of the Governor, I beg to move:

"That a sum not exceeding Rs. 3,12.09,000 inclusive of the sum granted 'on account' be granted to the Government to defray the charges which will come in course of payment during the financial year ending 31st day March 1974, in respect of Demand No. 22 'Animal Husbandry'."

MADAM SPEAKER.—Motion Moved :

"That a sum not exceeding Rs. 1,15,31,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1974, in respect of Demand No. 20A. 'Fisheries'."

The other Demand also is before the House.

Properties owned by Ministers

Sri C. M. ARUMUGHAM—Madam Speaker, Mr. K. H. Patil is here and you may allow me to say something......

MADAM SPEAKER.—No. I cannot allow it. The hon. member may bring it in some other form.

ಶ್ರೀ ವಾಟಾಳ್ ನಾಗರಾಜ್.—ಇದು ಬಹಳ ಪ್ರಾಮುಖ್ಯವಾದಂಥ ಪ್ರಶ್ನೆ. ಇದು ಇಡೀ ರಾಜ್ಯದ ಪ್ರಶ್ನೆ. ಮಂತ್ರಿಮಂಡಲ ಕೊಟ್ಟಿರತಕ್ಕ ಆಂಕಿಅಂಶ ಸರಿಯೋ ತಪ್ಪೋ ಎನ್ನುವುದನ್ನು ಇಡೀ ರಾಜ್ಯದ ಜನತೆ ನೋಡುತ್ತಿದೆ. ಆದ್ದರಿಂದ ಇದರ ಬಗ್ಗೆ ಜುಡಿಷಿಯಲ್ ಎನ್‌ಕ್ವೈರಿಯಾಗಬೇಕು.

ಅಧ್ಯಕ್ಷರು.—ತಮಗೆ ಈ ಡಿಮ್ಯಾಂಡ್ ಮೇಲೆ ಚರ್ಚೆ ಮಾಡುವುದಕ್ಕೆ ಇಷ್ಟವಿಲ್ಲದಿದ್ದರೆ, ನಾನು ಇದನ್ನು ಓಟಿಗೆ ಹಾಕಬೇಕಾಗುತ್ತದೆ.

ಶ್ರೀ ಎಚ್. ಡಿ. ದೇವೇಗೌಡ.—ಇವತ್ತು ನೀವು ಬಹಳ ಕೋಪ ಮಾಡಿಕೊಂಡಿದ್ದೀರಿ. ತಾವೇ ಕೆಲವಾರು ಅವ್ಯವಹಾರಗಳಿಗೆ ಮಂತ್ರಿಗಳಿಗೆ ಅವಕಾಶ ಕೊಡುತ್ತೀರಿ ಎಂದು ದೇಶದ ಜನತೆ ನಿಮ್ಮ ಬಗ್ಗೆ ತಮ್ಮ ಅಭಿಪ್ರಾಯವನ್ನು ಇಟ್ಟುಕೊಳ್ಳುತ್ತಾರೆ.